ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ, ತಾವು ಉತ್ತರವನ್ನು ಪ್ರಾರಂಭ ಮಾಡಿ.

8. 2008–09ನೇ ಸಾಲಿನ ಆಯವ್ಯಯ ಮತ್ತು ಅನುದಾನ ಬೇಡಿಕೆಗಳ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಸನ್ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಮುಂಗಡ ಪತ್ರದ ಮೇಲೆ ವ್ಯಾಪಕವಾದಂಥ ಚರ್ಚೆಯಾಗಿದೆ. ಚರ್ಚೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು, ಉಪನಾಯಕರಾದಂಥ ಮಾನ್ಯ ಜಯಚಂದ್ರರವರು ಅನೇಕ ಬಾರಿ ಆಯವ್ಯಯವನ್ನು ಮಂಡನೆ ಮಾಡಿ ಅನುಭವವುಳ್ಳ ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಶ್ರೀನಿವಾಸ ಪ್ರಸಾದ್‌ರವರು, ಶ್ರೀ ಯು.ಟಿ. ಖಾದರ್‌ರವರು, ಶ್ರೀ ವಿ. ಮುನಿಯಪ್ಪನವರು, ಮಾನ್ಯ ಸೋಮಣ್ಣನವರು, ಶ್ರೀ ಸಿದ್ದು ಸವದಿಯವರು, ಶ್ರೀ ಶ್ಯಾಮನೂರು ಶಿವಶಂಕರಪ್ಪನವರು, ಶ್ರೀ ಕೆ.ಎಂ. ಶಿವಲಿಂಗೇಗೌಡರು, ಶ್ರೀ ಹೆಚ್.ಡಿ. ರೇವಣ್ಣನವರು, ಶ್ರೀ ಎನ್.ಎ.ಪಾಟೀಲರು, ಶ್ರೀ ಸುಧಾಕರ್‌ರವರು, ಶ್ರೀ ಸಿ.ಟಿ. ರವಿಯವರು, ಶ್ರೀ ಹೆಚ್.ಸಿ.ಬಾಲಕೃಷ್ಣರವರು, ಶ್ರೀ ಹೆಚ್.ಎಸ್. ಮಹದೇವ್‌ಪ್ರಸಾದ್‌ರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಹಾಗೂ ಈ ದಿನ ಮಾನ್ಯ ಧ್ರುವನಾರಾಯಣ್‌ರವರು, ಶ್ರೀ ತುಕಾರಾಮ್‌ರವರು, ಶ್ರೀ ಪುಟ್ಟೇಗೌಡರು, ಶ್ರೀ ಬಿ.ಸಿ.ಪಾಟೀಲರು, ಶ್ರೀ ಕಿಮ್ಮನೆ ರತ್ನಾಕರ್‌ರವರು, ಶ್ರೀ ಕರಡಿ ಸಂಗಣ್ಣನವರು, ಶ್ರೀ ಪಿ.ಎಂ. ಅಶೋಕ್‌ರವರು, ಶ್ರೀ ಶರಣ ಪ್ರಕಾಶ್ ಪಾಟೀಲರು, ಶ್ರೀ ಎನ್.ಎ. ಹ್ಯಾರಿಸ್‌ರವರು ಹೀಗೆ ಅನೇಕ ಜನ ಹಿರಿಯ ಸದಸ್ಯರು ಚರ್ಚೆಯ ಕಾಲದಲ್ಲಿ ಸಹಜವಾಗಿ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ, ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ನನಗೆ ಬೆನ್ನುತಟ್ಟಿ ಒಳ್ಳೆಯ ಆಯವ್ಯಯವನ್ನು ಮಂಡನೆ ಮಾಡಿದ್ದೀರಿ ಎಂದು ಮೆಚ್ಚುಗೆಯನ್ನು ಸಹ ವ್ಯಕ್ತಪಡಿಸಿದ್ದಾರೆ. ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಮಂಡನೆ ಮಾಡಿದಂಥ ಮೊದಲನೆಯ ಬಜೆಟ್ ಇದಾಗಿದೆ. ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವನಾಗಿ ಎರಡು ಬಾರಿ ನಾನು ಬಜೆಟ್‌ನ್ನು ಮಂಡಿಸಿದ್ದು ಒಟ್ಟಾರೆ ಇದು ನನ್ನ ಮೂರನೇ ಬಜೆಟ್. ಅಭಿವೃದ್ಧಿ ಕೇಂದ್ರಿತ ರೈತಪರ ಹಾಗೂ ಜನಪರವಾದಂಥ ಈ ಮೂರು ಬಜೆಟ್‌ಗಳನ್ನು ಮಂಡನೆ ಮಾಡಿದಾಗ ಮಾಧ್ಯಮದಲ್ಲಿ ಈ ನಾಡಿನ ಅಭಿವೃದ್ಧಿ ಬಗ್ಗೆ ಕಳಕಳಿ ಇರುವ ಅನೇಕ ಚಿಂತಕರು ಇದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಈ ಆಯವ್ಯಯದಲ್ಲಿ ಹೇಳಿರುವ ಸಂಗತಿಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಮಯ

ಬಹಳ ಕಡಿಮೆ ಇದೆ. ನಿಮ್ಮೆಲ್ಲರ ಸಹಕಾರದಿಂದ ನಾನು ಈಗಾಗಲೇ ತತ್‌ಕ್ಷಣ ಸಂಬಂಧಪಟ್ಟ ಎಲ್ಲಾ ಉನ್ನತಾಧಿಕಾರಿಗಳು. ಜಿಲ್ಲಾಧಿಕಾರಿಗಳು, ಸಿ.ಇ.ಒ.ಗಳ ಮತ್ತು ಇತರೆ ಪ್ರಮುಖ ಅಧಿಕಾರಿಗಳ ಸಭೆಯನ್ನು ಕರೆಯುತ್ತಿದ್ದೇನೆ. ಇದನ್ನು ಜಾರಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇನೆ. ನನ್ನ ಮೊದಲ ಮುಂಗಡ ಪತ್ರವನ್ನು ನಾನು ಮಂಡನೆ ಮಾಡಿದಾಗ ನಾನು ಒಂದು ಮಾತನ್ನು ಹೇಳಿದ್ದೆ. "ನಾವು ಎಳೆಯರು, ನಾವು ಗೆಳೆಯರು, ಹೃದಯ ಹೂವಿನ ಹಂದರ, ನಾಳೆ ನಾವೇ ನಾಡ ಹಿರಿಯರು, ನಮ್ಮ ಕನಸದು ಸುಂದರ" ಎಂದು ನಿವೇದಿಸಿಕೊಂಡಂಥದ್ದು ಇಂದು ನಿಜವಾಗುತ್ತಿರುವಂಥದ್ದು. ನನ್ನ ದೃಷ್ಟಿಯಿಂದ ಈ ನಾಡಿನ ಐದೂವರೆ ಕೋಟಿ ಜನರ ಮೆಚ್ಚುಗೆಗೆ ಪಾತ್ರರಾಗಿ ಇವತ್ತು ಅನೇಕ ಹಿರಿಯರು ಕುಳಿತ ಈ ಸ್ಥಳದಲ್ಲಿ ಕುಳಿತು ಕೆಲಸ ಮಾಡುವಂಥ ಸೌಭಾಗ್ಯ, ಈ ನಾಡಿನ ಜನ ಮತ್ತು ಭಗವಂತ ಒದಗಿಸಿಕೊಟ್ಟಿದ್ದಾರೆ. ಅದಕ್ಕೆ ನಾನು ಋಣಿಯಾಗಿದ್ದೇನೆ. ಈ ಹಿಂದಿನ ಎರಡು ಮುಂಗಡ ಪತ್ರಗಳಿಗೂ ಈ ಬಾರಿಯ ಮುಂಗಡ ಪತ್ರಕ್ಕೂ ಸಾಕಷ್ಟು ಭಿನ್ನತೆ ಇದೆ. ಏಕೆಂದರೆ, ಇದು ನನ್ನ ಅನುಭವ, ಕಲ್ಪನೆ ನನ್ನದೇ ಆದ ದೂರದೃಷ್ಟಿ ಮತ್ತು ಅನೇಕ ಹಿರಿಯರ ಮಾರ್ಗದರ್ಶನದ ಮೇಲೆ ಈ ಆಯವ್ಯಯವನ್ನು ಮಂಡನೆ ಮಾಡಿದ್ದೇನೆ. ನಾನು ಬಹಳ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಇದು ಮಾನ್ಯ ಸಿದ್ಧರಾಮಯ್ಯನವರಿಗೂ ಗೊತ್ತಿದೆ. ನಾನು ಅರ್ಥಶಾಸ್ತ್ರಜ್ಞನೂ ಅಲ್ಲ. ಕೋಶ ಬಹಳಷ್ಟು ತಿಳಿದವನೂ ಅಲ್ಲ. ಮುಂಗಡ ಪತ್ರ ರಚಿಸುವಾಗ ಕಂಡದ್ದು ಸಮನ್ವಯ ಬದುಕಿನ ಒಂದು ಚಿತ್ರಣವನ್ನು ನನ್ನ ಕಣ್ಣುಮುಂದೆ ಇಟ್ಟುಕೊಂಡು ಜಾತಿ, ಮತ, ಮೇಲು, ಕೀಳು, ಲಿಂಗ ವ್ಯತ್ಯಾಸ ಇದು ಯಾವುದಕ್ಕೂ ಅವಕಾಶ ಮಾಡಿಕೊಡದೆಯೇ, ಈ ಸರ್ವೋದಯದ ಪರಿಕಲ್ಪನೆಯ ಆಧಾರದ ಮೇಲೆ ರೂಪಿಸಿದಂಥ ಯೋಜನೆಗಳು ಜನರ ಮೆಚ್ಚುಗೆಗೆ ಪಾತ್ರವಾಗಿದೆಯೆಂದು ನಾನು ಭಾವಿಸಿದ್ದೇನೆ. ಬಹುಶಃ ಈ ಹಿಂದೆ ಯಾವುದೇ ಮುಖ್ಯಮಂತ್ರಿಗೆ ಈ ರೀತಿ ಅಗ್ನಿ, ಸತ್ವ ಪರೀಕ್ಷೆ ಇಷ್ಟು ಕಡಿಮೆ ಅವಧಿಯಲ್ಲಿ ಆಗಿರಲಿಲ್ಲ. ನಿರೀಕ್ಷೆ ಮೀರಿದ ಘಟನೆಗಳು ಜರುಗಿದಾಗಲೂ ಕೂಡ ಜನರು ನಮ್ಮನ್ನು ಸಾಕಿದ್ದಾರೆ, ಸಲಹಿದ್ದಾರೆ. ಸಾಂತ್ವನ ಹೇಳಿದ್ದಾರೆ.ಇದೆಲ್ಲದರ ಋಣ ತೀರಿಸುವ ಜವಾಬ್ದಾರಿ ನನ್ನ ಮೇಲಿದೆ. ಆ ಹಿನ್ನೆಲೆಯಲ್ಲಿ ಈ ಮುಂಗಡ ಪತ್ರವನ್ನು ಮಂಡಿಸಿದ್ದೇನೆ. ನನ್ನ ಮನಸ್ಸಿನಲ್ಲಿ ಸರ್ವಾಧಿಕಾರಿ ಇಲ್ಲವೇ ಏಕಚಕ್ರಾಧಿಪತ್ಯದ ಠೇಂಕಾರ ಇಲ್ಲ. ಅದು ಜನತಂತ್ರಕ್ಕೆ ಹೊಂದುವುದಿಲ್ಲವೆಂಬ ಅರಿವು ನನಗಿದೆ. ಠೇಂಕಾರದ ಜಾಗದಲ್ಲಿ ಹೃದಯದಿಂದ ಮೂಡುವಂತಹ ಮಮಕಾರ ಜನತಂತ್ರದ ಉಸಿರು ಎನ್ನುವಂತಹ ಸ್ಪಷ್ಟವಾದ ಮನವರಿಕೆ, ಅರಿವು ಇರುವಂತಹ ವ್ಯಕ್ತಿ ನಾನು.

ಅಭಿಪ್ರಾಯಬೇಧ ಜನತಂತ್ರದ ಉಸಿರು. ಹೀಗಿದ್ದಾಗ ಟೀಕೆ–ಟಿಪ್ಪಣಿಗಳು ಸಹಜವಾಗಿರುತ್ತದೆ. ಆದರೆ, ಮುಂಗಡ ಪತ್ರದಲ್ಲಿ ಇಲ್ಲದ ಗುಮಾನಿ ಕಾಣುವುದಕ್ಕೆ ಕೆಲವರು ಪ್ರಯತ್ನ ಮಾಡಿದ್ದಾರೆ. ಒಳ್ಳೆಯ ಯೋಜನೆಗಳಿಗೆ ಕೆಟ್ಟ ಯೋಜನೆಗಳನ್ನು ಗುರ್ತಿಸಿದವರೂ ಇದ್ದಾರೆ. ಆದರೆ, ಅವರೆಲ್ಲರಿಗೂ ನಾನು ಶುಭ ಕೋರುತ್ತೇನೆ. ಅರ್ಥಶಾಸ್ತ್ರಗಳು ಎಂದಿಗೂ ಪರಿಪೂರ್ಣವಲ್ಲ ಎನ್ನುವಂಥಾದ್ದು ನನಗೆ ಗೊತ್ತಿದೆ.

"ದೀಪವು ನಿನ್ನದೆ
ಗಾಳಿಯೂ ನಿನ್ನದೆ
ಆರದಿರಲಿ ಬೆಳಕು"

ಎನ್ನುವಂತಹ ಕೆ.ಎಸ್.ನರಸಿಂಹಸ್ವಾಮಿಯವರ ಕವನದ ಸಾಲು ಈ ಮನೋಧರ್ಮಕ್ಕೆ ಎಷ್ಟೊಂದು ಸಮಂಜಸವಾಗಿದೆ ಎನ್ನುವುದು ನನಗೆ ಗೊತ್ತಿದೆ.

ಸತ್ಯದ ಮಾರ್ಗವನ್ನು ಅರಿತುಕೊಳ್ಳುವುದು ಬಹಳ ಕಷ್ಟದ ಕೆಲಸವೇನಲ್ಲ. ಸತ್ಯವೆಂದು ಗೊತ್ತಿದ್ದರೂ ಅದರಲ್ಲಿ ಹುಳುಕು ಹುಡುಕುವಂತಹ ಪ್ರಯತ್ನ ಮಾಡಿದರೆ ಅದನ್ನು ಜನರು ಮೆಚ್ಚುವುದಿಲ್ಲವೆಂದು ಸ್ವಾತಂತ್ರ್ಯ ಬಂದ 60 ವರ್ಷಗಳಲ್ಲಿ ನಮ್ಮೆಲ್ಲರ ಅನುಭವಕ್ಕೂ ಬಂದಿದೆ. ನಾನು ಈ ಬಾರಿ ನನ್ನ ಬಜೆಟ್‌ನಲ್ಲಿ ನನ್ನ ಮುಂದಿರುವಂತಹ ನನ್ನ ಆಲೋಚನೆಗಳು, ಕನಸುಗಳು, ನಿಮ್ಮೆಲ್ಲರ ಸಹಕಾರದಿಂದ ನಾಡಿನ ಐದೂವರೆ ಕೋಟಿ ಜನರು ನೆಮ್ಮದಿಯಿಂದ, ಗೌರವದಿಂದ, ಸ್ವಾಭಿಮಾನದಿಂದ ಬಾಳಿ ಬದುಕುವುದಕ್ಕೆ ಏನೇನು ಮಾಡಬೇಕೆಂಬ ದಿಕ್ಕಿನಲ್ಲಿ ನಾಲ್ಕು ಹೆಜ್ಜೆಗಳನ್ನಿಡುವ ಪ್ರಯತ್ನ ಮಾಡಿದ್ದೇನೆ.

ಒಂದು ನನ್ನನ್ನು ಕಾಡುತ್ತಿರುವಂಥಾದ್ದು ಏನೆಂದರೆ, ನಮ್ಮ ಈ ಶಾಂತಿಪ್ರಿಯ ನಾಡಿನಲ್ಲಿ ಸಂಭವಿಸಿದಂತಹ ಈ ಸ್ಫೋಟಗಳ ಘಟನೆ ವೈಯಕ್ತಿಕವಾಗಿ ನನಗೆ ಮತ್ತು ಇಲ್ಲಿ ಕುಳಿತಿರುವಂತಹ ಪ್ರತಿಯೊಬ್ಬ ಸದಸ್ಯರಿಗೂ ಯಾವ ರೀತಿ ನೋವು, ಆಘಾತ ಉಂಟು ಮಾಡಿದೆ ಎನ್ನುವುದು ಅರ್ಥವಾಗುತ್ತದೆ. ಶಾಲೆಗೆ ಹೋಗುವಂತಹ ಒಂದು ಮಗು ತನ್ನ ತಾತನ ಕೈ ಹಿಡಿದುಕೊಂಡು "ತಾತ, ಬೇಗ ಮನೆಗೆ ಹೋಗೋಣ, ಬಾಂಬ್ ಹಾಕುತ್ತಾರಂತೆ" ಎಂದು ಮಗು ಹೇಳುವಂತಹ ಪರಿಸ್ಥಿತಿ. ಅದನ್ನು ಓದಿ, ಕೇಳಿ ನಿಜಕ್ಕೂ ನಾವು ನೊಂದಿದ್ದೇವೆ, ಬೆಂದಿದ್ದೇವೆ. ಯಾವ ರೀತಿ ಪರಿಣಾಮಗಳಾಗುತ್ತವೆ ಎನ್ನುವುದಕ್ಕೆ ಒಂದು ಘಟನೆ, ನಿನ್ನೆ ಸುಮಾರು 5.30ರ ಗಂಟೆಯಲ್ಲಿ ನನ್ನ ಕಚೇರಿಯಲ್ಲಿ ಜರ್ಮನ್ ಕಾನ್ಸುಲೇಟ್‌ನ ಸೀಮನ್ಸ್ ಅವರ ಜೊತೆಯಲ್ಲಿ ಕುಳಿತಿದ್ದಾಗ ಅವರೊಂದಿಗೆ ಮಾತನಾಡುವಂತಹ ಕಾಲದಲ್ಲಿ ಸರಣಿ ಬಾಂಬ್ ಸ್ಫೋಟದ ಬಗ್ಗೆ ಯಾವ ರೀತಿ ಜರ್ಮನ್ ದೇಶದ ಜನರು ಆತಂಕಕ್ಕೆ ಒಳಗಾಗಿದ್ದಾರೆ, ಪರಿಸ್ಥಿತಿಗಳೇನು ಎಂದು ಪದೇ ಪದೇ ವಿಚಾರಿಸುತ್ತಿದ್ದರು. ಈ

ಮಾತನ್ನು ಅವರು ಹೇಳಿದಾಗ ಈ ರೀತಿಯ ಒಂದೊಂದು ಘಟನೆಯೂ ಸಹ ಯಾವ ರೀತಿ ಬರುವಂತಹ investors ಮೇಲೆ, ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಯಾವುದೇ ಅಭಿವೃದ್ಧಿ ಆಗಬೇಕಾದರೂ ಶಾಂತಿಯ ತಳಹದಿಯ ಮೇಲೆ ಅಭಿವೃದ್ಧಿಯಾಗಬೇಕು. ಭಯೋತ್ಪಾದನೆ ಎನ್ನುವಂತಾದ್ದು ಒಂದು ರೀತಿಯ ವಿಷಮ ಜ್ವರ. ತಾವೆಲ್ಲರೂ ಯೋಚನೆ ಮಾಡಿ. ನನ್ನ ದೃಷ್ಟಿಯಲ್ಲಿ ಭಯೋತ್ಪಾದನೆಯನ್ನು ಹತ್ತಿಕ್ಕಲು ಎರಡು ಮಾರ್ಗಗಳಿವೆ. ಈ ರೀತಿಯ ದುಷ್ಕೃತ್ಯಕ್ಕೆ ಕೈ ಹಾಕಿದಂತಹವರ ಜೊತೆ ಯಾರ ಮೂಲಕ ಮಾತನಾಡಬಹುದು, ಮಾತನಾಡಿ ಮನಸ್ಸನ್ನು ಗೆಲ್ಲುವಂಥಾದ್ದು, ಮನವೊಲಿಸುವಂತಹ ಪ್ರಯತ್ನ ಮಾಡುವಂಥಾದ್ದು ನಮ್ಮ ದೌರ್ಬಲ್ಯವೆಂದು ತಿಳಿದುಕೊಳ್ಳುವಂತಹ ಪ್ರಯತ್ನ ಮಾಡಿದರೆ ಕಟ್ಟುನಿಟ್ಟಾಗಿ ಸದೆಬಡಿಯುವುದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ನಾವು-ನೀವೆಲ್ಲರೂ ಸೇರಿ ಮಾಡಬೇಕಾಗುತ್ತದೆ.

ಚುನಾವಣೆಗೆ ಮುನ್ನ ನಮ್ಮ ಅಲ್ಪಸಂಖ್ಯಾತ ಬಂಧುವೊಬ್ಬರನ್ನು ಸಚಿವ ಸಂಪುಟಕ್ಕೆ ತೆಗೆದುಕೊಳ್ಳುತ್ತೇನೆಂದು ನಾನು ಹೇಳಿದ್ದೆ. ಬಹುಶಃ, ಯೋಗ್ಯರಲ್ಲಿ ಒಬ್ಬ ಯೋಗ್ಯ, ಪ್ರಾಮಾಣಿಕ ವ್ಯಕ್ತಿ ಡಾ: ಮುಮ್ತಾಜ್ ಆಲಿ ಖಾನ್ ಅವರನ್ನು ನಾವು ಸಚಿವ ಸಂಪುಟಕ್ಕೆ ತೆಗೆದುಕೊಂಡಿದ್ದೇವೆ. ಇದರ ಅರ್ಥ, ಓಟಿನ ಮೇಲೆ ಕಣ್ಣಿಟ್ಟು ನಾನು ಮಾಡಿದವನಲ್ಲ ಅಥವಾ ಅದನ್ನು ಮಾಡಿದಾಕ್ಷಣಕ್ಕೆ ಅಲ್ಪಸಂಖ್ಯಾತರು ನಮಗೆ ಓಟು ಕೊಡುತ್ತಾರೆಂಬ ಭಾವನೆಯೂ ನನ್ನಲ್ಲಿಲ್ಲ. ಯಾರ ಮನಸ್ಸಿನಲ್ಲಿ ಒಂದು ರೀತಿಯಲ್ಲಿ ಬಹಳ ವರ್ಷಗಳ ಪ್ರಯತ್ನದಿಂದ ನಮ್ಮ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿದೆಯೋ, ಅದನ್ನು ತೆಗೆದು ಹಾಕುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಈ ಮೂಲಕವಾಗಿ ಮಾಡಿದ್ದೇವೆ. ನೂರಕ್ಕೆ 99ರಷ್ಟು ಜನರು ನಮ್ಮ ಅಲ್ಪಸಂಖ್ಯಾತ ಬಂಧುಗಳು ಶಾಂತಿಪ್ರಿಯರಿದ್ದಾರೆ. ಆದರೆ, ವ್ಯವಸ್ಥಿತವಾಗಿ ಗೊಂದಲವುಂಟು ಮಾಡುವಂತಹ ಪ್ರಯತ್ನಗಳು ಏನು ನಡೆಯುತ್ತಿದೆ, ಇದನ್ನು ಪ್ರತಿಭಟಿಸುವುದಕ್ಕೆ, ಹತ್ತಿಕ್ಕುವುದಕ್ಕೆ ವಿಶೇಷವಾಗಿ ನಮ್ಮ ಅಲ್ಪಸಂಖ್ಯಾತ ಯುವಕರು ದೊಡ್ಡ ಪ್ರಮಾಣದಲ್ಲಿ ಮುಂದೆ ಬರಬೇಕು. ಅದಕ್ಕೆ ಬೇಕಾದಂತಹ ಹೇಳಿಕೆಗಳನ್ನು ಕೊಡುವುದರ ಮೂಲಕ ನಾವೆಲ್ಲರೂ ಈ ದೇಶದಲ್ಲಿ, ಈ ರಾಜ್ಯದಲ್ಲಿ ಒಗ್ಗಟ್ಟಾಗಿದ್ದೇವೆ, ನಮ್ಮನ್ನು ಅಲುಗಾಡಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎನ್ನುವ message ಹೋದಾಗ ಬಹುಶಃ ಇದರಿಂದ ಹೆಚ್ಚು ಲಾಭವಾಗಬಹುದು.

ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಶಿಕ್ಷಣದ ಕಡೆ ಅವರು ಗೌರವದಿಂದ ಬದುಕುವುದಕ್ಕೆ, ಆರ್ಥಿಕವಾಗಿ ಸ್ವಾವಲಂಬಿಗಳಾಗುವುದಕ್ಕೆ ಏನೇನು

ಕಾರ್ಯಕ್ರಮಗಳನ್ನು ರೂಪಿಸಬೇಕೋ, ಆ ದಿಕ್ಕಿನಲ್ಲಿ ನಾವೆಲ್ಲರೂ ಒಟ್ಟಾಗಿ ಪ್ರಯತ್ನ ಮಾಡಬೇಕಾಗಿದೆ. ಈಗಿರುವಂತಹ ಪೊಲೀಸ್ ಇಲಾಖೆ ನಿಜವಾಗಿಯೂ ಸಹ ನಮಗೆ ತೃಪ್ತಿ ತರುವ ರೀತಿಯಲ್ಲಿಲ್ಲ. ಅದನ್ನು ನಾನು ಈ ಮನೆಯಲ್ಲಿ ನಿಂತು ಒಬ್ಬ ಮುಖ್ಯಮಂತ್ರಿಯಾಗಿ ಹೇಳುತ್ತಿರುವುದನ್ನು ದೌರ್ಬಲ್ಯವೆಂದು ತಿಳಿದುಕೊಳ್ಳಬೇಡಿ. ನಮ್ಮ ಇಲಾಖಾಧಿಕಾರಿಗಳಿಗೂ ಹೇಳಿದ್ದೇನೆ. ಆಗಿಂದಾಗ್ಗೆ ಪ್ರಮುಖ ಸ್ಥಾನಗಳಲ್ಲಿರುವ, ಆಯಕಟ್ಟಿನಲ್ಲಿರುವವರನ್ನು ಬದಲಾವಣೆ ಮಾಡುವುದು ಬೇಡ. ಪೊಲೀಸ್ ಇಲಾಖೆಯನ್ನು ಬಲಪಡಿಸಬೇಕು. ಪೊಲೀಸರಲ್ಲಿ ನೈತಿಕ ಸ್ಥೈರ್ಯ ತುಂಬಬೇಕು. ಪೊಲೀಸರಿಗೆ ಸರಿಯಾದ ತರಬೇತಿ ಸಿಗುತ್ತಿಲ್ಲವೆಂದು ಹೇಳುತ್ತಾರೆ. ಸರಿಯಾದ ರೀತಿಯಲ್ಲಿ ತರಬೇತಿ ಕೊಡುವ ಕಡೆ ಗಮನ ನೀಡಬೇಕು. ಅನೇಕ ಕಡೆ ಮಿಲಿಟರಿಯಲ್ಲಿ, ಬೇರೆ ಬೇರೆ ಕಡೆಗಳಿಂದ, ನಿವೃತ್ತಿ ಹೊಂದಿರುವಂತಹ, ಅತ್ಯಂತ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ಅವರು ಯುವ ಪೀಳಿಗೆಗೆ 6 ತಿಂಗಳು, ಒಂದು ವರ್ಷ ತರಬೇತಿ ಕೊಟ್ಟರೆ, ಅಲ್ಲಿ ಪಳಗಿದಂತಹ ಪೊಲೀಸ್ ಸಿಬ್ಬಂದಿಯನ್ನು ನಾವು ಬೇಕಾದರೆ Campus Interview ಮಾಡುವುದರ ಮೂಲಕ ಬೇರೆ ಬೇರೆ ರೀತಿಯಲ್ಲಿ, ಇನ್ನು 4,000, 6,000 ಪೊಲೀಸರನ್ನು ಖಾಲಿ ಇರುವ ಕಡೆ ಭರ್ತಿ ಮಾಡಿಕೊಳ್ಳುವದಕ್ಕೆ ಚಿಂತನೆ ಮಾಡಬೇಕಾಗಿದೆ. ಈಗಾಗಲೆ ನಿವೃತ್ತ ಪೊಲೀಸ್ ಅಧಿಕಾರಿಗಳು, ನಿವೃತ್ತ ಮಿಲಿಟರಿ ಅಧಿಕಾರಿಗಳೊಂದಿಗೆ ನಾವು ಮತ್ತು ನಮ್ಮ ಅಧಿಕಾರಿಗಳು ಸಮಾಲೋಚನೆ ನಡೆಸುತ್ತಿದ್ದೇನೆ. ಅದನ್ನು ಸರಪಡಿಸುವಂತಹ ಪ್ರಯತ್ನಕ್ಕೆ ನೀವೆಲ್ಲರೂ ಸಹಕಾರ ಕೊಟ್ಟರೆ, ಬೇರೆ ಯಾವುದೇ ಹುದ್ದೆಗಳು ಖಾಲಿ ಇದ್ದರೂ ನಡೆಯುತ್ತದೆ, ಆದರೆ, ಪೊಲೀಸ್ ಇಲಾಖೆಯಲ್ಲಿ ಬಹಳ ಪ್ರಬಲವಾದ ಆಯಕಟ್ಟಿನ ಸ್ಥಾನದಲ್ಲಿ ಪೊಲೀಸರು ಇಲ್ಲದೇ ಇದ್ದರೆ ಮತ್ತು ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಸ್ಟೇಷನ್‌ಗಳು ಇಲ್ಲದೇ ಇದ್ದರೆ ಪೊಲೀಸ್ ಸ್ಟೇಷನ್‌ಗಳು ಕುಂಭಕರ್ಣ ನಿದ್ರೆ ಮಾಡದೆ, active ಆಗಿ ಇಲ್ಲದೇ ಇದ್ದರೆ, ಬಹುಶಃ ಈ ಸವಾಲನ್ನು ಎದುರಿಸುವುದು ಸುಲಭವಲ್ಲ. ಆ ದಿಕ್ಕಿನಲ್ಲಿ ಪೊಲೀಸ್ ಪಡೆಯನ್ನು ಬಲಪಡಿಸುವುದಕ್ಕೆ ಏನೇನು ಮಾಡಬೇಕೆನ್ನುವುದರ ಬಗ್ಗೆ ಕಳೆದ 3–4 ದಿವಸಗಳಿಂದ ನಿರಂತರವಾಗಿ ನಾವು ಚರ್ಚೆ ಮಾಡುತ್ತಿದ್ದೇವೆ. ನಾನು ಪ್ರತಿ ಪಕ್ಷದ ನಾಯಕರೊಂದಿಗೂ ಸಮಾಲೋಚನೆ ನಡೆಸುತ್ತೇನೆ. ನಿಮ್ಮೆಲ್ಲರ ಸಲಹೆ–ಸಹಕಾರಗಳನ್ನು ತೆಗೆದುಕೊಂಡು ಈ ಪಿಡುಗು ದೇಶದ ಉದ್ದಗಲಕ್ಕೂ, ಜಗತ್ತಿನ ಉದ್ದಗಲಕ್ಕೂ ಹರಡುತ್ತಿದೆ. ಇದನ್ನು ಪ್ರಾರಂಭದಿಂದಲೇ ಹತ್ತಿಕ್ಕುವ ಕಡೆ ನಾವು ವಿಶೇಷ ಗಮನ ನೀಡಬೇಕು.

ಇಲ್ಲಿ ಸಮಾಜದ್ರೋಹಿಗಳನ್ನು, ರಾಷ್ಟ್ರದ್ರೋಹಿಗಳನ್ನು ಸದೆಬಡಿಯುವ ಪ್ರಶ್ನೆ ಬಂದಾಗ ನಾವು–ನೀವೆಲ್ಲರೂ ಒಂದೇ ನಿಲುವು, ಒಂದೇ ತೀರ್ಮಾನ ಇಟ್ಟುಕೊಂಡಾಗ ಸರಿಹೋಗುತ್ತದೆ. ಆ ದಿಕ್ಕಿನಲ್ಲಿ ಚರ್ಚೆಯಾಗಿದೆ. ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಯಾರೂ ಸಹ ಅದರಲ್ಲಿ ಹುಳುಕು ಹುಡುಕುವಂತಹ ಪ್ರಯತ್ನ ಮಾಡಲಿಲ್ಲ. ನನ್ನನ್ನೂ ಸೇರಿ ಎಲ್ಲರೂ ಸಹ ಹೇಳಿಕೆಗಳನ್ನು ನೀಡಬೇಕಾದರೆ, ಸಂಯಮದಿಂದ ಹೇಳಿಕೆ ಕೊಡೋಣ. ನಾನು ಪೊಲೀಸ್ ಅಧಿಕಾರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ಅನೇಕ ವಿಷಯಗಳನ್ನು ದಯಮಾಡಿ ಮಾಧ್ಯಮಗಳ ಮೂಲಕ ಬಹಿರಂಗಪಡಿಸಬೇಡಿ. ಅದು ಅಗತ್ಯವಿಲ್ಲ. ನೀವು ಏನು ಮಾಡುತ್ತೀರೋ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಅತ್ಯಂತ ಪ್ರಾಮಾಣಿಕವಾಗಿ ಇದನ್ನು ಸದೆಬಡಿಯುವುದಕ್ಕೆ ಏನೇನು ಬಿಗಿ ಕ್ರಮಗಳನ್ನು ಕೈಗೊಳ್ಳಬೇಕೋ, ಅದನ್ನು ನೀವು ಕೈಗೊಳ್ಳಬೇಕು. ಕೊರತೆ ಇದ್ದಾಗ ಅದನ್ನು ನಮ್ಮ ಗಮನಕ್ಕೆ ತಂದರೆ, ಅದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತೇವೆ. ನಮ್ಮ ಪೊಲೀಸ್ ಇಲಾಖೆಯಲ್ಲಿ ಇಂತಹ ವಿಷಯಗಳಲ್ಲಿ ಯಾವುದೇ ರೀತಿ ಹಸ್ತಕ್ಷೇಪವನ್ನು ಯಾರೂ ಮಾಡಬಾರದು. ಆ ದಿಕ್ಕಿನಲ್ಲಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ಅನೇಕ ಸದಸ್ಯರು ಯಡಿಯೂರಪ್ಪನವರು ಇಂತಹ ಸತ್ವ ಪರೀಕ್ಷೆ ಬಂದಾಗ ಕೋಪ ಮಾಡಿಕೊಂಡು, ಆಕ್ರೋಶಗೊಂಡು ತತ್ತರಿಸಿ ಹೋಗುತ್ತಾರೆಂದು ಬಹಳಷ್ಟು ಜನರು ನಿರೀಕ್ಷಿಸುತ್ತಿದ್ದರೆಂದು ನಾನು ಅಂದುಕೊಂಡಿದ್ದೇನೆ. ಆದರೆ ಯಡಿಯೂರಪ್ಪ ಸ್ವಲ್ಪ ಬದಲಾವಣೆಯಾಗಿದ್ದಾರೆನ್ನುವಂಥಾದ್ದು ಇದೆ. ಈ ಸ್ಥಾನ ಅತ್ಯಂತ ಗೌರವಯುತವಾದ ಸ್ಥಾನವಾಗಿದೆ. ರಾಜ್ಯದ ಐದೂವರೆ ಕೋಟಿ ಜನರ ಸೇವೆಯನ್ನು ಮಾಡುವಂಥ ಜವಾಬ್ದಾರಿ ಈ ನಾಡಿನ ಜನರ ಆಶೀರ್ವಾದದಿಂದ ನಮಗೆ ಸಿಕ್ಕಿದೆ. ಅದರಲ್ಲೂ ನನಗೆ ನೆನಪು ಇರುವ ಹಾಗೆ ಸ್ವಾತಂತ್ರ್ಯದ ನಂತರ ನನಗೆ ಇದರ ಬಗ್ಗೆ ನನಗೆ ಇನ್ನೂ ವಿವರವಾಗಿರುವಂಥದ್ದು ಗೊತ್ತಿಲ್ಲ. ಇಷ್ಟು ಪ್ರಬಲವಾದ ವಿರೋಧಪಕ್ಷ ಇದೆ. ನಿಜಕ್ಕೂ democracy ಯಶಸ್ವಿಯಾಗಬೇಕಾದರೆ, ಸಮಾನವಾದ ವಿರೋಧಪಕ್ಷವಿರಬೇಕು. ಆಡಳಿತ ಪಕ್ಷವನ್ನು ತಪ್ಪು ಹೆಜ್ಜೆ ಇಟ್ಟಾಗ ಹಿಡಿದು ಕೇಳುವಂಥ, ಕಿವಿ ಹಿಂಡುವಂಥ ಶಕ್ತಿ ಎಲ್ಲಿಯವರೆಗೆ ವಿರೋಧಪಕ್ಷಕ್ಕೆ ಬರುವುದಿಲ್ಲ ಅಥವಾ ವಿರೋಧಪಕ್ಷದವರು ನಮ್ಮ ತಪ್ಪನ್ನು ಹೇಳಿದಾಗ ಅದನ್ನು ತಿದ್ದಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ಆಡಳಿತ ಪಕ್ಷದಲ್ಲಿರುವವರು ಮಾಡುವುದಿಲ್ಲ, ಆ ಟೀಕೆ ಟಿಪ್ಪಣಿಗಳು ಬಂದಾಗ ಇದರ ಹಿಂದಿನ ಉದ್ದೇಶವನ್ನು ಅರ್ಥ ಮಾಡಿಕೊಂಡು ನಮ್ಮ ಅಧಿಕಾರಿ ವರ್ಗ ಆ ಬಗ್ಗೆ ಸರಿಯಾದ ರೀತಿಯಲ್ಲಿ

ಕೆಲಸವನ್ನು ಮಾಡುವುದಿಲ್ಲ, ಅಲ್ಲಿಯವರೆಗೆ ಈ ಪ್ರಜಾತಂತ್ರ ವ್ಯವಸ್ಥೆಗೆ ಏನೂ ಅರ್ಥವಿಲ್ಲದಂತೆ ಆಗುತ್ತದೆ. ಅದಕ್ಕಾಗಿ ನಾನು ಅಧಿಕಾರಿ ವರ್ಗದವರಲ್ಲಿ ವಿನಂತಿ ಮಾಡುವಂಥಾದ್ದು, ಸಮಯಕ್ಕೆ ಸರಿಯಾಗಿ ಬಂದು, ಸಮಯಕ್ಕೆ ಮನೆಗೆ ಹೋಗುವಂಥ ಕಾಲ ಇದಲ್ಲ. ಸಮಯದ ಬಗ್ಗೆ ಚಿಂತನೆಯನ್ನು ಮಾಡದೇ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ವಿಷಮ ಪರಿಸ್ಥಿತಿ ಇರುವಂಥ ಕಾಲದಲ್ಲಿ ಜನರಿಗೆ ನಮ್ಮ ಬಗ್ಗೆ ವಿಶ್ವಾಸ ಬರುವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬುದು ನಮ್ಮೆಲ್ಲರ ಅಪೇಕ್ಷೆ ಇದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬರಬಹುದು, ಆದರೆ ಅಧಕ್ಕೆ ಕೊನೆಗೆ ಹಿನ್ನೆಲೆ ಗಾಯಕರಾಗಿ ಗಟ್ಟಿಯಾಗಿ ಅಧಿಕಾರಿಗಳು ಇರುವಂಥಾದ್ದು. ನನಗೆ ಸಂತೋಷವಿದೆ, ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ 55, 56 ದಿವಸಗಳ ಈ ಎರಡು ತಿಂಗಳುಗಳ ನನ್ನ ಅನುಭವವೆಂದರೆ ರಾತ್ರಿ 9ಗಂಟೆ, 10 ಗಂಟೆ, 11 ಗಂಟೆ, 12 ಗಂಟೆಗಳವರೆಗೆ ಕೆಲಸವನ್ನು ಮಾಡಿದ್ದು ಉಂಟು. ನಾನು ಬೆಳಗಾಂಗೆ ಹೋದಾಗ ನನಗೆ ಬೇರೆ ಸಮಯ ಸಿಗದೇ ಇದ್ದುದ್ದರಿಂದ review meeting ಶುರುವಾದಾಗ ರಾತ್ರಿ 9.45 ಗಂಟೆಯಾಗಿತ್ತು, ನಾವು 11.00,11.30, 12.00ಗಂಟೆಯವರೆಗೆ ಕೆಲಸ ಮಾಡಿದೆವು. ಮಾನ್ಯ ರೇವಣ್ಣನವರೆ, ಕಳೆದ ಮೂರು ದಿವಸಗಳಿಂದ ರಾತ್ರಿ 1 ಗಂಟೆ,2 ಗಂಟೆಯೆವರೆಗೂ ನಾವು ಒಟ್ಟಿಗೆ ಇದ್ದೆವು. ಆದುದರಿಂದ ಅಧಿಕಾರಿಗಳು ಸರಿಯಾಗಿ ಇದ್ದಾರೆ. ಕೆಲವು ಕಡೆಗಳಲ್ಲಿ ಬೆರಳೆಣಿಕೆಯಷ್ಟು ಕೊರತೆಗಳು ಇದ್ದರೆ, ನಾವು ನೀವು ಇದಕ್ಕೆ ಸೊಪ್ಪು ಹಾಕುವುದಿಲ್ಲವೆಂದು ಗಟ್ಟಿಯಾಗಿ ನಿಲ್ಲುತ್ತೇವೆಂದರೆ, ಖಂಡಿತವಾಗಿಯೂ ಅಧಿಕಾರಿಗಳು ನಮ್ಮ ನಿರೀಕ್ಷೆಯಂತೆ ಬರುತ್ತಾರೆ, ಮೇಲೇಳುತ್ತಾರೆಂಬ ವಿಶ್ವಾಸ ನನಗಿದೆ. ಆ ದಿಕ್ಕಿನಲ್ಲಿ ನಾವು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸವನ್ನು ಮಾಡೋಣವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರೆ, ತಾವು ನಂಬುತ್ತಿರೋ, ಇಲ್ಲವೋ, ನಾನು ಪ್ರತಿನಿತ್ಯ ದೇವರನ್ನು ಬೇಡುವಂಥಾದ್ದು, ದಯಮಾಡಿ ನನಗೆ ಆರೋಗ್ಯ ಕೊಡು, ಜನ ಸೇವೆಯನ್ನು ಮಾಡುವಂಥ ಶಕ್ತಿಯನ್ನು, ಕೊಡು ಸ್ವಂತದ ಬಗ್ಗೆ ಯೋಚನೆ ಮಾಡದೇ, ನೀನು ಕೊಟ್ಟಿರುವಂಥ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವಂಥ ಒಂದು ಶಕ್ತಿಯನ್ನು .ಕೊಡು ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಅನೇಕ ಬಾರಿ ನಾನು ಈ ಮನೆಯ ಹೊರಗಡೆ ಹೇಳಿದಾಗ, ನನಗೆ ದೇವರ ಮೇಲೆ ವಿಶ್ವಾಸವಿದೆಯೆಂದರೆ, ಕೆಲವರು ತಮಾಷೆಯಾಗಿಯೂ ಹೇಳಿರಬಹುದು, serious ಆಗಿಯೂ ತಾವು ಹೇಳಿರಬಹುದು. ಆದರೆ ಒಂದು ಕ್ಷಣ ಯೋಚನೆ ಮಾಡಿ. 10-12 ದಿವಸಗಳ ಹಿಂದೆ ನಾವು ಇದ್ದಂಥ ಸ್ಥಿತಿಯ ಬಗ್ಗೆ, ಮಾನ್ಯ ರೇವಣ್ಣನವರೆ,

ಮಳೆಯಾಗದೇ ಇದ್ದಿದ್ದರೆ ಜಲಾಶಯಗಳು ತುಂಬದೇ ಇದ್ದಿದ್ದರೆ, ಜನರು ಎಂತಹ ಜ್ವಲಂತ ಸಮಸ್ಯೆಗೆ ಸಿಕ್ಕಿಕೊಳ್ಳುತ್ತಿದ್ದರು? ನಾವು ಹತ್ತು ಸಾವಿರ ಕೋಟಿ ರೂ. ಗಳನ್ನು ತಂದು ಸಾಲವನ್ನು ಹಂಚಿದರೂ ಸಹ ಆಗುತ್ತಿರಲಿಲ್ಲ. ಭಗವಂತ ನಾಲ್ಕು ದಿವಸಗಳು ಮಳೆ ಸುರಿಸಿ ಜಲಾಶಯಗಳು ತುಂಬಿದ್ದರಿಂದ ಆಗುವಂಥ ಪರಿಣಾಮಗಳು ಏನು ಇವೆ, ಅದರಿಂದ ರೈತ ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶವಾಗುತ್ತದೆ, ವಿದ್ಯುತ್ ಅಭಾವ ನೀಗುತ್ತದೆ, ಕುಡಿಯುವ ನೀರಿನ ಹಾಹಾಕಾರ ತಪ್ಪುತ್ತದೆ. ಇದಕ್ಕೆ ಒಂದು ರೀತಿಯಲ್ಲಿ ಭಗವಂತನೇ ನಮಗೆ ಆಶೀರ್ವಾದವನ್ನು ಮಾಡಿದ್ದಾನೆನ್ನುವ ವಿಶ್ವಾಸ ನನಗಿದೆ. ನಾನು ದೇವರಲ್ಲಿ ಕೇಳುತ್ತಾ ಇದ್ದೆ, ಮೊನ್ನೆ ನಾನು ತಿರುಪತಿಗೆ ಹೋಗಿದ್ದಾಗ ದೇವಸ್ಥಾನದ ಮುಂದೆ ಬೆಳಗಿನ ಜಾವ 4.30 ಗಂಟೆಯಿಂದ 6 ಗಂಟೆಯವರೆಗೆ ಆಳುತ್ತಾ ಕುಳಿತಿದ್ದೆ, ಏನು ತಪ್ಪು , ಯಾವ ತಪ್ಪಿಗಾಗಿ ಈ ಶಿಕ್ಷೆ? ಅಕಸ್ಮಾತ್ ನಾವು ಏನೋ ತಪ್ಪು ಮಾಡಿದರೆ, ಹೊಲಗದ್ದೆಗಳಲ್ಲಿ ಯಾವ ಜನ ದುಡಿಯುತ್ತಾರೆ, ಅವರು ಮಾಡಿರುವ ಅಪರಾಧ ಏನು? ಅವರಿಗೆ ಏಕೆ ಈ ಶಿಕ್ಷೆಯನ್ನು ಕೊಡುತ್ತಿದ್ದಿಯಾ ಎಂದು ದೇವರನ್ನು ಬೇಡಿದ್ದು ಉಂಟು, ಕಾಡಿದ್ದು ಉಂಟು. ಅದರ ಪರಿಣಾಮ ಈಗ ತಾನೇ ನಾನು 3 ಗಂಟೆಯ ವೇಳೆಗೆ information ಅನ್ನು, ತೆಗೆದುಕೊಂಡೆ, KRSನಲ್ಲಿ water level 109.04 ft, ಇದೆ, maximum height 124 ft. ಇರುವಂಥಾದ್ದು ನಿಮಗೂ ಗೊತ್ತಿದೆ, 41,800 ಕ್ಯೂಸೆಕ್ಸ್ ನೀರು ಬರುತ್ತಿದೆ. ಕಬಿನಿ ಡ್ಯಾಂ ಲೆವೆಲ್ 2282.04 ಇದೆ, maximum height 2284 ಇದೆ. ಇನ್ನೊಂದು ವಾರದಲ್ಲಿ, ಎರಡು, ಮೂರು ದಿವಸಗಳಲ್ಲಿ ಜಲಾಶಯಗಳು ತುಂಬುತ್ತದೆಂಬ ವಿಶ್ವಾಸ ನನಗಿದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ, ನಮ್ಮ ರೈತರು ನೆಮ್ಮದಿಯಿಂದ ಬದುಕುವುದಕ್ಕೆ ವ್ಯವಸ್ಥೆಯಾಬಹುದು, ಮತ್ತೆ ವಿದ್ಯುತ್ ಅಭಾವದಿಂದ ಮಾನ್ಯ ಪ್ರತಿ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿದರು. ನಮಗೆ ಉತ್ತರವನ್ನು ಕೊಡುವುದಕ್ಕೆ ಏನೂ ತೋಚುತ್ತಿರಲಿಲ್ಲ, ಏನೆಂದು ಉತ್ತರ ಕೊಡುವುದು? ಸತ್ಯವನ್ನೇ ಒಪ್ಪಿಕೊಂಡರೂ ಸಹ ರಾಜ್ಯದ ಜನರು ಭಯಭೀತರಾಗಿ ಬಿಡುತ್ತಾರೆ. ಹೀಗಾಗಿ ಇಂತಹ ವಿಷಮ ಸ್ಥಿತಿಯಲ್ಲಿದ್ದಂಥ ನಮಗೆ ದೇವರೇ ನಮ್ಮ ಕೈ ಹಿಡಿದಿದ್ದಾನೆ. ಅದು ಯಡಿಯೂರಪ್ಪ, ಅವರು, ಇವರು ಎಂಬ ಪ್ರಶ್ನೆಯಲ್ಲ. ಈ ನಾಡಿನ ಐದೂವರೆ ಕೋಟಿ ಜನರು ನೆಮ್ಮದಿಯಿಂದ ಬದುಕುವುದಕ್ಕೆ ನಿಮ್ಮೆಲ್ಲರ ಸಹಕಾರದಿಂದ, ಭಗವಂತನ ಆಶೀರ್ವಾದದಿಂದ ಸ್ವಲ್ಪ ಸುಧಾರಣೆಯಾಗುತ್ತಿದೆ. ಅದರಿಂದ ಸ್ವಲ್ಪ ನೆಮ್ಮದಿಯಿಂದ ಉಸಿರಾಡುವಂಥ ಪರಿಸ್ಥಿತಿ ನಮಗೆ ಬಂದಿದೆಯೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ನಮ್ಮ ಹಿರಿಯ ನಾಯಕರು, ಮಾಜಿ ಮುಖ್ಯಮಂತ್ರಿಯವರು,

ಅನುಭವವಿರುವಂಥವರು, ಯಡಿಯೂರಪ್ಪನವರೆ, ಬಜೆಟ್‌ನಲ್ಲಿ ಏನು ಇದೆ? ಎಲ್ಲಾ ಹಳೆಯದನ್ನೇ ತಾವು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಈ ಮಾತನ್ನು ಹೇಳಿರುವಂಥಾದ್ದು, ಮತ್ತೆ ಎಲ್ಲಿಂದ, ಹೇಗೆ ದುಡ್ಡನ್ನು ತರುತ್ತೀರಿ? ಒಬ್ಬ ಬಡ ರೈತನಿಗೆ ಒಂದು ಸಾವಿರ ರೂಪಾಯಿಗಳನ್ನು ಕಟ್ಟಿದರೆ ಅದರಲ್ಲಿ 300, 400 ರೂಪಾಯಿಗಳು ಕಿತ್ತುಕೊಂಡು ಹೋಗುತ್ತದೆ. ಮಾನ್ಯ ಮಾಜಿ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು ಬಹಳ ಸತ್ಯವಾದ ಮಾತನ್ನು ಹೇಳಿದ್ದಾರೆ. ಆದರೆ ಇದೇ ನಮ್ಮ ಎಲ್ಲಾ ಶಾಸಕರ ಮುಂದೆ ಇರುವಂಥ ಸವಾಲು ಆಗಿದೆ. ಇವತ್ತು Bank Accountನಲ್ಲಿ ಒಂದು ಸಾವಿರ ರೂಪಾಯಿಗಳನ್ನು ಸಂಕಷ್ಟದಲ್ಲಿರುವಂಥ ರೈತನಿಗೆ ಇಡುತ್ತೇವೆಂದು ಹೇಳಿದಾಗ, ಅದು ಸೋರಿ ಹೋಗುತ್ತದೆಂಬ ಮನೋಭಾವನೆಗೆ ನಾವು ಇವತ್ತು ತುತ್ತಾಗಿ ಬಿಟ್ಟರೆ, ಇದು ಹೇಗೆ ಸಾಧ್ಯ? ನಾನು ಇದನ್ನು ಒಂದು ಸವಾಲೆಂದು ಸ್ವೀಕಾರ ಮಾಡುತ್ತೇನೆ. ಸ್ವಾತಂತ್ರ್ಯ ಬಂದ ಮೊದಲ ಬಾರಿಗೆ ಸಂಕಷ್ಟದಲ್ಲಿರುವಂಥ ಕೆರೆ, ಒಣ ಬೇಸಾಯ ಮಾಡುತ್ತಿರುವಂಥ ಸುಮಾರು 50 ಲಕ್ಷ ಕುಟುಂಬಕ್ಕೆ ಒಂದು ಸಾವಿರ ರೂಪಾಯಿಗಳನ್ನು ತಾತ್ಕಾಲಿಕವಾಗಿ ಅವನ ಸಮಸ್ಯೆಗೆ ನಾವು ಕೊಡುವಂಥಾದ್ದು, ನಮ್ಮೆಲ್ಲಾ ಅಧಿಕಾರಿಗಳು ಪ್ರಯತ್ನವನ್ನು ಮಾಡಿದರೆ, ನೀವೆಲ್ಲಾ ಸಹಕಾರವನ್ನು ಕೊಟ್ಟರೆ, ಈಗಾಗಲೇ ಪಟ್ಟಿ ಸಿದ್ಧವಿದೆ. ಅವನ ಹೆಸರಿಗೆ ಬ್ಯಾಂಕಿಗೆ transfer ಮಾಡುವುದರಲ್ಲೂ ಮಧ್ಯವರ್ತಿಗಳ ಪಾಲಾಗುತ್ತದೆನ್ನುವುದಾದರೆ, ಇದು ನಿಜಕ್ಕೂ ಪ್ರಜಾತಂತ್ರ ವ್ಯವಸ್ಥೆಯ ಅಣಕ ನಾವೆಲ್ಲ ತಲೆ ತಗ್ಗಿಸಬೇಕಾದಂಥ ಘಟನೆ. ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ, ನಿಮ್ಮೆಲ್ಲರ ಸಹಕಾರವಿದ್ದರೆ ಈ ಯೋಜನೆಗಳು, ಈ ಕಾರ್ಯಕ್ರಮಗಳು, ಮಧ್ಯವರ್ತಿಗಳ ಪಾಲಾಗದಂತೆ ಯೋಚನೆ ಮಾಡೋಣ. ನಾನು ಇನ್ನೂ ಒಂದು ಸಲಹೆಯನ್ನು ಕೊಡುತ್ತೇನೆ, ನಾನು ಇದನ್ನು ಇಲ್ಲಿ ಮಾತನಾಡುವುದಕ್ಕೆ, ತುಂಬಾ ತಡವಾಗಿದೆ. ಮುಂದಿನ ಬಜೆಟ್ ಅನ್ನು ಮಂಡನೆ ಮಾಡುವಂಥ ಕಾಲದಲ್ಲಿ ಸಬ್ಸಿಡಿಗಳು ಏನು ಇವೆ. ಈ ಸಬ್ಸಿಡಿಗಳೇನು ಇವೆ, ಈ ಸಬ್ಸಿಡಿಗಳೆಲ್ಲಾ 25% ,30%, 40% ಏನು ಇವೆ, ಇವು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಹಾಗೂ ಮಾನ್ಯ ಸಿದ್ದರಾಮಯ್ಯನವರಿಗೆ ಗೊತ್ತಿರುವ ಹಾಗೆ ಅವರಿಗೆ ತಲುಪುವುದಿಲ್ಲ, ಉಳಿದದ್ದೆಲ್ಲಾ ಮಧ್ಯವರ್ತಿಗಳ ಪಾಲಾಗುತ್ತದೆ. ನಾವು ನೀವೆಲ್ಲಾ ಒಟ್ಟಾಗಿ ಕುಳಿತು ಈ ಸಬ್ಸಿಡಿಯನ್ನು ರದ್ದು ಮಾಡಿ ಬಿಡೋಣ ಯಡಿಯೂರಪ್ಪನವರೇ ಎಂದು ಹೇಳಿದರೆ, ನಾವು ತೊಂದರೆಗೆ ಒಳಗಾಗಿರುವಂಥ ಜನರಿಗೆ ನೇರವಾಗಿ ಒಂದಷ್ಟು ಹಣವನ್ನು ಕೊಟ್ಟು ಬಿಡೋಣ. ಅವನು ಆ ದುಡ್ಡನ್ನು ತೆಗೆದುಕೊಂಡು ಉಪಯೋಗ ಮಾಡಿಕೊಳ್ಳಲಿ. ಅವನ ಕಾಲ ಮೇಲೆ ಅವನು ನಿಂತು ಕೊಳ್ಳಲಿ,

ಅವನಿಗೆ ಸ್ವಾತಂತ್ರ್ಯವನ್ನು ಕೊಡೋಣ. ತಾವು ಈ ರೀತಿಯ ಸಲಹೆಯನ್ನು ಕೊಟ್ಟರೆ, ಈ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ ಮೇಲೆ ಆ ಕೆಲಸವನ್ನು ಮುಂದೆ ನಾನು ಮಾಡುವುದಕ್ಕೆ ಸಿದ್ದನಿದ್ದೇನೆ. ನಾನು ಯಾವುದೇ ರಾಗ, ದ್ವೇಷ, ವೈಷಮ್ಯವಿಲ್ಲದೇ ಈ ಹಣಕಾಸಿನ ಇತಿಮಿತಿಯಲ್ಲಿ ಎಲ್ಲಾ ಯೋಜನೆಗಳಿಗೂ ಹಣವನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದೇನೆ. ಈ ಯೋಜನೆ ಯಾರು ತಂದಿದ್ದು, ಎನ್ನುವುದಕ್ಕಿಂತ ಅಭಿವೃದ್ಧಿ ಬಹಳ ಮುಖ್ಯವಾದದ್ದು. ಅದಕ್ಕೆ ತಾವೆಲ್ಲರೂ ಸಹಕಾರವನ್ನು ಕೊಟ್ಟರೆ, ಒಳ್ಳೆಯದಾಗುತ್ತದೆಂದು ಅಂದುಕೊಂಡಿದ್ದೇನೆ. ನೀವು ಬೇಕಾದರೆ ಲೆಕ್ಕ ಹಾಕಿ, ಮಾನ್ಯ ಸಿದ್ದರಾಮಯ್ಯನವರೆ, ಈ ಬಜೆಟ್‌ನಲ್ಲಿ ಸುಮಾರು 90 ಲಕ್ಷದಿಂದ ಒಂದು ಕೋಟಿ ಜನರಿಗೆ ನೇರವಾಗಿ ಸವಲತ್ತುಗಳು ಸಿಗುತ್ತಿವೆ. ಇದರ ಪ್ರಮಾಣವೆಷ್ಟು ಅನ್ನುವುದು ಬೇರೆ, ಇವತ್ತಿನ ಬಡತನ, ಈಗ ಇರುವ ಪರಿಸ್ಥಿತಿಗಳನ್ನು ನಾವೆಲ್ಲಾ ಒಪ್ಪಿಕೊಳ್ಳಬೇಕಲ್ಲಾ? ಇವತ್ತು ನಾವು ಅಧಿಕಾರಕ್ಕೆ ಬಂದಿರಬಹುದು, ಮೊದಲು ನೀವು ಅಧಿಕಾರದಲ್ಲಿ ಇದ್ದಿರಿ. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ಸಹ ಅವನಿಗೆ ಆರ್ಥಿಕವಾಗಿ, ಅವನ ಕಾಲ ಮೇಲೆ ಅವನು ಗಟ್ಟಿಯಾಗಿ ನಿಂತು ಬದುಕುವುದಕ್ಕೆ ಆಗದೇ ಇರುವಂಥ, ಉಸಿರು ಕಟ್ಟುವಂಥ ಪರಿಸ್ಥಿತಿ ಇವತ್ತಿಗೂ ಇದೆ. ಅವನು ಎರಡು ಹೊತ್ತಿನ ಊಟಕ್ಕಾಗಿ, ಗಂಜಿಗಾಗಿ, ನೆರಳಿಗಾಗಿ, ಇನ್ನೊಬ್ಬನ ಮನೆಯ ಮುಂದೆ ಹೋಗಿ ಕೈ ಕಟ್ಟಿಕೊಂಡು ಬೇಡುವಂಥ ಹೀನ ಸ್ಥಿತಿ ಇದೆಯೆಂದರೆ ಅದಕ್ಕೆ ನಾವೆಲ್ಲರೂ ಜವಾಬ್ದಾರರಾಗಿದ್ದೇವೆ. ಯಾರಿಗೆ ಬಂತು ಸ್ವಾತಂತ್ರ್ಯ? ದುಡಿಯುವಂಥ ರೈತರಿಗೆ ಏಕೆ ಬರಲಿಲ್ಲ? ಕೂಲಿ ಕಾರ್ಮಿಕರಿಗೆ ಏಕೆ ಬರಲಿಲ್ಲ? ಗ್ರಾಮೀಣಾಭಿವೃದ್ಧಿಯಾಗಲಿಲ್ಲ. ಇನ್ನು ನಾವು ರಸ್ತೆ ನಿರ್ಮಾಣ ಮಾಡುವುದರ ಬಗ್ಗೆಯೇ ಮಾತನಾಡುತ್ತಿದ್ದೇವೆ, ಕುಡಿಯುವ ನೀರನ್ನು ಕೊಡುವುದರ ಬಗ್ಗೆ ಮಾತನಾಡುತ್ತಿದ್ದೇವೆ, ಕೆರೆ ಒತ್ತುವರಿಯ ಬಗ್ಗೆ ಮಾತನಾಡುತ್ತಿದ್ದೇವೆ. ಅಂತರ ಜಲದ ಬಗ್ಗೆ ಮಾತನಾಡುತ್ತಿದ್ದೇವೆ, ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದೇವೆ. ನಾವು ಮಾಡಿದ್ದು ಏನು? ನಾನು ಹೇಳುವಂಥಾದ್ದು ಏನೆಂದರೆ, ಎಲ್ಲೋ ಒಂದು ಕಡೆ ನಾವು ನೀವು ಒಂದೇ ಕೆಲಸಕ್ಕೆ ನಾಲ್ಕು ಬಾರಿ ಹಣವನ್ನು ಕೊಡುವುದು. ಪ್ರತಿ ವರ್ಷ ಹಣವನ್ನು ಕೊಡುವುದು, ಮತ್ತೆ ಅದಕ್ಕೆ ಗುಂಡಿ ಬೀಳುತ್ತದೆ. ಈ ಕೆಲಸಗಳು ಏನು ನಿರಂತರವಾಗಿ ನಡೆಯುತ್ತಾ ಇದೆ, ಇದನ್ನು ಎಲ್ಲೋ ಒಂದು ಕಡೆ ಅಧಿಕಾರಿಗಳು ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು. ಕಾಮಗಾರಿಗಳಿಗೆ ಕೊಟ್ಟಂತಹ ಹಣವನ್ನು ಅಧಿಕಾರಿಗಳು ಬೇಕಾದರೆ ನೀವು 4 ಕಿ.ಮೀ. ರಸ್ತೆ ಮಾಡುವ ಕಡೆಯಲ್ಲಿ 2 ಕಿ.ಮೀ., ರಸ್ತೆಯನ್ನು ಮಾಡಿ . ಆದರೆ quality work ಮಾಡದೇ ಇದ್ದರೆ, ಅದು ಕಟ್ಟಡವನ್ನು ಕಟ್ಟುವಂಥಾದ್ದು ಇರಬಹುದು, ನೀರಾವರಿ ಯೋಜನೆಗಳು ಇರಬಹುದು,

ಬೇರೆ ಯಾವುದೇ ಕಾಮಗಾರಿಗಳು ಇರಬಹುದು, ಅದು ಹೇಗೆ? ಈ ಕಡೆಯಿಂದ ಮಾಡಿಕೊಂಡು ಹೋಗುವುದು, ಮೂರು , ನಾಲ್ಕು ವರ್ಷಗಳಾದ ಮೇಲೆ ಆ ಕಡೆಯಿಂದ ಮತ್ತೆ ಅದನ್ನೇ ರಿಪೇರಿ ಮಾಡಿಕೊಂಡು ಬರುವುದು. ನಮಗೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಕಿ.ಮೀ. ರಸ್ತೆ ಇದೆ, ಎಷ್ಟು asphalt ಆಗಿದೆ, ಎಷ್ಟು ಕಲ್ಲು ಮಣ್ಣಿನ ರಸ್ತೆಗಳು ಇವೆಯೆಂದರೆ, ಹಾಗಾದರೆ ನಾವು ಯಾರಿಗೆ ಅನುಕೂಲವನ್ನು ಮಾಡಿ ಕೊಟ್ಟೆವು? ಬಂದ ದುಟ್ಟು ಎಲ್ಲಿಗೆ ಹೋಯಿತು? ಇನ್ನಾದರೂ accountability, ಒಂದು ಬಿಗಿಯಾದ ನಿಲುವು ಬೇಕು ಇದನ್ನು ನಾನು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ನೀವೆಲ್ಲಾ ನನಗೆ ಸಹಕಾರವನ್ನು ಕೊಟ್ಟರೆ, ನಾನು ಆ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತೇನೆ. ನಾವು ಗೋಷ್ಠಿಗಳನ್ನು ಮಾಡಿದ್ದೇವೆ, ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮ ಬಾಳು, ಸಾಮಾಜಿಕ ನ್ಯಾಯ, ಇವುಗಳನ್ನು ಕೇಳಿ ಕೇಳಿ ಬಡವರಿಗೆ ಕಿವಿ ತೂತಾಗಿದೆಯೇ ಹೊರತು, ಅವರಿಗೆ ಯಾವುದೇ ಸವಲತ್ತುಗಳು ಮುಟ್ಟಲಿಲ್ಲ, ಸುಧಾರಣೆಯಾಗಲಿಲ್ಲ. ನಮ್ಮ ಅಲ್ಪ ಸಂಖ್ಯಾತ ಮುಸ್ಲಿಂ ಬಂಧುಗಳು ವಾಸ ಮಾಡುವಂಥ ಬಸದಿಗಳು, ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸ ಮಾಡುವಂಥ ಬಸದಿಗಳು, ಆ ರಸ್ತೆ, ಆ ಕೊಳಕಿನ ವಾತಾವರಣ, ಇವೆಲ್ಲವನ್ನೂ ನೋಡಿದಾಗ, ನಾವು ಕೊಟ್ಟಂಥ ಹಣ ಎಲ್ಲಿಗೆ ಹೋಯಿತು? ಏನಾಗಿದೆಯೆಂಬ ಪ್ರಶ್ನೆ ಬರುತ್ತದೆ. ಅದಕ್ಕೆ ನೀವು ಸಹಕಾರವನ್ನು ಕೊಡಿ, ಎಲ್ಲವನ್ನೂ ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ. ಇದನ್ನು ಹಂತ ಹಂತವಾಗಿ, ಇನ್ನು ಮುಂದೆ, ಮಾನ್ಯ ರೋಷನ್‌ಬೇಗ್‌ರವರೆ, ಯಾವುದಾದರೂ ಒಂದು slum ಅನ್ನು ನಾವು ತೆಗೆದುಕೊಂಡರೆ ಇನ್ನು ಹತ್ತು ವರ್ಷ ಅಲ್ಲಿ ಕೈ ಇಡುವಂತೆ ಇರಬಾರದು. ಒಂದು ಸಾರಿ 100 ಆಗಲಿ, 200 ಆಗಲಿ, 300 ಆಗಲಿ, 500 ಆಗಲಿ, 1,000 ಆಗಲಿ, ಮಾನ್ಯ ಶಿವಕುಮಾರ್‌ರವರೆ ನಾವು ತೆಗೆದುಕೊಂಡ ಕೆಲಸವನ್ನು ಏನಾದರೂ ಒಂದು ಹಂತವನ್ನು ಮುಟ್ಟಿಸುವುದಕ್ಕೆ ನಾವು, ನೀವೆಲ್ಲಾ ಪ್ರಯತ್ನವನ್ನು ಮಾಡಿದರೆ, ಬಹುಶಃ ಒಳ್ಳೆಯದಾಗಬಹುದು. ಆ ದಿಕ್ಕಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ನಾನು ಒಂದು ಭರವಸೆಯನ್ನು ಈ ಮನೆಗೆ ಕೊಡುತ್ತೇನೆ. ಜಾತಿ-ಜಾತಿಗಳ ಮಧ್ಯೆ, ಜನಾಂಗ-ಜನಾಂಗಗಳ ನಡುವೆ ತಾರತಮ್ಯ, ಗೊಂದಲ ಉಂಟು ಮಾಡುವಂಥಾದ್ದು, ಈ ರೀತಿ ಯಾವುದಕ್ಕೂ ಅವಕಾಶ ಕೊಡದೆ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸರ್ಕಾರದ ಕಾರ್ಯಕ್ರಮಗಳನ್ನು ತಲುಪಿಸುವುದಕ್ಕೆ ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ. ನನ್ನ ಮುಂದೆ ಜಾತಿ, ಧರ್ಮ, ಲಿಂಗ ಭೇದ ಇಲ್ಲದೆ ಎಲ್ಲಾ ಜಾತಿಯ ದುರ್ಬಲ ವರ್ಗಗಳ ಜನರ ಅಭಿವೃದ್ಧಿಗಾಗಿ ನನ್ನ ಬಜೆಟ್‌ನಲ್ಲಿ ಅವಕಾಶ

ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಸಮುದಾಯಗಳ ಶೋಷಿತ ಗುಂಪಿಗೆ, ಅವರ ಅಭಿವೃದ್ಧಿಗೆ ಈ ಬಜೆಟ್‌ನಲ್ಲಿ ಪ್ರಧಾನ ಅವಕಾಶವನ್ನು ಕೊಟ್ಟಿದ್ದೇನೆ. ನಾನು ಪ್ರಾರಂಭದಲ್ಲೇ ಹೇಳಿದಂತೆ, ರಾಜ್ಯದ ಬಡ ಕುಟುಂಬ ಇನ್ನೊಬ್ಬರ ಮುಂದೆ ನಿಂತು 'ದೇಹಿ' ಎಂದು ಬೇಡದೆ ಎರಡು ಹೊತ್ತಿನ ಕೂಳು, ಮೈ ಮುಚ್ಚುವ ಬಟ್ಟೆ, ತಲೆಯ ಮೇಲೊಂದು ಸೂರು, ಆರ್ಥಿಕವಾಗಿ ಸ್ವಾವಲಂಭಿಗಳಾಗುವುದಕ್ಕೆ ಏನೆಲ್ಲಾ ಮಾಡಬಹುದು, ಆ ಕೆಲಸವನ್ನು ಮಾಡುತ್ತೇನೆ 'ಯಡಿಯೂರಪ್ಪನವರೆ, ಎಲ್ಲಾ ಹಳೆಯ ಕಾರ್ಯಕ್ರಮಗಳೇ' ಎಂದು ಕೆಲವರು ಹೇಳಿದರು. ನಾನು ಪ್ರಾಮಾಣಿಕವಾಗಿ ನಿಮ್ಮನ್ನು ಕೇಳುತ್ತೇನೆ. ನಾವು ಆಡಳಿತ ಪಕ್ಷದಲ್ಲಿದ್ದೇವೆ, ನೀವು ವಿರೋಧ ಪಕ್ಷದಲ್ಲಿದ್ದೀರಿ. ನಾವೆಲ್ಲಾ ಈ ಮನೆಯ ಸದಸ್ಯರು. ಈ ನಾಡಿನ ಪ್ರತಿನಿಧಿಗಳು. ಹಾಲು ಉತ್ಪಾದನೆಗೆ ಲೀಟರ್‌ಗೆ 2 ರೂ.ಗಳ ಪ್ರೋತ್ಸಾಹ ಧನವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಇದಕ್ಕಾಗಿ ನೀವೆಲ್ಲಾ ಹೆಮ್ಮೆ ಪಡಬೇಕು. ಇದು ದೇಶದಲ್ಲೇ ಮೊದಲನೇ ಬಾರಿಗೆ ಹೈನುಗಾರಿಕೆಗೆ ಒತ್ತು ಕೊಡುವುದಕ್ಕೆ ಮಾಡಿದಂತಹ ಹೊಸ ಚಿಂತನೆ ತಾನೇ? ಇದು ಹಳೆಯದೇ? ಇದು ಹೊಸ ಕಾರ್ಯಕ್ರಮವಲ್ಲವೇ? ಈ ರಸಗೊಬ್ಬರದ ಹಿಡಿತದಿಂದ ಕಪಿ ಮುಷ್ಟಿಯಿಂದ ಕ್ರಮೇಣ ರೈತರನ್ನು ಬಿಡಿಸಿ, ಸಾವಯವ ಕೃಷಿಗೆ ಒತ್ತು ಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇನ್ನೂ ಏನೇನು ಅದನ್ನು ಬಲಪಡಿಸುವುದಕ್ಕೆ ಮಾಡಬೇಕೋ, ಅದನ್ನು ಮಾಡುತ್ತೇನೆ. ನೀವು ನನಗೆ ಸಹಕಾರ ಕೊಡಿ. ಇದು ಹೊಸ ಚಿಂತನೆಯಲ್ಲವೇ? ಒಣ ಬೇಸಾಯ ನಿರತ ರೈತರಿಗೆ 1 ಸಾವಿರ ಕೊಟ್ಟಿದ್ದೇನೆ. ನೋಡುವುದಕ್ಕೆ ಒಂದು ಸಾವಿರ ರೂ.ಗಳು ಇರಬಹುದು. ನನಗೆ ಗೊತ್ತಿದೆ, ನಾನು ರೈತನ ಮಗ, ಬಡವ, ಬಡವನ ಕಷ್ಟ ಗೊತ್ತಿರುವಂತಹವನು. 1 ಸಾವಿರ ರೂ.ಗಳನ್ನು ಅವನ ಮನೆ ಬಾಗಿಲಿಗೆ, ಅವನ ಅಕೌಂಟಿಗೆ ಬರುವಂತೆ ಮಾಡಿ, 50 ಲಕ್ಷ ಕುಟುಂಬಗಳಿಗೆ ಅವರಿಗೆ ಬೇಕಾದ ಬಿತ್ತನೆ ಬೀಜ ಇತ್ಯಾದಿಗಳಿಗೆ ಖರ್ಚು ಮಾಡುವುದಕ್ಕೆ 1 ಸಾವಿರ ರೂ.ಗಳು ಕೊಟ್ಟಿರುವುದು ಹೊಸ ಕಾರ್ಯಕ್ರಮ ಅಲ್ಲವೇ? ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಯಿತು. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷವಾಗಿ ಅಲ್ಪಸಂಖ್ಯಾತ ಬಂಧುಗಳು, ಆ ಕೂಲಿ ಮಾಡುವವನ ಮಗಳಿಗೆ 18 ವರ್ಷವಾದಾಗ 1 ಲಕ್ಷ ರೂ. ಸಿಗಬೇಕು ಎಂದು ಮಾಡಿದ್ದು ಹೊಸ ಕಲ್ಪನೆಯಲ್ಲವೇ? ಇದು ಹೊಸ ಕಾರ್ಯಕ್ರಮ ಅಲ್ಲವೇ? ನಾನು ಯೋಚನೆ ಮಾಡುತ್ತೇನೆ, ನೀವು ಸಹಕಾರ ಕೊಟ್ಟರೆ, ಅವಳಿಗೆ 15 ವರ್ಷವಾದಾಗ ಆ ಬಾಂಡ್ ಇಟ್ಟು ಅವಳು 50 ಸಾವಿರ ರೂಪಾಯಿಗಳವರೆಗೂ ಕಡಿಮೆ ಬಡ್ಡಿಗೆ ಸಾಲ ತೆಗೆದುಕೊಳ್ಳುವ ಅಧಿಕಾರ ಕೊಡುತ್ತೇನೆ. ಆ 50 ಸಾವಿರ ರೂಪಾಯಿಗಳಿಂದ ಆಕೆ ತನ್ನ ಶಿಕ್ಷಣ ಮುಂದುವರೆಸುತ್ತಾಳೆ. ಇನ್ನೊಬ್ಬರ ಹತ್ತಿರ ಹೋಗುವಂತಹ

ಪ್ರಮೇಯವಿರುವುದಿಲ್ಲ. ಅಂದರೆ 15 ವರ್ಷದಿಂದ 18 ವರ್ಷಕ್ಕೆ 1 ಲಕ್ಷ ರೂ.ಗಳ ದುಡ್ಡು ಅವಳಿಗೆ ಸಿಕ್ಕಿದರೆ ಬಹಳ ಅನುಕೂಲವಾಗುತ್ತದೆ. ನಾವು ಇಲ್ಲಿ ಕುಳಿತಿರುವ ಯುವ ಶಾಸಕರು ಇರಬಹುದು, ಮಂತ್ರಿಗಳು ಇರಬಹುದು, ಮಂತ್ರಿಗಳು ಇರಬಹುದು, ನಮ್ಮ ತಂದೆ ತಾಯಿಗಳಲ್ಲಿ ಯಾರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನಮಗೆ Insurance ಮಾಡಿಸಿದ್ದರು? ಎಷ್ಟು ಜನ ನಮ್ಮ ಅಪ್ಪ ಅಮ್ಮಂದಿರು ನಾವು ಹುಟ್ಟಿದ ತಕ್ಷಣ Insurance ಮಾಡಿಸಿ, ನಿನಗೆ 18 ವರ್ಷವಾದಾಗ 1 ಲಕ್ಷ ರೂ.ಗಳ ಸಿಗುವಂತೆ ಮಾಡಿದರು ಎಂದು ಕೇಳಿದರೆ, ಆ ಬಗ್ಗೆ ನಮಗೆ ನಾವು ಪ್ರಶ್ನೆ ಮಾಡಿಕೊಂಡರೆ, ಆವತ್ತಿನ ಸ್ಥಿತಿಗಳನ್ನು ಅರ್ಥ ಮಾಡಿಕೊಂಡರೆ, ಯಡಿಯೂರಪ್ಪ ಸೇರಿ ಬೆರಳೆಣಿಕೆಯಷ್ಟೂ ಸಿಗುವುದಿಲ್ಲ. ಆದರೆ ಈ ಯೋಚನೆ, ಈ ಚಿಂತನೆ, ಹೊಸದಲ್ಲವೇ? ಯಡಿಯೂರಪ್ಪ ಏನೋ ಹೊಸದಾಗಿ ಕ್ರಾಂತಿ ಮಾಡಲಿಕ್ಕೆ ಹೊರಟಿದ್ದಾನೆಂದು ನಾನು ಈ ಮಾತನ್ನು ಹೇಳಲಿಕ್ಕೆ ಹೊರಟಿಲ್ಲ. ನೀವು ಎಲ್ಲರೂ ಸ್ವಲ್ಪ ಇದನ್ನು ಗಮನಿಸಿದರೆ, ಬಹುಶಃ ಇವೆಲ್ಲಾ ಒಂದು ರೀತಿ ಕ್ರಾಂತಿಕಾರಿ ಹೆಜ್ಜೆಯನ್ನು ಇಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂದು ತಿಳಿಯಬಹುದು. ಕೂಲಿ ಮಾಡುವವನ ಮಗಳೂ ಸಹ ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು, ಈ ದಿಕ್ಕಿನಲ್ಲಿ ಮಾಡಿದ್ದೇವೆ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಸ್ವಾಮಿ 100ಕ್ಕೆ 99 ಭಾಗ ಅವರಿಗೆ payment ಮಾಡುತ್ತಿಲ್ಲ. ಬಡ್ಡಿ ಎಷ್ಟು? 12-13% ನಾನು ಈಗ ಸದ್ಯಕ್ಕೆ ನಾವು ಎಲ್ಲೆಲ್ಲಿ ಸಹಕಾರ ಕೊಡುತ್ತೇವೋ ಅಲ್ಲಿ 6% ಬಡ್ಡಿಗೆ ಅವರಿಗೆ ಸಹಾಯ ಧನವನ್ನು ಕೊಡುತ್ತೇವೆಂದು ಮಾಡಿದ್ದೇವೆ. ಅವರಿಗೆ 6% ಉಳಿತಾಯವಾಯಿತು. ಅವಳು ಬೆಳೆಯುವುದಕ್ಕೆ ಅನುಕೂಲವಾಯಿತು. 5 ಸಾವಿರ ಇರುವಂತಹ ಹಣವನ್ನು 10 ಸಾವಿರ ರೂ. ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ದೇಶದಲ್ಲೇ ಮೊದಲನೇ ಬಾರಿಗೆ ಮಾಡುತ್ತಿದ್ದೇವೆ ನಿಜ, ಹೋದ ಸಂದರ್ಭದಲ್ಲಿ ನಾವೆಲ್ಲಾ ಒಟ್ಟಾಗಿ ಸೇರಿ, ಮೊದಲನೇ ಬಾರಿಗೆ 4% ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟೆವು. ಸಮ್ಮಿಶ್ರ ಸರ್ಕಾರದ ಸಾಧನೆ ಅದು. ಇವತ್ತು ದೇಶದಲ್ಲೇ ಮೊದಲನೇ ಬಾರಿಗೆ ನಾವು ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ 3% ಸಾಲ ಕೊಡಲಿಕ್ಕೆ ಹೊರಟಿದ್ದೇವೆ. ಇದು ಕ್ರಾಂತಿಕಾರಿ ಕೆಲಸ ಅಲ್ಲವೇನು? ನಮ್ಮ ಸರ್ಕಾರ ಮಾಡಿದೆ ಎಂದು ನಾವು, ನೀವೆಲ್ಲಾ ಹೇಳೋಣ. ಇದು ಬಿ.ಜೆ.ಪಿ. ಸರ್ಕಾರವಲ್ಲ, ನಮ್ಮೆಲ್ಲರ ಸರ್ಕಾರ. ಇದಕ್ಕೆ ನನಗೆ ತೃಪ್ತಿ ಇದೆ ಎಂದು ನಾನೇನೂ ಹೇಳುವುದಿಲ್ಲ. ಇದರಿಂದ ನನಗೆ ಸಮಾಧಾನವಾಗಿದೆ ಎಂದು ನಾನು ಹೇಳುವುದಿಲ್ಲ. ರೈತನಿಗೆ ನೀವು ಏನು ಕೊಟ್ಟರೂ ಕಡಿಮೆ ಹಿಂದೆ ಒಂದು ಚಿಂತನೆ ನಡೆದಿತ್ತು, ಮಾನ್ಯ ಕುಮಾರಸ್ವಾಮಿ ಅವರ ತಂದೆಯವರ ಕಾಲದಲ್ಲಿ ಸಲಹೆಯೊಂದನ್ನು ಕೊಟ್ಟಿದ್ದರು. ಬೆಂಗಳೂರು

ಮಹಾನಗರದಲ್ಲಿ ಒತ್ತುವರಿ ಆಗಿರುವಂತಹ ಭೂಮಿ ಏನಿದೆ, ಇದನ್ನು ಮಾರಾಟ ಮಾಡಿ ಯಡಿಯೂರಪ್ಪನವರೆ, ಒಂದು ಸಾರಿ ರೈತರ ಸಾಲ ಮನ್ನಾ ಏಕೆ ಮಾಡಬಾರದು ಎಂದು ಸಲಹೆ ಬಂದಿತ್ತು. ನಾನು ಮತ್ತು ಕುಮಾರಸ್ವಾಮಿಯವರು ಕುಳಿತುಕೊಂಡು ಆ ಬಗ್ಗೆ ಚರ್ಚೆ ಮಾಡಿದೆವು. ಆದರೆ ನಾನು ಕೇಳುತ್ತೇನೆ. ಇವತ್ತು ಇಷ್ಟೆಲ್ಲಾ ಸರ್ವೆ, ಹುಡುಕಾಟ ಆಯಿತಲ್ಲಾ, ಅವರಿಗೇ ಬೇಕಾದರೆ ನಾನು ಜವಾಬ್ದಾರಿಯನ್ನು ಕೊಡುತ್ತೇನೆ. ಯಾರ್‍ಯಾರು ಈ ಖದೀಮರು ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಅವನು ಯಾವನು ಇಷ್ಟೇ ಬಲಾಢ್ಯನಾಗಿರಲಿ, ಸಾರ್ವಜನಿಕವಾಗಿ ಹರಾಜು ಮಾಡಿ possessionಗೆ ತೆಗೆದುಕೊಂಡು, ಈ ರಾಜ್ಯದ ಅಭಿವೃದ್ಧಿಗೆ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಾನು ಸಿದ್ದನಿದ್ದೇನೆ. ನಿಮ್ಮ ಸಹಕಾರ ಬೇಕಷ್ಟೇ. ಯಾವುದಾದರೂ ಒಂದು ಕೇಸ್‌ನಲ್ಲಿ ಯಡಿಯೂರಪ್ಪನವರು ಏನಾದರೂ ಮುಲಾಜು ನೋಡಿದರು, ಮತ್ತೊಂದು ನೋಡಿದರು, ಎಂದರೆ, ಹೇಳಿ. ನಾನು ಯಾವುದೇ ಮುಲಾಜು ನೋಡುವುದಿಲ್ಲ. ನಾನು ಈ ಭರವಸೆಯನ್ನು ಮಾನ್ಯ ಕುಮಾರಸ್ವಾಮಿಯವರಿಗೆ, ಮಾನ್ಯ ರೇವಣ್ಣನವರಿಗೆ, ಮಾನ್ಯ ಸಿದ್ದರಾಮಯ್ಯನವರಿಗೆ, ಮಾನ್ಯ ಖರ್ಗೆಯವರಿಗೆ ಮತ್ತು ಮಾನ್ಯ ಶಿವಕುಮಾರ್‌ರವರಿಗೆ ಭರವಸೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ಯಾವ ಕಾರಣಕ್ಕೂ ಎಷ್ಟೇ ಬಲಾಢ್ಯರಿದ್ದರೂ, ಅವರನ್ನು ಬಿಡುವುದಿಲ್ಲ. ರಾಜಕೀಯ ಪಕ್ಷಗಳ ಬೆಂಬಲವಿಲ್ಲದೆ ಈ ಕೆಲಸಗಳು ನಡೆಯುವುದಿಲ್ಲ. ಯಾರೋ ಸ್ವತಃ ಆಸ್ತಿ ಮಾಡಿದ್ದಾರೆ, ದುಡಿದು ಮುಂದೆ ಬಂದಿದ್ದಾರೆ, ನಿಮ್ಮಂತಹವರು ಶ್ರೀಮಂತರಾದರೆ, ಅದು ನಮ್ಮ ರಾಜ್ಯಕ್ಕೇ ದೊಡ್ಡ ಕೊಡುಗೆಯಾಗುತ್ತದೆ. ಶ್ರೀಮಂತರ ಮೇಲೆ ನನ್ನದೇನೂ ಕೆಂಗಣ್ಣಿಲ್ಲ. ಆದರೆ ಕಾನೂನು ಬಾಹಿರವಾಗಿ ಸರ್ಕಾರದ ಜಮೀನುಗಳನ್ನು ಯಾರು ವಶಪಡಿಸಿಕೊಂಡಿದ್ದಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಯಾವುದೇ ಒಂದು ಮುಲಾಜಿಗೆ ಒಳಗಾಗದೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಅದಕ್ಕೆ ನಿಮ್ಮ ಸಂಪೂರ್ಣ ಸಹಕಾರ ಬೇಕು ಎನ್ನುವಂತಹ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ವಸ್ತುಗಳ ಬೆಲೆ ಗಗನಕ್ಕೇರಿದೆ. ಹಾಸ್ಟೆಲ್‌ನಲ್ಲಿರುವ ಮಕ್ಕಳಿಗೆ 450 ರೂ.ಗಳನ್ನು ಕೊಡುತ್ತಿದ್ದೆವು...

ಶ್ರೀ ಸಿದ್ದರಾಮಯ್ಯ:- ನೀವು ಪದೇ ಪದೇ 'ಕ್ರಾಂತಿಕಾರಕ', 'ಕ್ರಾಂತಿಕಾರಕ' ಎನ್ನುವ ಪದವನ್ನು ಬಳಸುತ್ತಿದ್ದೀರಿ. ಆ ಪದವನ್ನು ನೀವು ಉಪಯೋಗಿಸಿ, ಅದಕ್ಕೆ ನನ್ನ ತಕರಾರೇನೂ. ಇಲ್ಲ. 6%ಗೆ ಬಡ್ಡಿ ದರ ಮಾಡಿದಾಗ ಅದು ಕ್ರಾಂತಿಕಾರಕ ಆಗುವುದಿಲ್ಲ ಆವತ್ತು 11.1/2% ಇತ್ತು, ಅದನ್ನು 6%ಗೆ ಇಳಿಸಿದಾಗ ಅದು ಕ್ರಾಂತಿಕಾರಕವಲ್ಲ. ನಾವು ಅದನ್ನು ಕ್ರಾಂತಿಕಾರಕವೆಂದು ಹೇಳಲೇ ಇಲ್ಲ. The

difference is 5 1/2% ಕೇಂದ್ರ ಸರ್ಕಾರದವರು ಬಡ್ಡಿ ರೇಟ್ ಅನ್ನು 7%ಗೆ ಇಳಿಸಿದಾಗ, ಅದು 4% ಆಯಿತು. The difference is 3% , 4%ನಿಂದ 3%ಗೆ 1% ಇಳಿಸಿರುವುದರಿಂದ the burden on exchequer would be around Rs.40 crores. ಇದನ್ನು ಕ್ರಾಂತಿಕಾರಕ ಎಂದು ಕರೆಯಬೇಕೇ? ನಾವು 6% ಮಾಡಿದ್ದೆವಲ್ಲಾ? Where were you? ಆದ್ದರಿಂದ, 'ಕ್ರಾಂತಿಕಾರಕ', 'ಕ್ರಾಂತಿಕಾರಕ' ಎಂದು ಹೇಳಬಾರದು. ಇಷ್ಟೊಂದು ಅನುಭವವಾಗಿರುವುದರಿಂದ ನಾನು ಮಧ್ಯೆ ಪ್ರವೇಶಿಸಿದರೂ ಸಹ ಮಾನ್ಯ ಮುಖ್ಯಮಂತ್ರಿಗಳ thoughtsಗೆ ಅಡ್ಡ ಬರುವುದಿಲ್ಲವೆಂದು ಭಾವಿಸುತ್ತೇನೆ. ನನ್ನ ಸಲಹೆ ಏನೆಂದರೆ, ನಿಮ್ಮ ಪ್ರಣಾಳಿಕೆಯಲ್ಲಿ, it will be extended to Commercial Banks also ಎಂದು ಹೇಳಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದಕ್ಕೆ ಬರುತ್ತೇನೆ. ಆ ವಿಷಯಕ್ಕೆ ಬರುವುದಕ್ಕೇ ನೀವು ಅವಕಾಶ ಕೊಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ:- ನೀವು ಆ ವಿಷಯಕ್ಕೆ ಬಂದಿಲ್ಲ, ನೀವು ಆಗಲೇ ಮುಂದಕ್ಕೆ ಹೊರಟು ಹೋಗುತ್ತಿದ್ದೀರಿ. ಅದನ್ನು ನಿಮಗೆ ಜ್ಞಾಪಿಸಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಎಲ್ಲದಕ್ಕೂ ಬರುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: 3% Commercial Banksಗೂ extend ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಕುಳಿತುಕೊಳ್ಳಿ, ನಾನು ಅಲ್ಲಿಗೇ ಬರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:- Credit ಹೆಚ್ಚಾಗಿ ಬರುತ್ತಿಲ್ಲ...

(ಗೊಂದಲ)

(ಮಾನ್ಯ ಉಪಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ನಿಂತಿದ್ದಾಗ ದಯವಿಟ್ಟು ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅವರು ಯೀಲ್ಡ್ ಆಗಿದ್ದಾರೆ. ನೀವು ಮಧ್ಯೆ ಮಧ್ಯೆ ಏಕೆ ಮಾತನಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಬಹಳ ಅನುಭವಿಗಳಾಗಿದ್ದಾರೆ. ಈ ಸರ್ಕಾರಕ್ಕೆ ಒಳ್ಳೆಯದು ಆಗಬೇಕು. ಯಡಿಯೂರಪ್ಪನವರಿಗೆ ಒಳ್ಳೆಯ ಸಲಹೆ ಕೊಡಬೇಕೆಂದು ಹೊರಟಿದ್ದಾರೆ. ಅವರನ್ನು ತಡೆಯಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಮುಖ್ಯಮಂತ್ರಿಗಳು ಯೀಲ್ಡ್ ಆಗಿರುವುದರಿಂದ, ಅವರು ಮುಂದಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಅವರಿಗೆ ನಾನೊಂದು ಸಲಹೆಯನ್ನು ನೀಡಬಯಸುತ್ತೇನೆ. ನೀವು ಬಡ್ಡಿ ದರವನ್ನು 4% ರಿಂದ 3%ಗೆ ಇಳಿಸಿದ್ದೀರಿ, OK. ಅದರಿಂದ 30-40 ಕೋಟಿ ರೂ.ಗಳ additional burden ಆಗುತ್ತದೆ. ಈಗ 120-130 ಕೋಟಿ ರೂ.ಗಳು ಇದೆ, ಅದರ ಮೇಲೆ 30-40 ಕೋಟಿ ರೂ.ಗಳ ಬಡ್ಡಿ ಸಬ್ಸಿಡಿ ಹೆಚ್ಚಾಗಿ ಆಗುತ್ತದೆ. ಅದರಿಂದ food production ಹೆಚ್ಚಾಗಿ ಬಿಡುತ್ತದೆಂದು ನಾನೇನೂ ಅಂದುಕೊಂಡಿಲ್ಲ. But, ರೈತರಿಗೆ burden ಕಡಿಮೆ ಆಗುತ್ತದೆ. 3% ಬಡ್ಡಿ ದರದ ಸಂಪೂರ್ಣ ಲಾಭ ಸಿಕ್ಕಬೇಕಾದರೆ, you please extend it to Commercial Banks also. ಅದಕ್ಕೆ ಎಷ್ಟು burden ಆಗುತ್ತದೋ, ಆ burden ಅನ್ನು ಕೊಡಲಿಕ್ಕೆ ಸರ್ಕಾರ ತಯಾರಾಗಿರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ಚುನಾವಣಾ ಪ್ರಣಾಳಿಕೆ ಅಥವಾ ನೀವು ಯಾರಾದರೂ ಚುನಾವಣಾ ಹೆಸರಿನಲ್ಲಿ ಕೊಟ್ಟಂತಹ ಚುನಾವಣಾ ಪ್ರಣಾಳಿಕೆ 5 ವರ್ಷದ ಅವಧಿಗೆ ನಾವು ಕೊಡುತ್ತೇವೆ. ರಾಷ್ಟ್ರಪತಿ ಆಳ್ವಿಕೆ ನಡೆಯುತ್ತಿತ್ತು. ಮಧ್ಯದಲ್ಲಿ ಈ ಸರ್ಕಾರ ಅಸ್ತಿತ್ವದಲ್ಲಿ ಬಂದಿದೆ. ಕೆಲವು ವಿಷಯಗಳನ್ನು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಹೇಳಿದ್ದು ನಿಜ. ನಾನು ನಿಮ್ಮನ್ನು ಕೇಳುತ್ತೇನೆ. ಕೇಂದ್ರದ ಬಡ್ಡಿ ಎಷ್ಟು? ಮತ್ತೊಂದು ಎಷ್ಟು? ಬೇಡ. ಈ ದೇಶದಲ್ಲೇ 3% ಬಡ್ಡಿಗೆ ರೈತರಿಗೆ, ನೇಕಾರರಿಗೆ, ಮೀನುಗಾರರಿಗೆ ಸಾಲ ಕೊಡುತ್ತಿರುವುದು ದೇಶದಲ್ಲೇ ಕರ್ನಾಟಕ ರಾಜ್ಯ ಮೊದಲನೆಯದು ತಾನೇ?

ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಕರ್ನಾಟಕ ಈ ರೀತಿ ಸಂಕಷ್ಟಕ್ಕೆ ಸಿಕ್ಕಿರುವ ರೈತ ಸಮೂಹಕ್ಕೆ ಸಹಾಯ ಮಾಡುವುದಕ್ಕೆ ಮೇಲ್ಪಂಕ್ತಿ ಹಾಕಿರುವ ಮೊದಲನೆ ಸರ್ಕಾರ. ನಿಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಕೇಂದ್ರ ಕೃಷಿ ಸಚಿವರಾದ ಶರದ್ ಪವಾರ್ ಅವರು ಮೈಸೂರಿಗೆ ಬಂದಾಗ ರಾಮದಾಸ್ ಅವರು ಸೇರಿದಂತೆ ಆವತ್ತು ನೀವೆಲ್ಲರೂ ಇದ್ದಿರಿ. ರೈತರು ಸಹಕಾರಿ ಸಂಘಗಳಿಂದ ಪಡೆದ ಸಾಲಕ್ಕೆ 4% ಸಾಲ ಕೊಡುವ ಒಂದು ಐತಿಹಾಸಿಕ ನಿರ್ಧಾರ ಕರ್ನಾಟಕ ಸರ್ಕಾರ ಮಾಡಿದೆ ಇದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ ಎಂದು ಅವರು ಪಾರ್ಲಿಮೆಂಟ್‌ನಲ್ಲೂ ಇದನ್ನು ಪ್ರಸ್ತಾಪ ಮಾಡಿದರು. ನಾವು ನೀವೆಲ್ಲಾ ಮಾಡಬೇಕಾಗಿರುವುದು, ಸೀಮಿತ ಆದಾಯದಲ್ಲಿ ಒಂದು ರಾಜ್ಯ ಸರ್ಕಾರ 3% ಬಡ್ಡಿಗೆ ಸಾಲ ಕೊಡಲು ಮುಂದೆ ಬಂದಿರುವ ಕಾಲದಲ್ಲಿ ಈ ರೀತಿ ರೈತರ ಆತ್ಮಹತ್ಯೆ ನಡೆಯುತ್ತಿರುವ ಹಾಗು ರೈತ ಬೇರೆ ಬೇರೆ ಸಂಕಷ್ಟಗಳಲ್ಲಿರುವ ಈ ಸಂದರ್ಭದಲ್ಲಿ

ಕೇಂದ್ರ ಸರ್ಕಾರಕ್ಕೆ ನಾವು ನೀವೆಲ್ಲಾ ಒಟ್ಟಾಗಿ ಹೋಗಿ ಮನವೊಲಿಸಿ 3% ಬಡ್ಡಿಗೆ ನಮಗೆ ಕೊಡಿ ಎಂದು ಕೇಳುವುದಕ್ಕೆ ನಮಗಾಗುವುದಿಲ್ಲವೇ? ನಾನು ಅದಕ್ಕಾಗಿ ಈಗಾಗಲೆ ಪ್ರಧಾನಮಂತ್ರಿಗಳೊಡನೆ ಮಾತನಾಡಿದ್ದೇನೆ. ಬೇರೆ ಪಕ್ಷದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ನಾವು ಮುಖ್ಯಮಂತ್ರಿಗಳೆಲ್ಲಾ ಒಂದಾಗಿ ನಿಮ್ಮೆಲ್ಲರ ಸಹಕಾರವನ್ನು ತೆಗೆದುಕೊಂಡು, ಈ ದೇಶದ ರೈತನಿಗೆ ಕೊಡುತ್ತಿರುವುದು ಏನೇನೂ ಸಾಲದು 3%, 4% ಬಡ್ಡಿಯನ್ನು ಕಮ್ಮಿ ಕೊಟ್ಟಾಕ್ಷಣಕ್ಕೆ ರೈತನ ಜೀವನದಲ್ಲಿ ಹೊಸದೇನೋ ಕಾಣುತ್ತೇವೆಂದು ನಿರೀಕ್ಷೆಯನ್ನು ನಾನೇನೂ ಇಟ್ಟುಕೊಂಡಿಲ್ಲ. ಮಾಡಬೇಕಾದ್ದು ಅಗಾಧವಾದದ್ದು ಇದೆ. ಬಹುಶಃ ಸ್ವಾತಂತ್ರ್ಯ ಬಂದ ಮೇಲೆ ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿರುವ ಯಾವುದಾದರು ಸಮೂಹವಿದ್ದರೆ ಅದು ರೈತ ಸಮೂಹ. ಅವರಿಗೆ ಕೊಡಬೇಕಾದ ಯಾವುದೇ ಸವಲತ್ತನ್ನು ಕೊಡಲಿಲ್ಲ. ಆ ಗ್ರಾಮರಾಜ್ಯ, ರಾಮರಾಜ್ಯ ಆ ಕಲ್ಪನೆಗಳೆಲ್ಲಾ ಭಾಷಣದಲ್ಲೆ ಇದ್ದಾವೆ. ಇವತ್ತು ಕೂಡ ರೈತ ಮತ್ತು ಆ ಕೃಷಿ ಕಾರ್ಮಿಕನ ಆವರೇಜ್ ಆದಾಯವೇನು? ಮೊನ್ನೆ ಪಾರ್ಲಿಮೆಂಟ್ ನಡೆಯುತ್ತಿರಬೇಕಾದರೆ ಚರ್ಚೆಯಾಗುತ್ತಿತ್ತು. The average income is Rs.25/- ನಾನು ನಿಮ್ಮನ್ನೆ ಕೇಳುತ್ತೇನೆ. ಇವತ್ತು 500 ಕೋಟಿ ರೂಪಾಯಿಗಳನ್ನು ಸಣ್ಣ ಅತೀ ಸಣ್ಣ ರೈತನಿಗೆ ಒಂದು ಕುಟುಂಬಕ್ಕೆ ಒಂದು ಸಾವಿರದಂತೆ 500 ಕೋಟಿಯನ್ನು ನಾನು ತೆಗೆದಿಟ್ಟಿದ್ದೇನೆ, ಇದು ನನ್ನ ಚುನಾವಣಾ ಪ್ರಣಾಳಿಕೆಯಲ್ಲಿತ್ತೇ? ಇರಲಿಲ್ಲ, ನೀವೇನು ನನಗೆ appreciate ಮಾಡಬೇಕಾಗಿರುವುದು, ಕೇವಲ ಚುನಾವಣಾ ಪ್ರಣಾಳಿಕೆಯಲ್ಲೆ ಹೇಳಿದ್ದನ್ನೇ ಮಾಡಕ್ಕಾಗದಿದ್ದ ಈ ಕಾಲದಲ್ಲಿ, ಚುನಾವಣಾ ಪ್ರಣಾಳಿಕೆಯ ಕಾಲದಲ್ಲಿ ಯಾರು ನನ್ನನ್ನು ಡಿಮಾಂಡ್ ಮಾಡಿರಲಿಲ್ಲ. ಈ ಬರಗಾಲದ ವಾತಾವರಣ ರೈತನ ಸಂಕಷ್ಟವನ್ನು ಅರ್ಥಮಾಡಿಕೊಂಡು ಒಂದೊಂದು ಕುಟುಂಬಕ್ಕೆ ಒಂದು ಸಾವಿರ ರೂಪಾಯಿಗಳ ಹಣವನ್ನು ಅವನ ಅಕೌಂಟ್ ಗೆ ಬ್ಯಾಂಕಿನಲ್ಲಿ ಜಮಾ ಮಾಡುತ್ತೇವೆ ಎಂಬುದು ನನಗನಿಸುತ್ತದೆ, ಸ್ವಾತಂತ್ರ್ಯ ಬಂದ ಮೇಲೆ ಯಾರೂ ಮಾಡಲಿಲ್ಲ. ನಾನು ಇವತ್ತು ಈ ಮನೆಯಲ್ಲಿ ಭರವಸೆಯನ್ನು ಕೊಡುತ್ತೇನೆ, ಪ್ಲೀಸ್, ಪ್ಲೀಸ್ ನೀವು [ಆಡಳಿತ ಪಕ್ಷದ ಸದಸ್ಯರು] ಟೇಬಲ್ ಬಡಿದರೆ ಆ ಕಡೆ [ವಿರೋಧ ಪಕ್ಷ] ಕುಳಿತಿರುವವರಿಗೆ ನೋವಾಗುತ್ತದೆ, ಅವರಿಗೆ ಸಮಾಧಾನವಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಟೇಬಲ್ ಬಡಿಯುವುದಿಲ್ಲ, ಅವರು ಕುಣಿದರೂ ನಾವು ಬೇಜಾರು ಮಾಡಿಕೊಳ್ಳುವುದಿಲ್ಲ.

ಉಪಸಭಾಧ್ಯಕ್ಷರು: ದಯವಿಟ್ಟು, ಅವರು ಮಾತನಾಡಿದ ಮೇಲೆ ಕ್ಲಾರಿಫಿಕೇಷನ್ ನಲ್ಲಿ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ನಾನೇನು ತಪ್ಪು ಮಾತನಾಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಷ್ಟೋ ಸಾರಿ ನಾವು ಮಾತನಾಡುವಾಗ ಇಂಟರ್ ಫಿಯರ್ ಆಗಿಲ್ಲವೇ? ನಾವೇನು interfer ಮಾಡುತ್ತೇವೆಯೇ? ಸ್ವಲ್ಪ ಸಮಾಧಾನ ಮಾಡಿಕೊಳ್ಳಿ, ತಾವು ಊಟವನ್ನೂ ಮಾಡಿ ಬಂದಿದ್ದೀರಿ, ತೃಪ್ತಿಯಿಂದಲೂ ಇದ್ದೀರಿ, ನಿಮ್ಮ ಬಜೆಟ್ ಬಗ್ಗೆಯೂ ನನಗೆ ತೃಪ್ತಿ ಇದೆ, ಒಪ್ಪಿಕೊಳ್ಳುತ್ತೇವೆ. ಆದರೆ, ಈ ದೇಶದ ಮತ್ತು ರಾಜ್ಯ ಜನತೆಗೆ ತಪ್ಪು ಮಾಹಿತಿ ಈ ಸದನದ ಮೂಲಕ ಹೋಗಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಏನು ತಪ್ಪು ಮಾಹಿತಿ ಹೇಳಿ ಸರ್,

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಪ್ಪೆಂದು ಹೇಳುತ್ತಿಲ್ಲ, ನಿಮ್ಮ ಶಾಸಕರು ಮೇಜನ್ನು ಬಡಿದಾಗ ಏನು ಖುಷಿಬರುತ್ತಿತ್ತು, ಈಗಾಗಲೆ ಸಿದ್ಧರಾಮಯ್ಯನವರು ಉಲ್ಲೇಖಿಸಿದರು, ನಬಾರ್ಡ್‌ನವರದು ಹನ್ನೊಂದುವರೆ ಪರ್ಸೆಂಟ್ ಇದ್ದಾಗ 6% ಬಡ್ಡಿಯನ್ನು ಕರ್ನಾಟಕ ರಾಜ್ಯದಲ್ಲಿ ಪ್ರಥಮವಾಗಿ ತಂದಿದ್ದು. ಅದನ್ನು ಇಡೀ ದೇಶನೂ ಕೂಡ appreciate ಮಾಡಿತು. ಶರದ್ ಪವಾರ್ ಅವರು ಕೂಡ appreciate ಮಾಡಿದರು. ನಬಾರ್ಡ್‌ನವರು 7%ಗೆ ಇಳಿಸಿದಾಗ, ಈಗ ನೀವು ತಂದಿದ್ದು 3% ಅಂದರೆ, ರೈತರ ಪರವಾಗಿ ಐದುವರೆ ಪರ್ಸೆಂಟ್ ಕನ್ಸೆಷನ್ ಕೊಟ್ಟವರು ನಾವು ವಿರೋಧಿಗಳು ಇವರು 3% ಕೊಟ್ಟವರು ರೈತರ ಪರ, ಮೇಜನ್ನು ತಟ್ಟಿರಪ್ಪ. ಐದುವರೆ ಪರ್ಸೆಂಟ್ gap ಅನ್ನು ತುಂಬಿ ನಾವು 6%ಗೆ ತಂದಿದ್ದೇವೆ, ಅದರದೇನು ಇಲ್ಲ, ಇದು ಒಂದು ಎರಡನೆಯದಾಗಿ ಒಂದು ಸಾವಿರ ರೂಪಾಯಿಯನ್ನು ಬೀಜಕ್ಕೆ ಬ್ಯಾಂಕ್ ಮೂಲಕ ಕೊಡುತ್ತಿದ್ದೇನೆ ಎಂದು ಹೇಳುತ್ತಿದ್ದೀರಿ, ನಿಮಗೆ ಗೊತ್ತಿದೆ, ಯಾವಾಗಲೂ natural calamity ಇದ್ದಾಗ, 1972ರಲ್ಲಿ ಬರಗಾಲವಿದ್ದಾಗ, ಏಕೆಂದರೆ, ಅವರು [ಮುಖ್ಯಮಂತ್ರಿಗಳು] 1983ಕ್ಕೆ ಸದನಕ್ಕೆ ಬಂದರು, ನಾವು ಈ ಸದನದಲ್ಲೇ ಇದ್ದೆವು ಅವರಿಗೂ ಮಾಹಿತಿ ಇರಬಹುದು, ಓದಿರಬಹುದು. 1972ರಲ್ಲಿ ಬರಗಾಲ ಬಂದಾಗ ರೈತರಿಗೆ ಪುಕ್ಕಟ್ಟೆ fodder ಕೊಡುವುದನ್ನು ಮಾಡಿದ್ದು ಕಾಂಗ್ರೆಸ್ ಸರ್ಕಾರ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ದಾವಣಗೆರೆಯಿಂದ ಸಾವಿರಾರು ಸಾಗಾಣಿಕೆ ವೆಚ್ಚವನ್ನು ಕೊಟ್ಟು fodder ತರಿಸಲಾಯಿತು, Seeds Corporation ನಿಂದ ಬೀಜವನ್ನು ಉಚಿತವಾಗಿ ಕೊಡುವುದನ್ನು ಮಾಡಲಾಯಿತು. ಇದೆಲ್ಲಾ ಇವೆ, ಅದಕ್ಕೆ

ಸುಮ್ಮನೆ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿ, ಸುಮ್ಮನೆ ಕ್ರಾಂತಿ, ಇತ್ಯಾದಿ ಹೇಳಿ ಕೊಚ್ಚಿಕೊಳ್ಳುವುದಕ್ಕೆ ಹೋಗಬೇಡಿ.

[ಗೊಂದಲ]

ಶ್ರೀ ಗೋವಿಂದ ಕಾರಜೋಳ [ಸಣ್ಣ ನೀರಾವರಿ ಯೋಜನೆ, ಅಂಕಿ ಸಂಖ್ಯೆ ಸಚಿವರು]: ಅಧ್ಯಕ್ಷರೆ, ನಾನು ಬಿಜಾಪುರ ಜಿಲ್ಲೆಯಿಂದ ಬಂದವನು. ಈ ನಾಡು ಅತ್ಯಂತ ಭೀಕರ ಬರಗಾಲ ಕಂಡದ್ದು 1972ರಲ್ಲಿ ನಾನು ಬಿಜಾಪುರ ಜಿಲ್ಲೆಯಲ್ಲಿ ಹುಟ್ಟಿ ಬೆಳೆದು ಬಂದವನು. ಆಗ ಒಂದು 1972ರಲ್ಲಿ ದನಕರುಗಳು ಉಳಿಯಲಿಲ್ಲ, ಕುಡಿಯುವುದಕ್ಕೆ ನೀರು ಸಿಗಲಿಲ್ಲ. ಆವತ್ತು ನೂರಾರು ಟ್ಯಾಂಕರ್ ಗಳನ್ನು ಸರ್ಕಾರ ಖರೀದಿ ಮಾಡಿ ನೀರುಸರಬರಾಜಿಗೆ ನಮ್ಮ ಜಿಲ್ಲೆಗೆ ಕೊಟ್ಟಿತ್ತು, ಕುಡಿಯುವುದಕ್ಕೆ ನೀರು ಸಿಗಲಿಲ್ಲ, ದನಗಳಿಗೆ ಮೇವು ಸಿಗಲಿಲ್ಲ, ಜನರು ಉಳಿಯಲಿಲ್ಲ, ಬಾಂಬೆ ಗೋವ, ಕರಾಡ್ ಎಲ್ಲಾ ಕಡೆಗೆ ಗುಳೆ ಹೋದರು. ಇವತ್ತು ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ, 1972 ಪುಕ್ಕಟೆ ಕಣಿಕಿ ಕೊಡುವ ಪರಿಸ್ಥಿತಿ ಉಳಿಯಲಿಲ್ಲ, ಕಟುಕರ ಮನೆಗಳಿಗೆಲ್ಲಾ ದನಗಳು ಹೋದವು, ಪುಕ್ಕಟೆ ದನಗಳನ್ನು ಕುಣಿಕಿ ಕೊಚ್ಚಿಬಿಟ್ಟು ಹೊಡೆದು ಹಚ್ಚಿದೆವು, ಇಂಥ ಒಂದು ಭೀಕರವಾದ ಬರಗಾಲ ಆವತ್ತು ಬಂದಿತ್ತು ಎಂಬುದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸದಸ್ಯರೊಬ್ಬರು: ಮೇವು ತಿಂದವರು ಯಾರು?

[ಗೊಂದಲ]

ಉಪ ಸಭಾಧ್ಯಕ್ಷರು: ಆಮೇಲೆ Clarification ಕೇಳುವವರು ಕೇಳಿ, ದಯವಿಟ್ಟು ಮುಗಿಸಲಿ, ಅವರು yield ಆಗಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಸನ್ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ 3% ನಲ್ಲಿ ಬಡ್ಡಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ, ಎಷ್ಟು ಜನ ರೈತರಿಗೆ ಸಾಲ ಕೊಡುತ್ತೀರೆನ್ನುವುದನ್ನು ದಯವಿಟ್ಟು ತಿಳಿಸಿ.

[ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ಆ ಕಡೆ ಕುಳಿತಿರತಕ್ಕಂತಹ ಮುಖಂಡರಿಗೆ, ವಿಶೇಷವಾಗಿ ಕಾಂಗ್ರೆಸ್ ಮುಖಂಡರಿಗೆ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಬಾರ್ಡ್‌ನವರು 7% ಬಡ್ಡಿ ದರದಲ್ಲಿ ಕೊಡುತ್ತಾರೆ. ನಾವು 3% ಗೆ ಸಾಲ ಕೊಡುತ್ತೇವೆ. ವ್ಯತ್ಯಾಸ 4% ಆಯಿತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: At least ಪ್ರತಿ ಪಕ್ಷದಲ್ಲಿ ಕುಳಿತಿರುವಂತಹ ನಮ್ಮ ನಾಯಕರು ತಿಳಿಯಬೇಕು ಇವತ್ತಿನ ಹಣಕಾಸಿನ ಇತಿಮಿತಿಯಲ್ಲಿ ಈ ಚುನಾವಣೆ ಆದ ಮೇಲೆ ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಂತಹ ಭರವಸೆಗಳೇನಿವೆ, ಐದು ವರ್ಷಗಳಿಗೆ ಕೊಟ್ಟಂತಹ ಭರವಸೆಗಳಲ್ಲಿ ಸುಮಾರು 90 ಭಾಗ implement ಮಾಡಿದ್ದರೆ ಈ ದೇಶದಲ್ಲಿ ಮೊದಲನೆಯದು ಭಾರತೀಯ ಜನತಾ ಪಾರ್ಟಿ ಸರ್ಕಾರ. ಎರಡನೆಯದು, ನಾನು ನಿಮಗೆ ಸವಾಲು ಎಂದರೆ ಸವಾಲು. ವಿನಂತಿ ಎಂದರೆ ವಿನಂತಿ. ಹೇಗಾದರೂ ತೆಗೆದುಕೊಳ್ಳಿ. ಇದು ನಾನು ವಿನಂತಿ ಮಾಡುತ್ತೇನೆ. ನೀವು ದೊಡ್ಡವರಿದ್ದೀರಿ, ನಾನು ಚಿಕ್ಕವನು ವಿನಂತಿ ಮಾಡುತ್ತೇನೆ. ನಾನು ನಿಮಗೆ ಕೇಳುತ್ತೇನೆ. "ಯಡಿಯೂರಪ್ಪನವರೇ, ನಿಮ್ಮದೇನ್ರೀ ಮಹಾ? ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವ ಎಲ್ಲಾ ಕಡೆ 2% ಬಡ್ಡಿಗೆ ಸಾಲ ಕೊಡುತ್ತಿದ್ದೇವೆ. ನೀವು 4% ಮತ್ತು 3% ಗೆ ಕೊಟ್ಟಿದ್ದೀರಿ". ಎಂದು ಹೇಳುವಂತಹ ನೈತಿಕ ಸ್ಥೈರ್ಯ ಆ ರೀತಿ ದೇಶದ ಯಾವುದಾದರೂ ಒಂದು ರಾಜ್ಯದಲ್ಲಿ ಈ ರೈತನಿಗೆ ನೆರವು ಕೊಟ್ಟಂತಹ ಉದಾಹರಣೆ ಇದ್ದರೆ ಹೇಳಿ. ನಾನು ಎದೆ ತಟ್ಟಿ ಹೇಳುತ್ತೇನೆ. I am sorry. This is too much they can't stand like this. I am very sorry.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಉತ್ತರ ಮುಗಿಯಲಿ. ಆ ಮೇಲೆ ಬೇಕಾದರೆ Clarificiation ಕೇಳಿ. please, ದಿನೇಶ್ ಗುಂಡೂರಾವ್‌ರವರೇ, ಅವರು ಈಲ್ಡ್ ಆಗಿಲ್ಲ. ನೀವು ಏಕೆ ಏಳುತ್ತೀರಿ? ನಿಮಗೆ ಉತ್ತರ ಬೇಕಾಗಿಲ್ಲ ಎಂದಾಯಿತು. ನಿಮಗೆ ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಬೇಕೋ, ಬೇಡವೋ? ಅವರು ಉತ್ತರ ಹೇಳುವುದು ಬೇಡವೆಂದರೆ ಬಿಟ್ಟು ಬಿಡಿ. ಯಾರಿಗೂ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೇಳುವ ವ್ಯವಧಾನ ಇಲ್ಲವೆಂದು ಕಾಣುತ್ತದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳ ಉತ್ತರ ಕೇಳುವ ತಾಳ್ಮೆ ಯಾರಿಗೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಹಳ ವರ್ಷಗಳ ನಂತರ ಇಷ್ಟು ದೊಡ್ಡ ಸಂಖ್ಯೆಯಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಬೇಕಾದರೆ ಅವರ ನೋವನ್ನೂ ನೀವು ಅರ್ಥ ಮಾಡಿಕೊಳ್ಳಬೇಕು. ಅವರ ಭಾವನೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ರಮಾನಾಥರೈ ರವರೇ, please. ಏನು ಈ ರೀತಿ intervention ಮಾಡಿಕೊಂಡು ಹೋದರೆ? ರಮಾನಾಥರೈ ರವರೇ, ದಯವಿಟ್ಟು ಕುಳಿತುಕೊಳ್ಳಿ..

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಗಮನಿಸುತ್ತಿದ್ದೀರಿ. 30 ಜನ ಪ್ರತಿ ಪಕ್ಷದ ನಾಯಕರು ಮಾತನಾಡುವಾಗ ಒಂದು ನಿಮಿಷ ನಾವು ಮಧ್ಯದಲ್ಲಿ ಯಾರೂ ಎದ್ದು ಮಾತನಾಡಲಿಲ್ಲ. disturb ಮಾಡಲಿಲ್ಲ. ಈ ಭಾಗದ ನಮ್ಮ ಸದಸ್ಯರು ಸಹ ಅಡ್ಡಿ ಮಾಡಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಅವರಿಗೆ ನೀವು ಇನ್ನೂ ಸರಿಯಾಗಿ ಟ್ರೈನಿಂಗ್ ಕೊಟ್ಟಿಲ್ಲ. ಒಬ್ಬ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಅವರ ಪಾರ್ಟಿಯವರಿಗೇ behave ಮಾಡುವುದಕ್ಕೆ ಬರುವುದಿಲ್ಲವೆಂದರೆ, ಆ sanctity ಯನ್ನೇ ನೀವು ಕಳೆದುಕೊಳ್ಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: Sir, Sir Please. ಒಂದು, ನಾನು ಈ ಮನೆಯಲ್ಲಿ ಭರವಸೆ ಕೊಡುತ್ತೇನೆ. ಈ ದೇಶದಲ್ಲಿ ಯಾವುದಾದರೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದವರು 3% ಬಡ್ಡಿಗೆ ಸಾಲ ಕೊಟ್ಟಿದ್ದಾರೆಂದು ನೀವು ಹೇಳಿ, ಹಾಗೆ ಹೇಳಿದ 24 ಗಂಟೆಗಳಲ್ಲಿ ನಾನೇನು ಕಡಿಮೆ ಮಾಡಬೇಕೋ ಅದನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಬೇರೆ ರಾಜ್ಯಗಳಲ್ಲಿ 6% ಇದ್ದುದು 3%ಗೆ ಇಳಿಸಿದ್ದೇವೆ. 6% ಮಾಡಿದಾಗ ಇಡೀ ದೇಶದಲ್ಲಿ ಎಲ್ಲಿ ಮಾಡಿದ್ದರು?

ಅಧ್ಯಕ್ಷರು: ಸಿದ್ಧರಾಮಯ್ಯನವರೇ, ಅದು ಬಿಟ್ಟು ಬಿಡಿ ಈಗ. ಅವರು ಉತ್ತರ Complete ಮಾಡಲಿ. ಆಮೇಲೆ ನೀವು ಬೇಕಾದ್ದು ಕೇಳಿ. ನಿಮಗೆ ಬೇಕಾದ Clarification ಕೇಳಿ. ಅವರು ಉತ್ತರ ಕೊಡುತ್ತಾರೆ. ಅವರು ಅಭಿಪ್ರಾಯ ಹೇಳುತ್ತಾರೆ, ನೀವೇಕೆ ಏಳುತ್ತೀರಿ? ಸಿದ್ಧರಾಮಯ್ಯನವರೇ please ಧ್ರುವನಾರಾಯಣ್‌ರವರೇ, ಈ ರೀತಿ ಪದೇ ಪದೇ ಏಳಬಾರದು. ಸುಧಾಕರ್, please ಕುಳಿತುಕೊಳ್ಳಿ. ಸಿ.ಟಿ. ರವಿ. ಅರವಿಂದ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಸಿದ್ದರಾಮಯ್ಯನವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು...

ಅಧ್ಯಕ್ಷರು: ರಮಾನಾಥ್‌ರೈರವರೇ, please ಕುಳಿತುಕೊಳ್ಳಿ. ಈ ರೀತಿ intervene ಮಾಡುವುದು ಸರಿಯಲ್ಲ. ಈ ರೀತಿ ಪದೇ ಪದೇ intervene ಮಾಡುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ complete ಮಾಡಲಿ. ಆ ಮೇಲೆ ನಿಮಗೆ ಏನು ಬೇಕು ಕೇಳಿ. ಬಜೆಟ್ ಮೇಲೆ ಈಗಾಗಲೇ ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ complete ಮಾಡಲಿ. ನಂತರ ನೀವು ಏನಾದರೂ ಕೇಳುವುದಾದರೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರ ಬೆವರು ಸುರಿಸಿ ದುಡಿಯುವಂತಹ ಈ ರೈತನ ಇವತ್ತಿನ ದಯನೀಯ ಪರಿಸ್ಥಿತಿ ಏನಿದೆ, ಇದಕ್ಕೆ ಯಾರು ಕಾರಣ ಸ್ವಾಮಿ? ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ನಮ್ಮ ರೈತ 14% ನಿಂದ 15% ಬಡ್ಡಿ ಕಟ್ಟುತ್ತಿದ್ದ. ದುಡಿದ ಎಲ್ಲಾ ಹಣ ಬಡ್ಡಿ ತುಂಬುವುದಕ್ಕೇ ಆಗುತ್ತಿತ್ತು. ಆ ಪುಣ್ಯಾತ್ಮ ಅಟಲ್ ಬಿಹಾರಿ ವಾಜಪೇಯಿ ಅದನ್ನು 9%ಗೆ ಇಳಿಸಿದರು.

(ಗೊಂದಲ)

ಅಧ್ಯಕ್ಷರು:- ನೋಡಿ, ಇದು ಸದನ. ಎಲ್ಲರೂ ಒಂದು ಗೌರವವನ್ನು ಕಾಯ್ದುಕೊಂಡು ಹೋಗಬೇಕು. ಬೇರೆ ಬೇರೆ ರೀತಿ ಕೂಗು ಹಾಕುವುದೆಲ್ಲಾ ಇಲ್ಲಿ ನಡೆಯುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕಾಲಕ್ಕೆ ತಕ್ಕಂತೆ ಹಳ್ಳಿ ಬಿಟ್ಟು, ನಗರಕ್ಕೆ ಗ್ರಾಮೀಣ ಜನ ವಲಸೆ ಬರುತ್ತಿರುವಂತಹ ಈ ಸಂದರ್ಭ, ಇನ್ನೊಂದು 8-10 ವರ್ಷಗಳಾದರೆ, ಈಗಾಗಲೇ 30% population ನಗರಕ್ಕೆ ಬರುತ್ತಿದೆ. ಇನ್ನೊಂದು 25-30 ವರ್ಷಗಳಾದರೆ, ಹಳ್ಳಿಯಲ್ಲಿರುವ ಬಡವನನ್ನು, ರೈತನನ್ನು ಮರೆತರೆ 50% ನಗರಕ್ಕೆ ವಲಸೆ ಬರಬಹುದು ಎಂಬ ವಾತಾವರಣ ಇರುವಂತಹ ಕಾಲದಲ್ಲಿ, ಹಳ್ಳಿ ಬಿಟ್ಟು ರೈತ ನಗರಕ್ಕೆ ವಲಸೆ ಬರದಂತೆ ತಡೆದು, ಅವನಿಗೆ ಬೇಕಾದಂತಹ ಮೂಲಭೂತ ಸವಲತ್ತನ್ನು ಒದಗಿಸುವ ಬಗ್ಗೆ ಒಂದು National debate ಆಗಬೇಕಾಗಿದೆ. ಹಳ್ಳಿ ಮರೆತೆವು, ರೈತರನ್ನು ಮರೆತೆವು, ಮಹಾತ್ಮ ಗಾಂಧಿಯವರನ್ನು ಮರೆತೆವು, ಗ್ರಾಮೀಣಾಭಿವೃದ್ಧಿ ಮರೆತೆವು, ಭಿಕ್ಷುಕನಂತೆ ಕೈ ಚಾಚಿ ಬೇಡುವಂತಹ ಸ್ಥಿತಿಗೆ ತಂದೆವು. ಇಷ್ಟು ವರ್ಷಗಳಾದರೂ ರೈತನ ಹೊಲಕ್ಕೆ ನೀರು ಕೊಡಲಿಲ್ಲ. ಗ್ರಾಮೀಣಾಭಿವೃದ್ಧಿಯಾಗಲಿಲ್ಲ, ಯಾವುದೇ ರೀತಿಯಲ್ಲಿ ಸುಧಾರಣೆಯಾಗಲಿಲ್ಲವೆಂದು ನಾವು ಮತ್ತು ನೀವೇ ಒಪ್ಪಿಕೊಳ್ಳುತ್ತಿದ್ದೇವೆ. parliament ನಲ್ಲಿ ಈ ವಿಷಯ ಚರ್ಚೆಯಾಯಿತು. ಯಾರು ಇದಕ್ಕೆ ಕಾರಣ ಎನ್ನುವುದಕ್ಕಿಂತ, ಈಗಲಾದರೂ ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಹೋಗುವುದನ್ನು, ತಪ್ಪಿಸಿ, ಗ್ರಾಮೀಣ ಜನರಿಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಕೃಷಿಯಲ್ಲಿ ತೊಡಗಿರುವಂತಹ ರೈತ ಯಾರಿದ್ದಾನೆ, ಅವನಿಗೆ ಸಹಾಯ ಮಾಡಬೇಕು. ಗ್ರಾಮೀಣ ಪ್ರದೇಶ ಇಂದು ವೃದ್ಧಾಶ್ರಮವಾಗಿದೆ. ಇಂದು ಯಾವ ರೈತನ ಮಕ್ಕಳೂ ಹಳ್ಳಿಯಲ್ಲಿಲ್ಲ. ನಮ್ಮ ಮತ್ತು ನಿಮ್ಮ ಮಕ್ಕಳನ್ನು ನೋಡಿಕೊಳ್ಳಿ. ಈ ರೀತಿ ಹಳ್ಳಿ ಬಿಟ್ಟು ನಗರಕ್ಕೆ ವಲಸೆ ಬರುತ್ತಿದ್ದಾರೆ. ವಯಸ್ಸಾದ

ತಂದೆ ತಾಯಿಗಳೇ ಹೊಲ ನೋಡಿಕೊಳ್ಳುತ್ತಿದ್ದಾರೆ. ಇವತ್ತು 50–60 ಎಕರೆ ಜಮೀನಿದ್ದರೂ, ಅದು ಲಾಭದಾಯಕವಲ್ಲ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಕಬ್ಬು ಬೆಳೆಗಾರರ ಮತ್ತು ಕಾಫಿ ಬೆಳೆಗಾರರ ಸಮಸ್ಯೆಗಳು ಇವತ್ತು ಹೆಚ್ಚಾಗಿವೆ. ಇವತ್ತು ನಮ್ಮ ಪರಿಸ್ಥಿತಿಗಳು ಏನಾಗಿವೆ ಎಂಬುದನ್ನು ನೋಡಿ. ಅದಕ್ಕಾಗಿ ನಾನು ಹೇಳುತ್ತಿರುವಂಥಾದ್ದು, ನಾನೇನು ಯಾರೂ ಮಾಡದಿರುವಂತಹ ದೊಡ್ಡ ಸಾಹಸವನ್ನು ಮಾಡಿದ್ದೇನೆಂದು ನಾನು ಹೇಳುತ್ತಿಲ್ಲ...

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ,.....

[ಗೊಂದಲ]

ಅಧ್ಯಕ್ಷರು: Please, ಅವರು ತಮ್ಮ ಉತ್ತರವನ್ನು complete ಮಾಡಲಿ. ಮಾನ್ಯ ರೇವಣ್ಣನವರೆ, ಎಲ್ಲದಕ್ಕೂ intervene ಮಾಡುವುದು ಬೇಡ. ಮಾನ್ಯ ರೇವಣ್ಣನವರೆ, Please ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ರೀತಿ intervene ಮಾಡುವುದು ಸರಿಯಲ್ಲ. ಅವರು ಈಗ ಯೀಲ್ಡ್ ಆಗಿಲ್ಲ. ನಿಮ್ಮ ಸ್ಪಷ್ಟೀಕರಣವೇನಾದರೂ ಇದ್ದರೆ ನಂತರ ಅದನ್ನು ಕೇಳಿ. please ಅವರು ಉತ್ತರ continue ಮಾಡಲಿ. ನಂತರ ನೀವು ಮಾತನಾಡುವಿರಂತೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಯಡಿಯೂರಪ್ಪ ಏನು? ಬಿ.ಜೆ.ಪಿ. ಏನು? ಇತರ ಪಕ್ಷಗಳೇನು? ರಾಜ್ಯದ ಜನ ಅಳೆದು ಸುರಿದೂ ಇವತ್ತು 110 ಜನರನ್ನು ತಂದು ಇಲ್ಲಿ ಕೂರಿಸಿದ್ದಾರೆ. ನಾನು ಹೇಳುವಂಥಾದ್ದು, ಹೋರಾಟಕ್ಕೆ ಕಣ ಹೊರಗಡೆ ಇದೆ, ಅಖಾಡ ಹೊರಗಡೆ ಇದೆ. ಲೋಕಸಭಾ ಚುನಾವಣೆ ಬರುತ್ತಿದೆ. ಅಲ್ಲಿ ನಾವು ಮತ್ತು ನೀವೆಲ್ಲಾ ಒಟ್ಟಾಗಿ ಸೇರಿ ನಿಮ್ಮ ಸಾಧನೆ ಏನು? ನಮ್ಮ ಸಾಧನೆ ಏನು? ಎಂದು ಒರೆ ಹಚ್ಚಲಿಕ್ಕೆ ಇನ್ನು ಆರು ತಿಂಗಳೂ ಕೂಡ ಟೈಮ್ ಉಳಿದಿಲ್ಲ. ಆ ಕಣದಲ್ಲಿ ನೋಡೋಣ. ಇಲ್ಲಿ ವಾಸ್ತವಿಕವಾದ ಸತ್ಯ ಸಂಗತಿಯನ್ನು ಮರೆ ಮಾಚುವಂತಹ ಕೆಲಸ ನಾವ್ಯಾರೂ ಮಾಡುವುದು ಬೇಡ. ನೀವು ಇಷ್ಟು ಕೊಟ್ಟಿರಿ, ಕೇಂದ್ರ ಅಷ್ಟು ಕೊಟ್ಟಿತು ಎಂಬುದನ್ನು ನಾನು ಕೇಳುವುದಿಲ್ಲ. ಆದರೆ ಬೇರೆ ರಾಜ್ಯಗಳು ಏಕೆ 3%ಗೆ ಸಾಲ ಕೊಡುತ್ತಿಲ್ಲ? 4%ಗೆ ಸಾಲ ಏಕೆ ಕೊಡುತ್ತಿಲ್ಲ?

ಶ್ರೀ ಸಿದ್ದರಾಮಯ್ಯ:– ಬೇರೆ ಬಿ.ಜೆ.ಪಿ. ಸರ್ಕಾರಗಳು ಕೊಡುತ್ತಿವೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ:- ದಯಮಾಡಿ ಒಂದು ನಿಮಿಷ. I am sorry, Sir, ನಾನು ಬೇರೆ ಬಿ.ಜೆ.ಪಿ. ರಾಜ್ಯಗಳ ಬಗ್ಗೆ ಮಾತನಾಡುತ್ತಿಲ್ಲ. ನಾನು ನನ್ನ ರಾಜ್ಯದ ಬಗ್ಗೆ ಮಾತನಾಡುತ್ತಿದ್ದೇನೆ. ನನ್ನ ಬಗ್ಗೆ ಮಾತನಾಡುತ್ತಿದ್ದೇನೆ...

[ಗೊಂದಲ]

ಅಧ್ಯಕ್ಷರು: ನಿಮಗೆ ಸ್ಪಷ್ಟೀಕರಣ ಬೇಕಾದರೆ ನಂತರ ಕೇಳಿ. ಈ ರೀತಿ intervene ಮಾಡುವುದು ಸರಿಯಲ್ಲ. ಅವರು ಮೊದಲು ತಮ್ಮ ಉತ್ತರ complete ಮಾಡಲಿ. ನಂತರ ನಿಮಗೆ ಬೇಕಾದಂತೆ ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾರಿಗೆ ಕಳಕಳಿ ಇರುತ್ತದೆ, ಯಾರು ರೈತರ ಮಧ್ಯೆ ಬೆಳೆದು, ಅವರ ಸಂಕಷ್ಟ ಅರ್ಥ ಮಾಡಿಕೊಂಡು, ಯಾರಿಗೆ ಆ ಬಡತನದ ಬೇಗೆ ಗೊತ್ತಿದೆ, ಅವರಿಗೆ ಮಾತ್ರ ರೈತನ ಮನದಾಳದ ನೋವು ಅರ್ಥವಾಗುತ್ತದೆ. ಅದನ್ನೇ ನಾನು ನಾಡಿನ ಜನರ ಮುಂದೆ ಚುನಾವಣಾ ಪ್ರಣಾಳಿಕೆಯಲ್ಲಿ ಇಟ್ಟಿದ್ದೆ. ನನಗೆ ಬಜೆಟ್ ಮಂಡಿಸಲಿಕ್ಕೆ ಆಗಲಿಲ್ಲ. ನಾನು ಅದನ್ನು ಕಾರ್ಯರೂಪಕ್ಕೆ ತರುತ್ತೇನೆ, ನನಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದೆ. ಐದು ವರ್ಷ ಮಾಡಬೇಕಾದಂತಹ ನನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಶೇಕಡ 90 ಭಾಗ implement ಮಾಡಿದ್ದೇನೆ. ಚುನಾವಣಾ ಪ್ರಣಾಳಿಕೆಯಲ್ಲಿ ಹೇಳದೆ ಇದ್ದಂತಹ ಅನೇಕ ಸಂಗತಿಗಳನ್ನೂ ಸಹ ಮಾಡಿದ್ದೇನೆ. ಸಾವಯವ ಕೃಷಿಗೆ ವಿಶೇಷ ಒತ್ತು ಕೊಟ್ಟಿದ್ದೇನೆ. ಇದು ಬಹಳ ಸುಲಭವಾದುದು, ಹಗುರವಾದುದು ಎಂದು ಪ್ರತಿಪಕ್ಷದ ನಾಯಕರು ಯಾರಾದರೂ ಭಾವಿಸಿದ್ದರೆ, ಅದಕ್ಕೆ ನಾನೇನೂ ಉತ್ತರ ಕೊಡಲಿಕ್ಕೆ ಇಷ್ಟ ಪಡುವುದಿಲ್ಲ. ನಾನು ವಿನಮ್ರತೆಯಿಂದ ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಣಕಾಸಿನ ಇತಿಮಿತಿಯಲ್ಲಿ ನಾನು ಮಾಡಬಹುದಾದ್ದನ್ನು ಮಾಡಿದ್ದೇನೆ. ರಾಷ್ಟ್ರಪತಿ ಆಳ್ವಿಕೆ ಆಯಿತು, ನಾನು ಕೇಳುತ್ತೇನೆ, ಈ ಮನೆಯ ಮೂಲಕ ನಾಡಿನ ಜನರನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಏನು ಅನುಕೂಲವಾಯಿತು? ಕೇಂದ್ರದಲ್ಲಿ ನಿಮ್ಮ ಸರ್ಕಾರವಿತ್ತು. ರಾಷ್ಟ್ರಪತಿ ಆಳ್ವಿಕೆ ಇತ್ತು. ಅತಿವೃಷ್ಟಿಯಿಂದ ಜನ ಸಂಕಷ್ಟದಿಂದ ನರಳುತ್ತಿದ್ದಾರೆ. ಅದಕ್ಕಾಗಿ 2800 ಕೋಟಿ ರೂ.ಗಳನ್ನು ಮಂಜೂರು ಮಾಡಬೇಕೆಂದು ಮೂರು ಬಾರಿ ಮೆಮೋರ್‍ಯಾಂಡಮ್ ಕೊಟ್ಟೆವು. ಭಿಕ್ಷೆ ಕೊಟ್ಟಂತೆ ಕೇಂದ್ರ ಸರ್ಕಾರ 300 ಕೋಟಿ ರೂ.ಗಳನ್ನು ಕೊಟ್ಟಿತು. ನಾನು ಆ ಬಗ್ಗೆ ದೂರಿದೆನೇ? ನಾನು ಹೇಳುತ್ತಿರುವುದು, ರಾಜ್ಯ ಸರ್ಕಾರಕ್ಕೆ .ಕೇಂದ್ರ ಸರ್ಕಾರದಿಂದ ಎಲ್ಲಾ ಕಾಲದಲ್ಲೂ, ಅದು ನೀರಾವರಿ ಇರಲಿ, ಸವಲತ್ತು ಒದಗಿಸಿಕೊಡುವುದರಲ್ಲಿ ಇರಲಿ, ನಮಗೆ ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಿಕೊಳ್ಳುವಂತಹ ಕೆಲಸ ಆಗಬೇಕಾಗಿದೆ. ಬೆಂಗಳೂರು ಇವತ್ತು ಐಟಿ

ಸೆಂಟರ್ ಆಗಿದೆ. 11 ಐಐಟಿ ಸೆಂಟರ್‌ಗಳಲ್ಲಿ ಎಂಟು ಬೇರೆ ಬೇರೆ ರಾಜ್ಯಗಳಿಗೆ ಕೊಟ್ಟಿದ್ದಾರೆ. ಮಾನ್ಯ ಪ್ರಧಾನಿಯವರಿಗೆ ಪತ್ರ ಬರೆಯುತ್ತಿದ್ದೇನೆ. ಮಾನ್ಯ ರೇವಣ್ಣನವರು, ಮಾನ್ಯ ಖರ್ಗೆಯವರು ಮತ್ತು ಮಾನ್ಯ ಕುಮಾರಸ್ವಾಮಿಯವರು ಎಲ್ಲರೂ ಹೋಗೋಣ. ನಮ್ಮದು ಐಟಿ ಸಿಟಿ, ನಮಗೆ ಕೊಡಲಿಲ್ಲ. ನಾನು ನಿನ್ನೆ ತಾನೇ ಈ ಬಗ್ಗೆ ಮಾನ್ಯ ಪ್ರಧಾನಿಯವರಿಗೆ, ಸಂಬಂಧಪಟ್ಟ ಸಚಿವರಿಗೆ ಪತ್ರ ಬರೆದಿದ್ದೇನೆ. ಒಂದಲ್ಲ ಒಂದು ರೀತಿ ನಮ್ಮ ರಾಜ್ಯಕ್ಕೆ, ಎಲ್ಲರ ಕಾಲದಲ್ಲಿ ಅನ್ಯಾಯ ಆಗಿದೆ. ಬೇರೆ ರಾಜ್ಯಗಳ ಲೋಕಸಭಾ ಸದಸ್ಯರು ಬಲಾಢ್ಯರು ಇರುವಂತಹ ಕಾರಣಕ್ಕೆ ನಮಗೆ ಅನ್ಯಾಯವಾಗುತ್ತಿರುವುದನ್ನು ಸರಿಪಡಿಸುವಂತಹ ಕೆಲಸ ಮಾಡೋಣ. ಮಾನ್ಯ ಕುಮಾರ ಸ್ವಾಮಿಯವರು ಮೊನ್ನೆ ಹೇಳಿಕೆಯೊಂದನ್ನು ಕೊಟ್ಟಿದ್ದರು. ನಾನು ಒಂದು ಮಾತನ್ನು ಹೇಳಿದೆ. ಈ ಸತ್ಯವನ್ನು ಒಪ್ಪಿಕೊಳ್ಳಬೇಕು ಸ್ವಾಮಿ. ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲರ ಒಟ್ಟಾರೆ ಪ್ರಯತ್ನದಿಂದ ನಾವು ರೈತನ 25 ಸಾವಿರ ರೂ.ಗಳವರೆಗಿನ ಸಾಲವನ್ನು ಮನ್ನಾ ಮಾಡಿದೆವು. ನೇಕಾರರ ಮತ್ತು ಮೀನುಗಾರರ ಸಾಲಗಳನ್ನೂ ಸಹ ಮನ್ನಾ ಮಾಡಿದೆವು. ಆ ಸಾಲ ಮನ್ನಾ ಮಾಡಿದಂತಹ ಸಂದರ್ಭದಲ್ಲಿ, ರೈತನಿಗೆ ದುಡ್ಡು ಎಲ್ಲಿಂದ ಕೊಡುತ್ತೀರಿ? ಎಂದು ಇಲ್ಲೇ ಕೂಗು ಎದ್ದಿತು. ರೈತನ ಸಾಲ ಮನ್ನಾ ಮಾಡಿದ ಬಾಬ್ತು 1750 ಕೋಟಿ ರೂ.ಗಳ ದುಡ್ಡನ್ನು ನಾವು ಈಗಾಗಲೇ ಸಂಪೂರ್ಣವಾಗಿ ಕಟ್ಟಿಯಾಗಿದೆ. ಅದನ್ನು ಕೊಡಿ ಎಂದು ಇವತ್ತು ನಾವು ಕೇಂದ್ರ ಸರ್ಕಾರವನ್ನು ಕೇಳುತ್ತಿದ್ದೇವೆ. ಇವತ್ತು ಸಾಲ ಮನ್ನಾ ಯೋಜನೆ, Suppose ನಾವು ನಮ್ಮ Co-operative loan ಮನ್ನಾ ಮಾಡಿರಲಿಲ್ಲ ಅಂದರೆ, ಇವತ್ತು ಆ loanಗೆ ಕೇಂದ್ರ ಸರ್ಕಾರದಿಂದ ಅನುಕೂಲ ಆಗುತ್ತಿತ್ತು. ತಮಿಳುನಾಡು ಈಗಾಗಲೇ ಕೇಂದ್ರಕ್ಕೆ ಒತ್ತಾಯ ಮಾಡಿದೆ. ಮಾನ್ಯ ಹಣಕಾಸಿನ ಸಚಿವರು ಬಂದಾಗ ನಾವು ಒತ್ತಾಯ ಮಾಡಿದ್ದೇವೆ, ನಾವೇನು ರೈತರಿಗೆ 1750 ಕೋಟಿ ರೂ.ಗಳ ಸಾಲ ಮನ್ನಾ ಮಾಡಿದ್ದೇವೆ. ಅದನ್ನು re-imbursement ಮಾಡಿ ಎಂದು ಕೇಂದ್ರವನ್ನು ಕೇಳಿಕೊಳ್ಳುತ್ತಿದ್ದೇವೆ. ತಮಿಳುನಾಡಿನವರು ಒತ್ತಾಯ ಮಾಡಿದಾಗ, ಅದನ್ನು ನಾವು consider ಮಾಡುತ್ತೇವೆಂದು ಹೇಳುವಂತಹ ಸಂದರ್ಭದಲ್ಲಿ ನಮ್ಮ ನಾಯಕರೊಬ್ಬರು 'ಇವರಿಗೆ ನಾಚಿಕೆಯಾಗಬೇಕು, ಕೇಂದ್ರಕ್ಕೆ ಸಾಲ ಮನ್ನಾ ಮಾಡಿದ 1750 ಕೋಟಿ ರೂ.ಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ, ಇದು ಹೇಗೆ ಸರಿ' ಎಂದು ಹೇಳಿಕೆ ಕೊಟ್ಟರು. ಆ ವಾದವನ್ನೂ ಸಹ ನಾನು ಕೇಳಿದ್ದೇನೆ. ಆದರೆ ನಾನೇನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಇವತ್ತು ರಾಜ್ಯಕ್ಕೆ ಸಿಗಬೇಕಾದಂತಹ ನ್ಯಾಯಬದ್ಧವಾದಂತಹ ಹಣ ನಮಗೆ ಸಿಗುತ್ತಿಲ್ಲ. ಅದು ಅತಿವೃಷ್ಟಿ ಬಗ್ಗೆ ಇರಲಿ ಅಥವಾ ರೈತನ ಸಾಲ ಮನ್ನಾ ಮಾಡುವುದರ ಬಗ್ಗೆ ಇರಲಿ. ಅದನ್ನು

ಮಾಡಬೇಕಾಗಿದೆ. ನಾನು ನಿಮ್ಮನ್ನೇ ಕೇಳುತ್ತೇನೆ, ನಾನು ಪ್ರತಿಪಕ್ಷದ ನಾಯಕನಾಗಿ ಇಲ್ಲಿ ಕೆಲಸ ಮಾಡಿದ್ದೇನೆ. ಬೇರೆ ಬೇರೆ ವಿಷಯಗಳಲ್ಲಿ ನಮ್ಮ ಮತ್ತು ನಿಮ್ಮಲ್ಲಿ ಬೇರೆ ಬೇರೆ ಭಿನ್ನಾಭಿಪ್ರಾಯಗಳು ಇರಬಹುದು. ಕಾವೇರಿ ನದಿ ನೀರಿನ ವಿವಾದ, ಕೃಷ್ಣಾ ನದಿ ನೀರಿನ ವಿವಾದ, ರೈತನ ಪ್ರಶ್ನೆ ಬಂತು, ಭಾಷೆಯ ಪ್ರಶ್ನೆ ಬಂತು, ಆ ಸಂದರ್ಭದಲ್ಲಿ ಪ್ರತಿಪಕ್ಷದಲ್ಲಿದ್ದು, ಒಂದು ಒಡಕು ಮಾತು ಹೇಳಿದ್ದು, ನಿಮ್ಮ ಜೊತೆ ನಿಯೋಗದಲ್ಲಿ ಬರದೇ ಇದ್ದಂತಹ ಒಂದು ಉದಾಹರಣೆಯನ್ನು ರಾಜ್ಯದಲ್ಲಿದ್ದರೆ ನೀವು ನನಗೆ .ಕೊಡಿ. ಆದರೆ ನೀವೇನು ಮಾಡಿದಿರಿ? ಮೊನ್ನೆ ನಾನು ಈ ಮನೆಯೊಳಗೆ ಹೇಳಿದೆ. ರಸಗೊಬ್ಬರದ ಕೊರತೆಯನ್ನು ಎದುರಿಸುತ್ತಿರುವ ಈ ಸಂಕಷ್ಟದ ಕಾಲದಲ್ಲಿ ನಿಯೋಗವೊಂದನ್ನು ಕೇಂದ್ರಕ್ಕೆ ಕರೆದೊಯ್ಯುತ್ತೇನೆಂದು ಹೇಳಿದಾಗ, ಯಡಿಯೂರಪ್ಪ ಅಧಿಕಾರಕ್ಕೆ ಬಂದ ಕೇವಲ 25–30 ದಿವಸಗಳಲ್ಲಿ, ನಾನೇನು ಅಪರಾಧ ಮಾಡಿದ್ದೆ? ಪ್ರತಿಪಕ್ಷದ ನಾಯಕರಿಗೆ ನೋವಾಗುವ ತರಹ ನಾನೇನು ನಡೆದುಕೊಂಡಿದ್ದೆ? ನಿಮ್ಮೆಲ್ಲರಿಗೂ ತಿಳಿಸಿ, ವಿನಂತಿ ಮಾಡಿ, ದೂರವಾಣಿ ಮೂಲಕ ಪ್ರತಿಪಕ್ಷದ ನಾಯಕರನ್ನು ಸಂಪರ್ಕ ಮಾಡಿ, ಒಂದು ನಿಯೋಗ ಹೋಗೋಣವೆಂದು ಹೇಳಿದರೆ, ನನ್ನ ಜೊತೆಗೆ ನೀವು ನಿಯೋಗ ಬರಲಿಲ್ಲ. ನಮ್ಮ ಕಾಂಗ್ರೆಸ್‌ನ ಸ್ನೇಹಿತರು Separate ಆಗಿ ಹೋದರು. ಇದರ message ಏನು? ಅದರ ಪರಿಣಾಮವೇನು? ಜನ ಇದನ್ನು ಹೇಗೆ ಅರ್ಥ ಮಾಡಿಕೊಂಡರು? ನಾನು ಅತ್ಯಂತ ವಿನಯದಿಂದ ಪ್ರತಿಪಕ್ಷದ ನಾಯಕರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಬೇಕಾದ್ದನ್ನು ಹೇಳಿ, ನಾವು ಮತ್ತು ನೀವು ಸೇರಿ ಅದನ್ನು ಸರಿಪಡಿಸಿಕೊಳ್ಳೋಣ. ನಾನು ತಪ್ಪಿದ್ದನ್ನು ತಿದ್ದಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಆದರೆ ನಾನು ಹೇಳುವಂಥಾದ್ದು, ಇಷ್ಟು ಒಗ್ಗಟ್ಟಾಗಿರಬೇಕು, ಒಂದಾಗಿರಬೇಕು ಎಂದು ಹೇಳುತ್ತಿರುವಂತಹ ಈ ಕಾಲದಲ್ಲಿ ಕರ್ನಾಟಕ ರಾಜ್ಯದ ಜ್ವಲಂತ ಸಮಸ್ಯೆಗಳನ್ನು ತೆಗೆದುಕೊಂಡು ಕೇಂದ್ರಕ್ಕೆ ಹೋದಾಗ, ನಮ್ಮಲ್ಲಿ ಒಗ್ಗಟ್ಟು ಬೇಕಲ್ಲವೇ? ಈ ನಾಡಿನ ನೆಲ, ಜಲ ಮತ್ತು ಭಾಷೆ ಪ್ರಶ್ನೆ ಬಂದಾಗ ನಾವು ಬೇರೆ ಬೇರೆ ಹೋಗುತ್ತೇವೆ ಎಂದು ಹೇಳಿದರೆ, ರಾಜ್ಯದ ಜನ ನಮ್ಮ ಬಗ್ಗೆ ಏನು ತಿಳಿದುಕೊಳ್ಳಬಹುದು? ಇವತ್ತು ನೀವು 3% ಬಡ್ಡಿ ಬಗ್ಗೆ ಮಾತನಾಡಿದಿರಿ. ಹೌದು, ಯಡಿಯೂರಪ್ಪನವರೆ, 4% ಇದ್ದದ್ದನ್ನು 3% ಮಾಡಿದ್ದೀರಿ ಎಂದು ಹೇಳುವ ಔದಾರ್ಯತೆ ಮತ್ತು ದೊಡ್ಡತನ ನಿಮ್ಮಲ್ಲಿರಬೇಕಿತ್ತು. ದೇಶದಲ್ಲಿ ಯಾರೂ ಮಾಡಿಲ್ಲವೆಂದು ನಾನು ಹೇಳುತ್ತಿದ್ದೇನೆ, ಇದೇನೋ ಬಹಳ ದೊಡ್ಡ ಸಾಧನೆ, ಇದರಿಂದ ರೈತ ಬದುಕಿಯೇ ಬಿಟ್ಟಿದ್ದಾನೆ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಒಂದು ಪ್ರಾಮಾಣಿಕ ಹೆಜ್ಜೆಯನ್ನು ಆ ದಿಕ್ಕಿನಲ್ಲಿ ಇಟ್ಟಿದ್ದೇನೆ. ಸಂಪನ್ಮೂಲ ಅನುಕೂಲವಾದರೆ ಇನ್ನೂ ಹೆಚ್ಚು ಮಾಡುವುದಕ್ಕೆ ಅನುಕೂಲವಾಗಬಹುದು

ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಉದಾಹರಣೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ಮತ್ತು ಹಿಂದುಳಿದವರ ಬಗ್ಗೆ ನಾವು ಬಹಳ ಮಾತನಾಡುತ್ತೇವೆ. ಅವರಿಗೆ ಎಷ್ಟು ಕೊಡುತ್ತಿದ್ದೀರಿ ಸ್ವಾಮಿ? ಬೆಲೆ ಗಗನಕ್ಕೇರಿರುವಂತಹ ಸಂದರ್ಭದಲ್ಲಿ ಹಾಸ್ಟೆಲ್‌ನಲ್ಲಿ ಊಟಕ್ಕೆ ಒಂದು ತಿಂಗಳಿಗೆ 450 ರೂ.ಗಳನ್ನು ನಾವು ಕೊಡುತ್ತಿದ್ದೆವು. ಈಗ jump ಎಷ್ಟು ಆಗಿದೆ? 450 ರೂ.ಗಳಿಂದ 650 ರೂ.ಗಳಿಗೆ ನಾವು ಏರಿಸಿದ್ದೇವೆ. ನನ್ನ ಹಣಕಾಸಿನ ಇತಿಮಿತಿಯಲ್ಲಿ ಅಷ್ಟು ಕೊಟ್ಟಿದ್ದೇನೆ. ಆ ಮಕ್ಕಳಿಗೆ ಒಂದು ತಿಂಗಳಿಗೆ 1 ಸಾವಿರ ರೂ.ಗಳನ್ನು ಕೊಟ್ಟರೂ ಕಡಿಮೆಯೇ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಹಣಕಾಸಿನ ಇತಿಮಿತಿಯಲ್ಲಿ 450 ರೂ.ಗಳಿಂದ 650- ರೂ.ಗಳಿಗೆ ಏರಿಸಿ ಕೊಟ್ಟಿದ್ದೇನೆ. ಯಾವ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು, ಇವತ್ತು ಹೊಸಲು ದಾಟಿ ಮನೆ ಹೊರಗೆ ಬರುವುದು ಅವರಿಗೆ ಗೊತ್ತಿಲ್ಲ. ಹೊರಗೆ ಬಂದರೂ ವಾಪಸ್ ಮನೆಗೆ ಹೋಗುತ್ತಿದ್ದರು. ಇವತ್ತು ನಾಲ್ಕು ಕಾಸು ಸಂಪಾದನೆ ಮಾಡಲು ಶುರು ಮಾಡಿದ ಮೇಲೆ, ಧೈರ್ಯವಾಗಿ ಅವರ ಮಕ್ಕಳಿಗೆ ಶಿಕ್ಷಣ ಕೊಡುತ್ತಿದ್ದಾರೆ.

ಇಂತಹ ಒಂದು ಸಂದರ್ಭದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ 6% ನ ಹಾಗೆ ಬಡ್ಡಿ ಕೊಡುವುದು. ನಾನು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರಲಿಲ್ಲವೇ? ನಾನು ಹೇಳಿದ್ದೆನು, ಅದನ್ನು ಕಾರ್ಯರೂಪಕ್ಕೆ ತಂದಿದ್ದೇನೆ. ಸುಸ್ತಿ ನಿಧಿ 5,000 ರೂಪಾಯಿ ಇಂದ 10,000 ರೂಪಾಯಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇವತ್ತು ರೈತರ pumpsetಗಳ ಬಗ್ಗೆ ಒಂದು ವಾರದಿಂದ ಇಲ್ಲಿ ಚರ್ಚೆಯಾಯಿತು. ಯಡಿಯೂರಪ್ಪನವರೇ ಎಲ್ಲಿಂದ ಕರಂಟ್ ಕೊಡುತ್ತೀರಿ? ಮಳೆ ಇಲ್ಲ, ವಿದ್ಯುತ್ ಇಲ್ಲ, ಎಲ್ಲಿಂದ ಕೊಡುತ್ತೀರಿ? ಸ್ವಾಮಿ ಯಡಿಯೂರಪ್ಪನವರ ಈ ಕಾರ್ಯಕ್ರಮ ಕೇವಲ ಮೂರು ತಿಂಗಳಿಗೆ, ಆರು ತಿಂಗಳಿಗೆ ಅಲ್ಲ, ಯಡಿಯೂರಪ್ಪ ಇರಬಹುದು, ಹೋಗಬಹುದು, ಯಾರೇ ಬಂದು ಈ ಕುರ್ಚಿಯಲ್ಲಿ ಕುಳಿತುಕೊಂಡರೂ ಕೂಡ ಯಡಿಯೂರಪ್ಪ ಹಾಕಿ ಕೊಟ್ಟಿರುವಂತಹ ಈ ಕಾರ್ಯಕ್ರಮವನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನು ಹೆಚ್ಚು ನೆರವು ಕೊಡಬಹುದೇ ಹೊರತು, ಇರುವುದನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾನು ಆ ಬುನಾದಿಯನ್ನು ಹಾಕಿದ್ದೇನೆ. ದಯಮಾಡಿ ಮಾಡಿರುವಂತಹ ಒಳ್ಳೆಯ ಕೆಲಸವನ್ನು ಯಡಿಯೂರಪ್ಪನವರೇ ಮಾಡಿದ್ದೀರಿ ಎಂದು ಒಂದು ಔದಾರ್ಯವನ್ನು ತೋರಿಸಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಲ್ಪಸಂಖ್ಯಾತರಿಗೆ ಒಂದು ಹೊಸಬಾಳು, ಅಂಗವಿಕಲರಿಗೆ ಒಂದು ಊರುಗೋಲು, ಅಸಹಾಯಕ ಹೆಣ್ಣುಮಕ್ಕಳ ಬದುಕಿನ ಭಾಗ್ಯದ ಬಾಗಿಲು

ತೆರೆದಿರುವಂಥಾದ್ದು, ರೈತರ ಹೊಲ–ಗದ್ದೆಗಳಲ್ಲಿ ಸಂತಸದ ಹೊನಲು ತರುವಂತಹ ಪ್ರಯತ್ನ ಮಾಡಿದಂತಾದ್ದು. ಆರ್ಥಿಕವಾಗಿ ಸಂಕಷ್ಟದಲ್ಲಿ ಇರುವಂತಹವರ ಬದುಕಿಗೆ, ನೆಮ್ಮದಿ, ಶಾಂತಿ, ಸಮೃದ್ಧಿಗಾಗಿ ಕಾರ್ಯಕ್ರಮ ರೂಪಿಸಿರುವಂಥಾದ್ದು, ಇವು ಈ ಬಜೆಟ್‌ನ ವಿಶೇಷವಾದಂತಹ ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಮತ್ತೊಂದು ಮಾತನ್ನು ಹೇಳುತ್ತೇನೆ, This is my Commitment. Budgetನಲ್ಲಿ ಪ್ರಕಟವಾಗಿರುವಂತಹ ಕಾರ್ಯಕ್ರಮಗಳನ್ನು ಕಾಲಮಿತಿಯೊಳಗೆ ಅನುಷ್ಠಾನ ಗೊಳಿಸುವುದರ · ಜೊತೆಗೆ ಪ್ರತಿ ನೂರು ದಿನಗಳಿಗೊಮ್ಮೆ, ಪ್ರಗತಿ ಕುರಿತಂತ ವರದಿಯನ್ನು ಈ ನಾಡಿನ ಐದೂವರೆ ಕೋಟಿ ಜನರ ಮುಂದೆ ನಾನು ಇಡುತ್ತೇನೆ. ಪ್ರತಿ ತಿಂಗಳು ಎರಡು ಮೂರು ಜಿಲ್ಲೆಗೆ ಮುಖ್ಯಮಂತ್ರಿಯಾಗಿ ನಾನೇ ಖುದ್ದಾಗಿ ಹೋಗಿ review ಮಾಡುತ್ತೇನೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಹೇಳುತ್ತೇನೆ. ಬಡವರು ವಿಶೇಷವಾದ ಸಂದರ್ಭದಲ್ಲಿ ಬೆಂಗಳೂರಿಗೆ ಬಂದು ಮುಖ್ಯಮಂತ್ರಿಯನ್ನು ಕಾಯಬೇಕೇ ಹೊರತು, ಜಿಲ್ಲಾ ಮಟ್ಟದಲ್ಲಿ ನಮ್ಮ ಅಧಿಕಾರಿಗಳು ಏನು ಮಾಡುತ್ತಾರೆ? ಒಂದು ಸರ್ಕಾರದ ಸುತ್ತೋಲೆ ಇದೆ, ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಬೇಕು ಎಂದು ಇದೆ. ಎಲ್ಲಿ ಮಾಡುತ್ತಿದ್ದಾರೆ ಸ್ವಾಮಿ? ಇನ್ನು ಸುತ್ತೋಲೆ ತೆಗೆದುಕೊಂಡು ಏನು ಮಾಡುತ್ತೀರಿ? Video Conference ಮಾಡುವುದರ ಮೂಲಕ ಪ್ರತಿ ತಿಂಗಳು Deputy Commissionerಗೆ ಅವನು ಡೈರಿ ಕೊಡಬೇಕು ಎಂದು ಹೇಳಿದ್ದೇನೆ. ಯಾವ ವಾರ ಎಲ್ಲಿ ಹೋಗಿದ್ದೀಯಾ? ಏನು ಕಡಿದಿದ್ದೀಯಾ? ಏನು ಮಾಡಿದ್ದೀಯಾ? ನಿನಗೆ ಆಸಕ್ತಿ ಇದೆಯೋ, ಇಲ್ಲವೋ? ಒಂದು ಸಾರಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಆಸಕ್ತಿಯಿಂದ ಕೆಲಸ ಮಾಡಿದರೆ, Deputy Commisstioner ತಾಲ್ಲೂಕು ಕೇಂದ್ರಕ್ಕೆ ಹೋದರೆ, ತಹಸೀಲ್ದಾರ್ ಹಳ್ಳಿಗಳಿಗೆ ಹೋಗುವುದಕ್ಕೆ ಪ್ರಾರಂಭ ಮಾಡಿದರೆ, ಸುಧಾರಣೆ ಆಗುತ್ತದೆನ್ನುವ ವಿಶ್ವಾಸ ಇದೆ. ಅದನ್ನು ಮಾಡಿ ತೋರಿಸುತ್ತೇನೆ. ಏಕೆ ಆಗುವುದಿಲ್ಲವೆಂದು ನೋಡುತ್ತೇನೆ. ಆ ದಿಕ್ಕಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಈ ಬಜೆಟ್‌ನಲ್ಲಿ ಒಂದು ಕೋಟಿ ಜನರಿಗೆ ಅನುಕೂಲವಾಗುವಂತಹ, individual familyಗೆ ಅನುಕೂಲವಾಗುವಂತಹ ಕಾರ್ಯಕ್ರಮವನ್ನು ನಾನು ರೂಪಿಸಿದ್ದೇನೆ, 65 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಬಸ್ಸು ಪ್ರಯಾಣ ದರದಲ್ಲಿ ಶೇಕಡ 25 ರಷ್ಟು ರಿಯಾಯಿತಿ ಕೊಡುತ್ತಿದ್ದೇವೆ. ಶೇಕಡ 75ಕ್ಕೂ ಹೆಚ್ಚು ಅಂಗವಿಕಲರಾದವರಿಗೆ, ಈ ದೇಶದಲ್ಲಿ ಯಾರಾದರೂ ಹೇಳಿ, ನಮ್ಮ ಕುಮಾರಸ್ವಾಮಿಯವರು ಇದ್ದಾಗ ಆ ಜನಕ್ಕೆ ಸ್ವಲ್ಪ ಜಾಗೃತಿ ಮೂಡಿಸುವಂತಹ ಕೆಲಸವನ್ನು ಮಾಡಿದ್ದರು. ಅವರು ತಮ್ಮ ಸಹಾಯ ಹಸ್ತ

ನೀಡುತ್ತಿದ್ದರು. ಬಂದಂತಹ ಕೆಲವರಿಗೆ ಉದ್ಯೋಗ ಕೊಡುವಂತಹ ಪ್ರಯತ್ನವನ್ನು ಕೂಡ ಮಾಡಿದರು. ಯಡಿಯೂರಪ್ಪ ಏನು ಮಾಡಿದರು? ಅವರು ಮಾಡಿದಂತಹ ಕೆಲಸಗಳನ್ನು ಮುಂದುವರಿಸಿದ್ದೇನೆ. ನಮ್ಮ ವಿಧಾನಸೌಧದ ಮುಂದೆ ಹಾಗೂ ನಮ್ಮ ಮನೆ ಮುಂದೆ ನಿಲ್ಲುವವರು ಯಾರು? ಅಂಗವಿಕಲರು. ಯಾರಿಗೆ 75%ಗಿಂತ ಹೆಚ್ಚು ಅಂಗವಿಕಲತೆಯಾಗಿದೆ, ಅವರಿಗೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿ ಕೊಡುವಂತಹ ಒಂದು ವಿನೂತನವಾದಂತಹ ಯೋಜನೆ ಇದು. ವರ್ಷಕ್ಕೆ 12,000 ಸಾವಿರ ರೂಪಾಯಿ ಆಯಿತು. ಒಂದು ಸಾವಿರ ರೂಪಾಯಿ ಇದ್ದರೆ ಅವನು ನೆಮ್ಮದಿಯಿಂದ ಊಟ ಮಾಡುವುದಿಲ್ಲವೆ? ನಾವು ಈ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಈಗ ನಾವೆಲ್ಲಾ ಸಂಭಾವನೆ ಪಡೆಯುತ್ತೇವೆ. ಗ್ರಾಮ ಪಂಚಾಯಿತಿ ಸದಸ್ಯರು ಅಸಕ್ತಿಯಿಂದ ಕೆಲಸ ಮಾಡಬೇಕೆಂದು ಹೇಳಿ 90,000 ಗ್ರಾಮ ಪಂಚಾಯಿತಿ ಸದಸ್ಯರಿಗೆ ಮಾಸಿಕ ಗೌರವ ಧನ ಪ್ರಾರಂಭಿಕವಾಗಿ 250 ರೂಪಾಯಿ ಕೊಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇನೆ.

ಬೆಂಗಳೂರು ನಗರದಲ್ಲಿ ದಿನಾಂಕ 25–07.2008 ರಂದು ಏನು ಸರಣಿ ಸ್ಫೋಟ ನಡೆದಿದೆ, ಅದರಲ್ಲಿ ಒಬ್ಬ ಮಹಿಳೆ ಸಾವನ್ನಪ್ಪಿ, ಹತ್ತು ಜನರಿಗೆ ಗಾಯಗಳಾಗಿವೆ. ಇದನ್ನು ಹತೋಟಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ರಾಜ್ಯದಾದ್ಯಂತ ನಾಗರಿಕರು ಮತ್ತು ಆಸ್ತಿಪಾಸ್ತಿಗಳಿಗೆ ಭದ್ರತೆ ನೀಡಿ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ಸರ್ಕಾರ ವಿಶೇಷ ಕ್ರಮ ಕೈಗೊಳ್ಳುತ್ತಿದೆ. ಪೋಲೀಸರಿಗೆ ಸುಸಜ್ಜಿತ ವಾಹನ, ಶಸ್ತ್ರಾಸ್ತ್ರ ಮತ್ತು ಆಧುನಿಕ ತಂತ್ರಜ್ಞಾನ ಒಳಗೊಂಡ ಸಕಲ ಸಾಮಗ್ರಿಗಳನ್ನು ಒದಗಿಸುವುದಕ್ಕೆ 25 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಮೂರು ದಿವಸದ ಹಿಂದೆ ಮಂಜೂರು ಮಾಡಿದ್ದೇನೆ. ಅದನ್ನು ಬಿಡುಗಡೆ ಮಾಡುತ್ತೇನೆ, ಅದನ್ನು ಬೇಕಾದ ಹಾಗೆ ಉಪಯೋಗ ಮಾಡಿಕೊಳ್ಳಿ ಎಂದು ಹೇಳಿದ್ದೇನೆ. ಅಗತ್ಯ ಇದ್ದಲ್ಲಿ ಇನ್ನು ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಹೇಳಿದ್ದೇವೆ. ನಮ್ಮ ಸರ್ಕಾರ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಆದ್ಯತೆಯನ್ನು ನೀಡಿ, ನಾಗರೀಕರು ಶಾಂತಿ ಮತ್ತು ನೆಮ್ಮದಿಯಿಂದ ಬದುಕುವುದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ನನಗೆ ಇಲ್ಲಿ ದುಃಖವಾಯಿತು. ಬರಗಾಲ ಇದೆ, ದೇವರ ಪ್ರಾರ್ಥನೆ ಮಾಡುತ್ತಿದ್ದೇನೆ, ಮಳೆ ಬರುತ್ತದೆ, ಓ ನಿಮ್ಮ ದೇವರು ಮಳೆ ಕೊಟ್ಟುಬಿಟ್ಟನಾ ಪ್ರಾರ್ಥನೆ ಮಾಡಿಸಿರಿ ಎಂದು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ದೇವರಿಗೆ ನನ್ನ ಮತ್ತು ಈ ನಾಡಿನ ಐದೂವರೆ ಕೋಟಿ ಜನರ ಮಾತು ತಲುಪಿದೆ, ಮಳೆಯಾಗುತ್ತಿದೆ. ಇನ್ನೊಂದು ವಾರದಲ್ಲಿ ರಾಜ್ಯದ ಜಲಾಶಯಗಳು ಭರ್ತಿಯಾಗುತ್ತವೆ ಎನ್ನುವ ವಿಶ್ವಾಸ ನನಗೆ ಇದೆ. ನಾನು ದೇವರ

ಮೇಲೆ ನಂಬಿಕೆ ಇಟ್ಟಿರುವವನು. ಮೂರು ವಾರದ ಹಿಂದೆ 139 ತಾಲ್ಲೂಕುಗಳಲ್ಲಿ ಬರದ ಛಾಯೆ ಇತ್ತು. ಆದರೆ ಈಗ ಸುಧಾರಣೆಯಾಗುತ್ತಿದೆ. ನಮ್ಮೆಲ್ಲರ ರಾಜ್ಯದ ಜನತೆಯ ಪ್ರಾರ್ಥನೆಯಿಂದ ಮಳೆಯಾಗಿದೆ. ಜಲಾಶಯ ತುಂಬುತ್ತಿದೆ. ಒಂದೇ ಒಂದು ಸಣ್ಣ ಉದಾಹರಣೆ ಎಂದರೆ ವಿದ್ಯುತ್ ಬೇಡಿಕೆ, ಈಗ ಸುಮಾರು ನಾಲ್ಕೈದು ದಿವಸದಿಂದ 35 ಮಿಲಿಯನ್ ಯೂನಿಟ್ಸ್ ಕಡಿಮೆಯಾಗಿದೆ. ಜಲವಿದ್ಯುತ್ ಸಂಗ್ರಹಣೆ ಜಾಸ್ತಿಯಾಗುತ್ತಿದೆ. ಆದಕಾರಣ ವಿದ್ಯುತ್ ಸಮಸ್ಯೆಯನ್ನು ಸಮಂಜಸವಾಗಿ ನಿರ್ವಹಿಸಬಹುದು ಎನ್ನುವಂತಹ ವಿಶ್ವಾಸ ಮೂಡುತ್ತಿದೆ. ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಮಳೆ ಅಭಾವ ಇದೆ. ಪರಿಸ್ಥಿತಿ ದಿನೇದಿನೇ ಸುಧಾರಿಸುತ್ತಿದೆ. ಈ ಬಗ್ಗೆ ವಿಶೇಷ ಗಮನ ಕೊಟ್ಟು, ಪರಿಸ್ಥಿತಿಯನ್ನು ಅವಲೋಕಿಸಿ ಮಳೆ ಸೂಕ್ತ ಪ್ರಮಾಣದಲ್ಲಿ ಬಾರದ ಪ್ರದೇಶಗಳಿಗೆ ಪರಿಹಾರ ಕಾಮಗಾರಿಯನ್ನು ಕೈಗೊಳ್ಳುವುದಕ್ಕೂ ಸಹ ಸರ್ಕಾರ ಸಜ್ಜಾಗಿದೆ. ರಸಗೊಬ್ಬರದ ಬಗ್ಗೆ ಎಲ್ಲಾ ಚರ್ಚೆಯಾಗಿದೆ. ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಒಟ್ಟು 20.97 ಲಕ್ಷ ಟನ್ ರಸಗೊಬ್ಬರದ ಬೇಡಿಕೆ ಇದ್ದು, ಇದರಲ್ಲಿ ಯೂರಿಯಾ 8 ಲಕ್ಷ ಟನ್, DAP 3.80 ಲಕ್ಷ ಟನ್, NPK 5.67 ಲಕ್ಷ ಟನ್. ಆದರೆ ಕೇಂದ್ರ ಸರ್ಕಾರ ನಮ್ಮ ಬೇಡಿಕೆಗೆ ಅನುಗುಣವಾಗಿ ಗೊಬ್ಬರದ ಸರಬರಾಜನ್ನು ಈ ನಿಮಿಷದವರೆಗೆ ಮಾಡಿಲ್ಲ. ನಾನು ಅಂದುಕೊಂಡೆ ನಾನು ವಿರೋಧ ಪಕ್ಷದವನು, ನಾನು ಹೋದರೆ ಕೇಂದ್ರ ಸರ್ಕಾರ ಮಣಿಯುವುದಿಲ್ಲ, ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಹೋಗಿ ಮನವಿ ಮಾಡಿದ್ದಾರೆ, ಈಗಲಾದರೂ ಗೊಬ್ಬರ ಬರುತ್ತದೆಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದೆ. ಅವರು ಕೊಡಿ ಎಂದು ಹೇಳಿದರೋ, ಕೊಡಬೇಡಿ ಎಂದು ಹೇಳಿದರೋ, ಏನುಹೇಳಿದರೋ, ಭಗವಂತನಿಗೆ ಗೊತ್ತು, ಗೊಬ್ಬರ ಅಂತೂ ನಮಗೆ ಬಂದಿಲ್ಲ. ನನಗೆ ನಿಮ್ಮ ಮೇಲೆ ವಿಶ್ವಾಸ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಕಾಲು ಕೆರೆದು ಜಗಳ ತೆಗೆಯುವುದು. ಇದು ಬೇಕೆಂತಲೇ ಜಗಳ ತೆಗೆಯುವುದು, ಕೆಣಕುವುದು ಮತ್ತು ನೀವು ಏಕೆ, ಎನ್ನುವುದು. ನಿಮಗೆ ಅಷ್ಟೊಂದು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದರೆ, ಈ ಹಿಂದೆ ಇಲ್ಲಿ ಚರ್ಚೆ ನಡೆಯಿತಲ್ಲ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು ಕೋಟ್ಯಾಂತರ ರೂಪಾಯಿ ಕೊಟ್ಟು ತಂದರಲ್ಲ, ಆ ರೀತಿ ನೀವು ಮಾಡಬಹುದು. ನೀವು ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ 17 ಕೋಟಿ ರೂಪಾಯಿ ಇಟ್ಟಿದ್ದೀರಿ. ನಿಮಗೆ ಹೇಗೆ ಸಿಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಹಿಂದಿನ ತಿಂಗಳಿನ ಕೊರತೆ ಸೇರಿ 2008ರ ಜುಲೈ ತಿಂಗಳಲ್ಲಿ 1.21 ಟನ್ DAP ಸರಬರಾಜು ಆಗಬೇಕಾಗಿತ್ತು. ಆದರೆ 57,000 ಟನ್ ಮಾತ್ರ ಸರಬರಾಜಾಗಿದೆ, 64,000 ಟನ್ ಕೊರತೆ ಇದೆ. 2.1 ಲಕ್ಷ ಟನ್ NPK

ಸರಬರಾಜು ಆಗಬೇಕಾಗಿದ್ದು, ಆದರೆ ಕೇವಲ 98,000 ಟನ್ ಸರಬರಾಜು ಆಗಿದೆ. 1.13 ಲಕ್ಷ ಟನ್ ಕೊರತೆ ಇದೆ. ಪ್ರಧಾನ ಮಂತ್ರಿಯವರನ್ನು ನಾವು ಮೂರ್‍ನಾಲ್ಕು ಬಾರಿ ಭೇಟಿ ಮಾಡಿದ್ದೇವೆ. ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ನಾನು ಮಾತನಾಡಿದ್ದೇನೆ. ನಮ್ಮ ನಿಯೋಗದಲ್ಲಿ ಅನೇಕ ಪ್ರಮುಖರು ಸಹ ಬಂದಿದ್ದರು. ಕರ್ನಾಟಕ ಮಾರುಕಟ್ಟೆ ಮಹಾಮಂಡಲಿ ನೇರವಾಗಿ ರಸಗೊಬ್ಬರ ಖರೀದಿಸಿ ಹಂಚಿಕೆ ಮಾಡುವುದಕ್ಕೆ ಅವರು ಕೇಳಿದಂತಹ 150 ಕೋಟಿ ರೂಪಾಯಿಯ ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದೇನೆ. ಇದರಲ್ಲಿ 25 ಕೋಟಿ ರೂಪಾಯಿ ನಗದನ್ನು ಸರ್ಕಾರ ಈಗಾಗಲೇ ಕೊಟ್ಟಿದೆ. ಉಳಿದ 125 ಕೋಟಿ ರೂಪಾಯಿಗಳನ್ನು State Bank of Mysore ನಿಂದ ಸಾಲ ಪಡೆಯಲು ಈಗಾಗಲೇ. ಸರ್ಕಾರ ವ್ಯವಸ್ಥೆಯನ್ನು ಮಾಡಿದೆ. ಇದರ ಬಡ್ಡಿಯನ್ನು ನಮ್ಮ ರಾಜ್ಯ ಸರ್ಕಾರ ತುಂಬಿಕೊಡುತ್ತಿದ್ದೇವೆ. ಮಾರುಕಟ್ಟೆ ಸಂಸ್ಥೆ ಈ ಹಣಕಾಸಿನ ಸಹಾಯದಿಂದ ಶೀಘ್ರದಲ್ಲೇ ರೈತರಿಗೆ ಬೇಕಾಗುವಂತಹ ರಸಗೊಬ್ಬರವನ್ನು ಖರೀದಿ ಮಾಡುವಂತಹ ಕ್ರಮವನ್ನು ಕೈಗೊಳ್ಳುತ್ತಿದ್ದಾರೆ. ಕೊರತೆಯ ದೂರದೃಷ್ಟಿಯ ಕೊರತೆಯಿಂದಾಗಿ, ವಿದ್ಯುತ್ ಸ್ಥಾವರ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಜೊತೆಗೆ ಮಳೆ ಕೊರತೆಯಿಂದಾಗಿ ಸುಮಾರು 700 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಅಭಾವ ಇದೆ.

ರಾಜ್ಯಕ್ಕೆ ಮುಂದಿನ ಐದು ವರ್ಷಗಳಲ್ಲಿ 5000 ಮೆಗಾವ್ಯಾಟ್‌ಗೂ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಅಥವಾ ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರ ಯೋಜನೆಯನ್ನು ಹಮ್ಮಿಕೊಂಡಿದೆ. ಈ ವರ್ಷ 1000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬಳ್ಳಾರಿ, ರಾಯಚೂರು ವಿದ್ಯುತ್ ಘಟಕ ಕೆಲಸ ಪ್ರಾರಂಭ ಮಾಡಿದೆ. ಛತ್ತೀಸ್‌ಘಡ್‌ದಲ್ಲಿ 2000 ಮೆಗಾವ್ಯಾಟ್ ಸಾಮರ್ಥ್ಯದ ಥರ್ಮಲ್ ವಿದ್ಯುತ್ ಸ್ಥಾವರ ಸ್ಥಾಪಿಸುವ ಉದ್ದೇಶಕ್ಕಾಗಿ ಆ ರಾಜ್ಯದ ಮುಖ್ಯಮಂತ್ರಿಯವರೊಂದಿಗೆ ಮಾತುಕತೆ ನಡೆಸಿದ್ದೇವೆ. ಆಗಸ್ಟ್ ಎರಡನೇ ವಾರದಲ್ಲಿ ಒಪ್ಪಂದಕ್ಕೆ ಸಹಿ ಹಾಕುವಂತಹ ಉದ್ದೇಶವಿದೆ ಮತ್ತು 100 ಮೆಗಾವ್ಯಾಟ್ ವಿದ್ಯುತನ್ನು ಛತ್ತೀಸ್‌ಘಡವು ಆಗಸ್ಟ್ ಒಂದನೇ ತಾರೀಖಿನಿಂದ ಕೊಡುತ್ತಿದೆ. ಜಿಂದಾಲ್‌ನಿಂದ 50 ಮೆಗಾವ್ಯಾಟ್ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ. ಅಗತ್ಯಬಿದ್ದರೆ ಇನ್ನೂ ಹೆಚ್ಚು ವಿದ್ಯುತನ್ನು ಛತ್ತೀಸ್‌ಘಡ ಮತ್ತು ಬೇರೆ ವಿದ್ಯುತ್ ಉತ್ಪಾದಕರಿಂದ ಖರೀದಿ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ.

ಕೃಷಿ ಕ್ಷೇತ್ರದಲ್ಲಿ ಏನೇನು ಪ್ರಯತ್ನ ಮಾಡಿದ್ದೇವೆಂದು ನಾನು ಹೇಳಿದ್ದೇನೆ. ವಿಶೇಷವಾಗಿ ಬಿತ್ತನೆ ಬೀಜ ಹಾಗು ಗೊಬ್ಬರ ಕೊಳ್ಳುವುದಕ್ಕೆ 500 ಕೋಟಿ ರೂಪಾಯಿ

ಏನು ಆವರ್ತನಿಧಿ ಇದೆ ಅದರ ಮೂಲಕ ಅವರಿಗೆ ಬೇಕಾದ ಅನುಕೂಲವನ್ನು ಮಾಡಿ ಕೊಡುತ್ತೇವೆ ಮತ್ತು ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಬೇಕಾದಂತಹ ಅನುಕೂಲ ಮಾಡಿಕೊಡುವುದಕ್ಕೆ ನಾವು ಬದ್ಧರಿದ್ದೇವೆ. ಚೈನಾ ಹಾಗೂ ಇತರೇ ದೇಶಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಆಗಿರುವಂತಹ ಬೆಳವಣಿಗೆಯನ್ನು ಅಧ್ಯಯನ ಮಾಡುವುದಕ್ಕೋಸ್ಕರ ರಾಜ್ಯದ ರೈತರ ನಿಯೋಗವೊಂದನ್ನು ಅಲ್ಲಿಗೆ ಕಳುಹಿಸಲಾಗುತ್ತದೆ. ಇದಕ್ಕಾಗಿ 10 ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದೇವೆ. ಕನಿಷ್ಠ ಒಂದು ಸಾವಿರ ಮಂದಿ ರೈತರನ್ನು ವಿವಿಧ ತಂಡಗಳಲ್ಲಿ ಚೈನಾ ದೇಶಕ್ಕೆ ಅಲ್ಲಿಯ ಕೃಷಿ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇನೆ. ಸಮಗ್ರ ಕೃಷಿ ಅಭಿವೃದ್ಧಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಕೃಷಿ ಮಿಷನ್ ರಚನೆ ಮಾಡುತ್ತಿದ್ದೇವೆ. ಸಾವಯವ ಕೃಷಿ ಉತ್ತೇಜಿಸುವುದಕ್ಕೆ ವಿಶೇಷ ಆಯೋಗ ಮಾಡುತ್ತಿದ್ದೇವೆ. ಜೈವಿಕ ಇಂಧನ ಕಾರ್ಯಪಡೆ ರಚನೆ ಮಾಡುತ್ತಿದ್ದೇವೆ. 36,000 ಕೆರೆಗಳ ಜೀರ್ಣೋದ್ಧಾರಕ್ಕೆ ಸಮಗ್ರ ಯೋಜನೆ ಮಾಡುತ್ತಿದ್ದೇವೆ. ನದಿ ಮೂಲಗಳ ಸಂರಕ್ಷಣೆಗೆ ಸಮಗ್ರ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಕೃಷಿ ವಲಯಕ್ಕೆ ಇನ್ನೂ ಹೆಚ್ಚು ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಮೂಲ ಸೌಕರ್ಯದ ಬಗ್ಗೆ ಹೇಳುವುದಾದರೆ, ಜಾಗತಿಕ ಮನ್ನಣೆ ಪಡೆದಿರುವಂತಹ ಬೆಂಗಳೂರು ನಗರದಲ್ಲಿ ವಿಶ್ವ ಮಟ್ಟದ ಮೂಲ ಸೌಕರ್ಯ ಒದಗಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿದೆ. ಆದ್ದರಿಂದ ಬಜೆಟ್‌ನಲ್ಲಿ ಬೆಂಗಳೂರು ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಲಾಗಿದೆ. ಬೆಂಗಳೂರು ಮೂಲಭೂತ ಸೌಕರ್ಯಾಭಿವೃದ್ಧಿಗೆ 1800 ಕೋಟಿ ರೂಪಾಯಿಯನ್ನು ಒದಗಿಸಿ ವಿವಿಧ ಯೋಜನೆಗಳನ್ನು ಜಾರಿಗೊಳಿಸುವಂತಹ ಸಂಕಲ್ಪವನ್ನು ಆಯವ್ಯಯದಲ್ಲಿ ಮಾಡಿದ್ದೇವೆ. ಈ ಯೋಜನೆಯನ್ನು ಶೀಘ್ರದಲ್ಲಿ ಅನುಷ್ಠಾನ ಮಾಡುವುದಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುತ್ತಿದ್ದೇವೆ. ಈ ಯೋಜನೆಗಳ ಪ್ರಗತಿಯ ವಿವರಗಳನ್ನು ಬೆಂಗಳೂರಿನ ನಾಗರಿಕರಿಗೆ ಮತ್ತು ಜನ ಪ್ರತಿನಿಧಿಗಳಿಗೆ ಕಾಲಕಾಲಕ್ಕೆ ನೀಡಲಾಗುತ್ತದೆ. ಬೆಂಗಳೂರು ರೇಸ್‌ಕೋರ್ಸ್ ಸ್ಥಳಾಂತರದ ಬಗ್ಗೆ ಹೇಳುವುದಾದರೆ, ಬೆಂಗಳೂರು ರೇಸ್‌ಕೋರ್ಸ್ ನಗರದ ಮಧ್ಯಭಾಗದಲ್ಲಿದ್ದೂ, ಇದರಿಂದ ಜನದಟ್ಟಣೆ ಸಂಚಾರಕ್ಕೆ ಮಿತಿಮೀರಿ ಅಡಚಣೆ ಆಗುತ್ತಿದೆ. ಗುತ್ತಿಗೆ ಒಪ್ಪಂದಕ್ಕೆ ಸಹಿ ಮಾಡದೆಯೇ ಕಳೆದ 19 ವರ್ಷಗಳಿಂದ ರೇಸ್ ನಡೆಯುತ್ತಾ ಬಂದಿದೆ. ಲೋಕೋಪಯೋಗಿ ಇಲಾಖೆ ಕಳೆದ ಕೆಲವು ವರ್ಷಗಳಲ್ಲಾದರೂ ಈ ಬಗ್ಗೆ ಗಮನ ಹರಿಸಬೇಕಾಗಿತ್ತು. ಆದರೆ ಈಗ ನನ್ನ ಬಿಗಿ ಧೋರಣೆಯಿಂದಾಗಿ ದಿನಾಂಕ 26-07-2008 ರಂದು ಬೆಂಗಳೂರು ಟರ್ಫ್ ಕ್ಲಬ್

ಒಪ್ಪಂದಕ್ಕೆ ಸಹಿ ಹಾಕಿಸಿದ್ದೇನೆ. ಈ ಒಪ್ಪಂದ 31-12-2009ಕ್ಕೆ ಮುಕ್ತಾಯವಾಗುತ್ತಿದೆ. ಅಷ್ಟರೊಳಗೆ ರೇಸ್‌ಕೋರ್ಸ್‌ನ್ನು ಸ್ಥಳಾಂತರ ಮಾಡಬೇಕು. ಯಾವುದೇ ಒತ್ತಡ ಬಂದರೂ ಬಗ್ಗುವುದಕ್ಕೆ ಸಿದ್ಧವಿಲ್ಲ, ರೇಸ್‌ಕೋರ್ಸ್‌ನ್ನು ನಗರದ ಹೊರಭಾಗಕ್ಕೆ ಸ್ಥಳಾಂತರ ಮಾಡಬೇಕೆನ್ನುವಂತಹ ನಿರ್ಧಾರ ಮಾಡಿ , ಇಲ್ಲಿ ಅಭಿವೃದ್ಧಿಗೆ ನಾವು ಗಮನವನ್ನು ಕೊಡುತ್ತೇವೆ.

ಇತರೆ ಮಹಾನಗರ ಪಾಲಿಕೆಗಳ ಅಭಿವೃದ್ಧಿ ಬಗ್ಗೆ:

ಇದೇ ರೀತಿ ರಾಜ್ಯದಲ್ಲಿ ಏಳು ಮಹಾನಗರ ಪಾಲಿಕೆ, ಹುಬ್ಬಳ್ಳಿ ಧಾರವಾಡ, ಬೆಳಗಾವಿ, ಗುಲ್ಬರ್ಗ, ದಾವಣಗೆರೆ, ಬಳ್ಳಾರಿ, ಮೈಸೂರು ಮತ್ತು ಮಂಗಳೂರು, ಇವುಗಳ ಮೂಲ ಸೌಕರ್ಯ ಅಭಿವೃದ್ಧಿಗೆ 700 ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ. ಇದಕ್ಕಾಗಿ ಈ ವರ್ಷವೆ ತಲಾ 50 ಕೋಟಿಯಂತೆ 305 ಕೋಟಿ ರೂಪಾಯಿಯನ್ನು ಇದಕ್ಕಾಗಿ ನಾನು ಮೀಸಲಿಟ್ಟಿದ್ದೇನೆ. ಈ ಏಳು ನಗರಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳ ರಚನೆ ಹಾಗೂ ನಿರಂತರ ಪರಿಶೀಲನೆ ನಡೆಸುವುದಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡುತ್ತಿದ್ದೇನೆ.

ಮೂಲ ಸೌಕರ್ಯಗಳ ಅಭಿವೃದ್ಧಿ:

ತೀವ್ರ ಆರ್ಥಿಕ ಅಭಿವೃದ್ಧಿಗೆ ಮೂಲ ಸೌಲಭ್ಯಗಳ ಅಭಿವೃದ್ಧಿ ಅತ್ಯವಶ್ಯಕ. ಈ ದಿಶೆಯಲ್ಲಿ ರಸ್ತೆಗಳು, ಬಂದರುಗಳು, ವಿಮಾನ ನಿಲ್ದಾಣ ಹಾಗು ರೈಲು ಯೋಜನೆಗಳಿಗೆ ಈ ಆಯವ್ಯಯದಲ್ಲಿ ಒತ್ತು ಕೊಟ್ಟಿದ್ದೇನೆ. ಕರ್ನಾಟಕ ಮಾರಿಟೈಂ ಬೋರ್ಡ್‌ನ್ನು ಆದಷ್ಟು ಶೀಘ್ರದಲ್ಲಿ ಸ್ಥಾಪನೆ ಮಾಡುತ್ತೇವೆ. ಬಹಳ ಮುಖ್ಯವಾಗಿ ವಿಮಾನ ನಿಲ್ದಾಣಗಳ ಬಗ್ಗೆ ಹೇಳುವುದಾದರೆ, ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಮಾನಯಾನ ಸೌಲಭ್ಯ ಕಲ್ಪಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ 150 ಕೋಟಿ ರೂಪಾಯಿ ಮೀಸಲಿಟ್ಟಿದೆ. ಈಗಾಗಲೇ ವಾಯು ಸಂಪರ್ಕ ಸೌಲಭ್ಯ ಹೊಂದಿರುವಂತಹ ಹಾಗೂ ಹೊಂದುತ್ತಿರುವಂತಹ 12 ಜಿಲ್ಲೆಗಳ ಜೊತೆಗೆ ಇನ್ನೂ 10 ಜಿಲ್ಲೆಗಳಲ್ಲಿ ತಲಾ 4 ಕೋಟಿ ರೂಪಾಯಿಯಂತೆ 40 ಕೋಟಿ ರೂಪಾಯಿ ವೆಚ್ಚದಲ್ಲಿ ವಿಮಾನ ನಿಲ್ದಾಣ, air strip ನಿರ್ಮಾಣ ಮಾಡುವುದಕ್ಕೆ ಕಾರ್ಯಕ್ರಮ ರೂಪಿಸಿದ್ದೇವೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಗೆ ಇದಕ್ಕೆ ಅಗತ್ಯ ಇರತಕ್ಕಂತಹ 100 ಎಕರೆ ಜಮೀನನ್ನು ಇನ್ನೊಂದು 15-20 ದಿವಸದೊಳಗಾಗಿ identify ಮಾಡಿ ತಿಳಿಸಬೇಕು ಎನ್ನುವಂತಹ ಮಾತನ್ನು ಈಗಾಗಲೇ ಸೂಚನೆಯ ಮೂಲಕ ತಿಳಿಸಿದ್ದೇವೆ. ಹುಬ್ಬಳ್ಳಿಯಲ್ಲಿ ಅಂತರ ರಾಷ್ಟ್ರೀಯ ಮಟ್ಟದ್ದು ಹಾಗೂ ಬೆಳಗಾವಿ ಮತ್ತು ಮಂಗಳೂರು ವಿಮಾನ ನಿಲ್ದಾಣಗಳನ್ನು ವಿಸ್ತರಿಸುತ್ತಿದ್ದೇವೆ ಹಾಗೂ ಮೈಸೂರು

ವಿಮಾನ ನಿಲ್ದಾಣ ಡಿಸೆಂಬರ್ 2008ರೊಳಗಾಗಿ ಪ್ರಾರಂಭವಾಗುತ್ತಿದೆ. ಗುಲ್ಬರ್ಗ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಜೂನ್ ತಿಂಗಳಿನಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದೇವೆ. ಹಾಸನದಲ್ಲೂ ಸಹ ಆದಷ್ಟು ಬೇಗ ವಿಮಾನ ನಿಲ್ದಾಣ ಮಾಡುವುದಕ್ಕೆ ಕಾರ್ಯಕ್ರಮ ರೂಪಿಸುತ್ತಿದ್ದೇವೆ. ವಾಯುಪಡೆಗೆ ಸೇರಿದಂತಹ ಬೀದರ್ ವಿಮಾನ ನಿಲ್ದಾಣದಲ್ಲಿ ಸಿವಿಲ್ ಟರ್ಮಿನಲ್ ನಿರ್ಮಾಣ ಮಾಡಬೇಕಾಗಿತ್ತು. ಅದಕ್ಕೆ Airport Authority of India ದುಡ್ಡು ಕೊಡಬೇಕಾಗಿತ್ತು. ಅವರು delay ಮಾಡುತ್ತಾರೆಂದು ಹೇಳಿ ಈಗಾಗಲೇ ನಾವು ರಾಜ್ಯ ಸರ್ಕಾರದಿಂದ ಮೂರು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ, ಮಾನ್ಯ ಶಿವಕುಮಾರ್‌ರವರೇ, ಈ ವಿಮಾನ ನಿಲ್ದಾಣ ಇನ್ನು ಕೆಲವೇ ತಿಂಗಳಿನಲ್ಲಿ ನಾಗರಿಕ ವಿಮಾನಯಾನಕ್ಕೆ ಸಜ್ಜಾಗುತ್ತಿದೆ.

ನಮ್ಮ ಕಾಂಗ್ರೆಸ್‌ನ ಸ್ನೇಹಿತರು ರೈಲು ಮಾರ್ಗಗಳ ಅಭಿವೃದ್ಧಿಗೆ ಪೂರ್ಣ ಸಹಕಾರವನ್ನು ಕೊಡಬೇಕು. ಇಡೀ ರಾಷ್ಟ್ರದಲ್ಲೇ ಅತಿ ಹೆಚ್ಚಿನ ಪಾಲು ಹಣವನ್ನು ರೈಲ್ವೆ ಮಂತ್ರಾಲಯಕ್ಕೆ ನಾವು ಕೊಡುತ್ತಿದ್ದರೂ ಸಹ ನಮಗೆ ರೈಲು ಯೋಜನೆಗೆ ಅಗತ್ಯವಾದಂತಹ ಸಹಕಾರ ಸಿಗುತ್ತಿಲ್ಲ. ನಾವೆಲ್ಲಾ ಒಟ್ಟಾಗಿ ಹೋಗಿ ಈ ಬಗ್ಗೆ ಪ್ರಯತ್ನ ಮಾಡಬೇಕಾಗಿದೆ. ಪ್ರಮುಖವಾಗಿ, ಬೀದರ್-ಗುಲ್ಬರ್ಗಾ, ಮುನಿರಾಬಾದ್-ಮೆಹಬೂಬ್‌ನಗರ, ಈ ಹೊಸ ರೈಲು ಯೋಜನೆಗಳು ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಚಾಲನೆ ನೀಡುತ್ತಿದ್ದೇವೆ. ಅದೇ ರೀತಿ ಬೆಂಗಳೂರು-ಮೈಸೂರು ಜೋಡಿ ರೈಲು ಮಾರ್ಗ, ಶಿವಮೊಗ್ಗ-ತಾಳಗುಪ್ಪ ಗೇಜ್ ಪರಿವರ್ತನೆ ಪ್ರವಾಸೋದ್ಯಮಕ್ಕೆ ಉತ್ತೇಜನೆ ನೀಡುವುದಿದೆ. ಕೊಟ್ಟೂರು-ಹರಿಹರ ನೂತನ ರೈಲು ಮಾರ್ಗ ಈ ವರ್ಷದ ಕೊನೆಗೆ ಪೂರ್ಣಗೊಳಿಸಬೇಕೆಂದು ನಾವು ಒತ್ತಡ ಹೇರುತ್ತಿದ್ದೇವೆ. ಇದರಿಂದ ಬಳ್ಳಾರಿ ಜಿಲ್ಲೆಯಿಂದ ಅದಿರು ಸಾಗಾಣಿಕೆ ಮಾಡಲು ಬಹಳಷ್ಟು ಅನುಕೂಲವಾಗುತ್ತದೆ. ಈ ಮೂಲಕ ನಮ್ಮ ರಸ್ತೆಗಳು ಏನು ಹಾಳಾಗುತ್ತಿವೆ ಅವು ಸುಧಾರಣೆ ಆಗುತ್ತದೆ ಎನ್ನುವಂತಹ ಕಳಕಳಿ ನಮ್ಮದಾಗಿದೆ.

ಪ್ರವಾಸೋದ್ಯಮಕ್ಕೆ ಹಿಂದೆಂದೂ ಇಲ್ಲದಷ್ಟು ಆದ್ಯತೆಯನ್ನು ಈ ವರ್ಷ ನಾವು ಕೊಡುತ್ತಿದ್ದೇವೆ. ನಮ್ಮ ರಾಜ್ಯದ ಐತಿಹಾಸಿಕ, ನೈಸರ್ಗಿಕ, ಧಾರ್ಮಿಕ ಮತ್ತು ಪ್ರೇಕ್ಷಣೀಯ ಪ್ರವಾಸಿ ಕೇಂದ್ರಗಳು, ಇವು ಜಗತ್‌ಪ್ರಸಿದ್ಧ ಆಗಿವೆ, ನಮ್ಮ ಕರಾವಳಿ ಪ್ರದೇಶ ಪ್ರವಾಸೋದ್ಯಮ ಅಭಿವೃದ್ಧಿಗೆ ಅತ್ಯಂತ ಸೂಕ್ತವಾಗಿದೆ. ಮೇಲೆ ಕಾಣಿಸಿದ ವಿಮಾನ ನಿಲ್ದಾಣ ಮತ್ತು ರೈಲು ಯೋಜನೆಗಳು ಈ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗುವುದಿದೆ. ಖಾಸಗಿ ಸಹಭಾಗಿತ್ವದೊಂದಿಗೆ ಹೋಟೆಲ್ ಮತ್ತು ಇತರೆ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಉತ್ತೇಜನ ನೀಡುತ್ತಿದ್ದೇವೆ. ಕರಾವಳಿ

ಕರ್ನಾಟಕ ಸಮಗ್ರ ಅಭಿವೃದ್ಧಿ ಪ್ರಾಧಿಕಾರವೂ ಸಹ ಪ್ರವಾಸೋದ್ಯಮ ಅಭಿವೃದ್ಧಿಗೆ ಚಾಲನೆ ನೀಡುತ್ತಿದ್ದೇವೆ. ಬಹಳ ಮುಖ್ಯವಾಗಿ ಪ್ರೇಕ್ಷಣೀಯ ಗಿರಿಧಾಮಗಳಾದಂತಹ ಕೆಮ್ಮಣ್ಣುಗುಂಡಿ, ಕೊಡಚಾದ್ರಿ, ನಂದಿ ಬೆಟ್ಟಗಳ ಅಭಿವೃದ್ಧಿಗೆ ವಿಶೇಷ ಒತ್ತನ್ನು ನೀಡುತ್ತಿದ್ದೇವೆ. ಅಲ್ಲಿ ಆಗಿರುವ ಅತಿಥಿ ಗೃಹಗಳನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಿ ಅಲ್ಲಿಯ ಅಭಿವೃದ್ಧಿಗೆ ವಿಶೇಷ ಗಮನವನ್ನು ಕೊಡುತ್ತಿದ್ದೇವೆ.

ರಾಜ್ಯದ ಕೈಗಾರಿಕಾಭಿವೃದ್ಧಿಗೆ ಘೋಷಿಸಲಾದಂಥ ಸುವರ್ಣ ಕರ್ನಾಟಕ ಕಾರಿಡಾರ್ ಮತ್ತು ಇತರೆ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದಲ್ಲಿ ಒಂದು Vision Group ಅನ್ನು ನಾವು ನೇಮಕ ಮಾಡುತ್ತಿದ್ದೇವೆ. ಈಗಾಗಲೇ 10 ಲಕ್ಷ ನಿರುದ್ಯೋಗಿ ಯುವಕರಿಗೆ - ಈ ಕೌಶಲ್ಯ ಆಯೋಗ ರಚಿಸಲಾಗುತ್ತದೆ. ಇದೊಂದು ವಿನೂತನ ಪ್ರಯತ್ನ ಮಾಡುತ್ತಿದ್ದೇವೆ. ಈ ಅಸಮಾನತೆಯನ್ನು ನೀಗುವುದಕ್ಕೋಸ್ಕರ ನನ್ನ ಹಿಂದಿನ ಬಜೆಟ್‌ನಲ್ಲಿ ಮೊದಲ ಬಾರಿಗೆ ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯಂತೆ 1574 ಕೋಟಿ ರೂಪಾಯಿ ಕೊಟ್ಟಿದ್ದೆವು. ಈ ವರ್ಷ 2542 ಕೋಟಿ ರೂ. ಇಟ್ಟಿದ್ದೇವೆ.

ಒಂದು ಬಹಳ ಪ್ರಮುಖವಾದಂತಹ ವಿಷಯವನ್ನು ಈ ಮನೆಯ ಮುಂದೆ ನಾನು ತರುತ್ತಿದ್ದೇನೆ. ಅಕ್ರಮ ಗಣಿಗಾರಿಕೆ ಬಗ್ಗೆ. ನಮ್ಮ ಸರ್ಕಾರ ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ಬದ್ಧವಾಗಿದೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಈವರೆಗೆ ಯಾವುದೇ ಹೊಸ ಗಣಿಗಾರಿಕೆ ಅನುಮತಿ ನೀಡಿಲ್ಲ ಮತ್ತು ಹಿಂದಿನ ಗುತ್ತಿಗೆಗಳನ್ನು ನವೀಕರಿಸಿಲ್ಲ. ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಹಲವಾರು ಗಣಿ ಗುತ್ತಿಗೆದಾರರು ಮಂಜೂರಾದ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾರೆ. ಇಂತಹ ಅಕ್ರಮ ಗಣಿಗಾರಿಕೆ ವಿಸ್ತೀರ್ಣವನ್ನು ವೈಜ್ಞಾನಿಕವಾಗಿ ಕಂಡುಹಿಡಿಯುವುದಕ್ಕೋಸ್ಕರ ಕರ್ನಾಟಕ ರಾಜ್ಯ ರಿಮೋಟ್ ಅಪ್ಲಿಕೇಷನ್ ಸೆನ್ಸಿಂಗ್ ಸೆಂಟರ್ ಮೂಲಕ ಮತ್ತು ಉಪಗ್ರಹ ಆಧಾರಿತ ವರದಿಗಳನ್ನು ಪಡೆದು ಕ್ರಮ ಕೈಗೊಳ್ಳುತ್ತೇವೆ. ಅನಧಿಕೃತ ಗಣಿಗಾರಿಕೆ ಮತ್ತು ಖನಿಜ ಸಾಗಾಣಿಕೆಯನ್ನು ತಡೆಯುವುದಕ್ಕೆ ವಿಶೇಷ ತನಿಖಾ ದಳಗಳನ್ನು ರಚಿಸಲು ಉದ್ದೇಶ ಪಟ್ಟಿದ್ದೇನೆ. ಅದಕ್ಕೆ ಬೇಕಾಗುವಂತಹ ಸಿಬ್ಬಂದಿ, ವಾಹನ ಮತ್ತಿತರ ಸಂಪನ್ಮೂಲವನ್ನು ಒದಗಿಸುವುದಕ್ಕೆ ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ನಾನು ನಮ್ಮ ಕಾಂಗ್ರೆಸ್ ಸ್ನೇಹಿತರಲ್ಲಿ ವಿನಂತಿ ಮಾಡುತ್ತೇನೆ, ಕರ್ನಾಟಕದಲ್ಲಿ I.I.T. ಸ್ಥಾಪನೆಗೆ ನಾವು ಒತ್ತು ಕೊಡಬೇಕಾಗಿದೆ. I.I.T. ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಉಚಿತ ಜಮೀನು ಮತ್ತು ಮೂಲಸೌಲಭ್ಯಗಳನ್ನು ಒದಗಿಸುವುದಕ್ಕೆ ನನ್ನ ಸರ್ಕಾರ ಸಿದ್ಧವಿದೆ. ಕಳೆದ ವಾರ ನಾನು ಮತ್ತೆ ಪ್ರಧಾನ ಮಂತ್ರಿಗಳಿಗೆ ಮತ್ತು

ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ರಾಜ್ಯದಲ್ಲಿ I.I.T. ಸ್ಥಾಪಿಸುವ ಬಗ್ಗೆ ಒತ್ತಾಯ ಮಾಡಿದ್ದೇನೆ. ನಮ್ಮ ಸಚಿವರಾದಂಥ ಅರವಿಂದ ಲಿಂಬಾವಳಿಯವರು ಈಗಾಗಲೇ ಭೇಟಿ ಮಾಡಿ ಬಂದಿದ್ದಾರೆ. ಕರ್ನಾಟಕ ರಾಜ್ಯ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿಗೆ ಹಾಗೂ ಜ್ಞಾನಾಧಾರಿತ ಕೈಗಾರಿಕೆಗಳಿಗೆ ನೆಲೆಯಾಗಿದೆ. ಹೀಗಿದ್ದರೂ ಸಹ ಕೇಂದ್ರ ಸರ್ಕಾರ ಇತ್ತೀಚೆಗೆ 11 ರಾಜ್ಯಗಳಿಗೆ I.I.T. ನೀಡಿ, ಅದರಲ್ಲಿ 8–9 ರಾಜ್ಯಗಳಿಗೆ clearance ಕೊಟ್ಟಿದ್ದಾರೆ. ನಮ್ಮ ರಾಜ್ಯಕ್ಕೆ ಇನ್ನೂ ಕೊಟ್ಟಿಲ್ಲ. ನಮಗೂ ಒಂದನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದೇನೆ. ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಇದಕ್ಕೆ ಸಹಕಾರವನ್ನು ನೀಡಬೇಕು. ಏಕೆಂದರೆ, ಇಡೀ ದೇಶದಲ್ಲಿ I.I.T. ಕೊಡುವುದಕ್ಕೆ ಎಲ್ಲ ರೀತಿಯ ಸೌಲಭ್ಯಗಳಿದ್ದು. I.T. ಕೇಂದ್ರ ಎಂದು ಕರೆಯುವುದಾದರೆ ಅದು ಕರ್ನಾಟಕ , ಬೆಂಗಳೂರು, ನಾವು ಆ ಒತ್ತಾಯವನ್ನು ತರುತ್ತಿದ್ದೇವೆ. ಬಹಳ ಪ್ರಮುಖವಾಗಿ ಈ ಮನೆಯಲ್ಲಿ ಒಂದು ವಿಷಯ ಚರ್ಚೆಯಾಯಿತು. ಅಬಕಾರಿ CL-2 ಮತ್ತು CL-9 ಹೊಸ ಪರವಾನಗಿ ಬಗ್ಗೆ ಚರ್ಚೆಯಾಯಿತು. ನಾವು ಜನಾಭಿಪ್ರಾಯವನ್ನು ಗೌರವಿಸುತ್ತೇವೆ. ಈ ಮನೆಯ ಸದಸ್ಯರ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಆದ್ದರಿಂದ. CL-2ಮತ್ತು CL-9 ಸನ್ನದುಗಳನ್ನು ನೀಡುವ ವಿಚಾರದಲ್ಲಿ ಸದನದ ಗೌರವಾನ್ವಿತ ಸದಸ್ಯರು ಮತ್ತು ನಾಗರಿಕರ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿದ್ದೇನೆ. ಆದ್ದರಿಂದ, ಹೊಸದಾಗಿ CL-2 ಮತ್ತು CL-9 ಸನ್ನದುಗಳನ್ನು ವಿತರಿಸುವಂಥ ನಿರ್ಧಾರವನ್ನು ವಾಪಸ್ಸು ಪಡೆದಿದ್ದೇನೆ. ಅದನ್ನು ಯಾವುದೇ ಕಾರಣಕ್ಕೆ ಮುಂದುವರೆಸುವುದಿಲ್ಲ.

ಶಾಸಕರ ನಿಧಿ ಬಗ್ಗೆ ನಮ್ಮೆಲ್ಲ ಶಾಸಕರಲ್ಲಿ ಒಂದು ವಿಶೇಷವಾದ ವಿನಂತಿ ಮಾಡುತ್ತೇನೆ. ತಮಗೆ ಗೊತ್ತಿರಲಿ, ಶಾಸಕರಿಗೆ ಕೊಡುವಂಥ 1 ಕೋಟಿ ರೂಪಾಯಿಗಳಿಗೆ ನಾನು ಈಗಾಗಲೇ ಹಣವನ್ನು ಒದಗಿಸಿದ್ದೇನೆ. ಆದರೆ ಈಗಾಗಲೇ ಆರು ತಿಂಗಳು ಕಳೆದು ಹೋಗಿರುವುದರಿಂದ ಈ ಶಾಸಕರ ನಿಧಿಯನ್ನು ಮುಂದುವರೆಸುವುದಕ್ಕೆ ಬಜೆಟ್‌ನಲ್ಲಿ 200 ಕೋಟಿ ಇದೆ. ಆದರೆ, ಮಾನ್ಯ ಶಾಸಕರಲ್ಲಿ ವಿನಂತಿ ಮಾಡುತ್ತೇನೆ, ಇದೊಂದು ವರ್ಷಕ್ಕೆ ನೀವು ಒಂದೂವರೆ ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆಯನ್ನು ಕಳುಹಿಸಿಕೊಡಿ. ಅದನ್ನು ಕಳುಹಿಸಿಕೊಟ್ಟರೆ, ಈ ವರ್ಷ ಇರುವಂಥ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ. ಉಳಿದಂಥ 50 ಲಕ್ಷದ ಕೆಲಸ ಮುಂದಿನ ವರ್ಷಕ್ಕೆ ಮುಂದುವರಿಯುತ್ತದೆ ಮತ್ತು ಮುಂದಿನ ವರ್ಷಕ್ಕೆ ಅದನ್ನು ಕಡಿಮೆ ಮಾಡಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಪೂರ್ತಿ ಕೇಳಿ. ನಾನು ಹೇಳುವುದನ್ನು ಕೇಳುವುದಕ್ಕೇ ರೆಡಿ ಇಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ complete ಮಾಡಲಿ. ಆಮೇಲೆ ನೀವು suggestion ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಹಳ ಪ್ರಮುಖವಾಗಿ ಅಮೃತಮಹಲ್ ಕಾವಲ್ ನಿರ್ವಹಣೆಯನ್ನು improve ಮಾಡಬೇಕು. ಅದನ್ನು ಹೇಳುವವರು, ಕೇಳುವವರು ಯಾರೂ ಇಲ್ಲ ಎನ್ನುವ ಪರಿಸ್ಥಿತಿ ಇತ್ತು. ಹಿಂದೆಯೂ ನಾವು ಆ ಬಗ್ಗೆ ಯೋಚನೆ ಮಾಡಿದ್ದೆವು. ಇನ್ನು ಮುಂದೆ ಅಜ್ಜಂಪುರ ಅಮೃತಮಹಲ್ ಕಾವಲ್ ನಿರ್ವಹಣೆಯನ್ನು ರಾಮಚಂದ್ರಾಪುರ ಮಠದ ಸ್ವಾಮಿಗಳು ವಹಿಸಿಕೊಂಡು ಅದನ್ನು ಅಭಿವೃದ್ಧಿ ಪಡಿಸಬೇಕೆಂದು ಕೇಳಿಕೊಂಡಿದ್ದೇನೆ. ಅದನ್ನು ಅವರಿಗೆ ವಹಿಸುತ್ತಿದ್ದೇವೆ. ಚಿಕ್ಕಮಗಳೂರಿನಲ್ಲಿ Coffee Technology Park ಮತ್ತುFood Park ಸ್ಥಾಪಿಸುವುದಕ್ಕೋಸ್ಕರ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಶೃಂಗೇರಿಯಲ್ಲಿ ಅಡಿಕೆ ಬೆಳೆಗೆ ತಗಲುವ ಹಳದಿ ಎಲೆ ರೋಗದ ಬಗ್ಗೆ ಅಧ್ಯಯನ ಮಾಡುವುದಕ್ಕೆ ಸಂಶೋಧನಾ ಕೇಂದ್ರಕ್ಕೆ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಚಿಕ್ಕಮಗಳೂರು ನಗರಕ್ಕೆ ವರ್ತುಲ ರಸ್ತೆ ನಿರ್ಮಿಸುವುದಕ್ಕೆ ಅಧ್ಯಯನ ಮಾಡುವುದಕ್ಕೆ, ಭೂ ಸ್ವಾಧೀನಕ್ಕೆ ಮೊದಲನೇ ಹಂತವಾಗಿ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಬಹಳ ಮುಖ್ಯವಾಗಿ, plantation ಕಾರ್ಮಿಕರಿಗೂ ಸಹ B.P.L. card ವಿಸ್ತರಣೆ ಮಾಡುವುದಕ್ಕೆ ನಾನು ಕ್ರಮವನ್ನು ಕೈಗೊಳ್ಳುತ್ತಿದ್ದೇನೆ. ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮೆಣಸಿನಕಾಯಿ ಹೊಸತಳಿಯ ಅಭಿವೃದ್ಧಿ ಮತ್ತು ಸಂಶೋಧನೆಗೆ ಒಂದು ಕೋಟಿ ರೂಪಾಯಿ ಅನುದಾನ ಮೀಸಲಿಡುತ್ತಿದ್ದೇನೆ. K.G.F.ನಲ್ಲಿರುವಂಥ B.G.M.L. ಆಸ್ಪತ್ರೆಯನ್ನು ರಾಜ್ಯ ಸರ್ಕಾರದ ವಶಕ್ಕೆ ತೆಗೆದುಕೊಂಡು ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇನೆ. ಬೃಹತ್ ನೀರಾವರಿ ಇಲಾಖೆ ವತಿಯಿಂದ ಆನವೇರಿಯಿಂದ ಹಾಡೋನಹಳ್ಳಿವರೆಗೆ ತುಂಗಭದ್ರಾ ನದಿಗೆ ಶಿವಮೊಗ್ಗ ಮತ್ತು ಹೊನ್ನಾಳಿ ಕೆರೆ ಸೇತುವೆ ನಿರ್ಮಾಣಕ್ಕಾಗಿ 20 ಕೋಟಿ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ವರ್ಷ ಅದಕ್ಕೆ ಅಗತ್ಯವಿರುವ ಅನುದಾನವನ್ನು ಒದಗಿಸುತ್ತೇವೆ. ಜಮಖಂಡಿ ತಾಲ್ಲೂಕು ಕೃಷ್ಣಾ ನದಿಗೆ ಅಡ್ಡಲಾಗಿ ಜಂಬಿಗಿ ಹತ್ತಿರ ಒಂದು ಸೇತುವೆ ನಿರ್ಮಾಣಕ್ಕೆ ಅಗತ್ಯ ಅನುದಾನವನ್ನು ಕೊಡುತ್ತೇವೆ. ಬಿಜಾಪುರ

ನಗರ ಕುಡಿಯುವ ನೀರು ಪೂರೈಕೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 60 ಕೋಟಿಗಳ ಅವಶ್ಯಕತೆ ಇದೆ. ಈ ವರ್ಷ 10 ಕೋಟಿ ಅದಕ್ಕಾಗಿ ಬಿಡುಗಡೆ ಮಾಡುತ್ತಿದ್ದೇನೆ. ಚಿಕ್ಕೋಡಿ ಪಟ್ಟಣಕ್ಕೆ ಕುಡಿಯುವ ನೀರು ಹಾಗೂ ಇತರೆ ಸೌಲಭ್ಯಗಳಿಗೆ 2 ಕೋಟಿ ರೂಪಾಯಿ ವಿಶೇಷ ಅನುದಾನ ಕೊಡುತ್ತಿದ್ದೇವೆ. ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷ ಮಾಡಿದರು, ಅದರಿಂದ ಯುವಕರಿಗೆ ತೊಂದರೆಯಾಗುತ್ತಿದೆ ಎನ್ನುವ ಭಾವನೆ ಇದೆ. ಆದ್ದರಿಂದ, ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಲು ಎಲ್ಲ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯನ್ನು ಎರಡು ವರ್ಷ ಹೆಚ್ಚಿಗೆ ಮಾಡುತ್ತಿದ್ದೇವೆ. ಅವರಿಗೆ ತೊಂದರೆಯಾಗಬಾರದು ಎಂದು ಹೇಳಿ ಇದನ್ನು ಮಾಡುತ್ತಿದ್ದೇವೆ. ದುಡಿಯುವ ಗಂಡು ಮಕ್ಕಳಿದ್ದರೂ ಸಹ ಬಡತನದ ರೇಖೆಗಿಂತ ಕೆಳಗಿರುವ ವಿಧವೆಯರಿಗೆ ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನ ನೀಡಬೇಕೆಂದು ಮಾಡಿದ್ದೇವೆ. ಮಗನಿಗೆ 18 ವರ್ಷ ಆದ ತಕ್ಷಣ ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನವನ್ನು ನಿಲ್ಲಿಸುತ್ತಿದ್ದರು. ದುಡಿಯುವ ಮಕ್ಕಳಿದ್ದರೂ ಪರವಾಗಿಲ್ಲ ಎಂದು ಹೇಳಿ ಬಡವರಿಗೆ ಅದನ್ನು ವಿಸ್ತರಣೆ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಸಂಸ್ಕೃತ ವೇದ ವಿದ್ಯಾಲಯ ಪ್ರಾರಂಭಿಸುತ್ತಿದ್ದೇವೆ. ಕುಶಾಲ ನಗರದ ಬಳಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಪ್ರಾರಂಭ ಮಾಡುವುದಕ್ಕೆ ಒಂದು ಕೋಟಿ ಕೊಡುತ್ತಿದ್ದೇವೆ. ಕೋಲಾರದ milk unionನಲ್ಲಿ ಹಾಲು ಪುಡಿ ಉತ್ಪಾದನಾ ಘಟಕವನ್ನು ಪ್ರಾರಂಭಿಸುವುದಕ್ಕೋಸ್ಕರ Kolar Milk Unionಗೆ ಅದರ ಒಟ್ಟು ವೆಚ್ಚದ ಶೇಕಡ 40ರಷ್ಟು ಅನುದಾನವನ್ನು ನೀಡುತ್ತೇವೆ. ಅದಕ್ಕಾಗಿ ಈ ವರ್ಷ 5 ಕೋಟಿ ಕೊಡುತ್ತಿದ್ದೇವೆ. ಕಳೆದ ಬಜೆಟ್‌ನಲ್ಲಿ ಪ್ರಕಟಿಸಿದಂತೆ ಮೈಸೂರಿನಲ್ಲಿ 100 ಎಕರೆ ಪ್ರದೇಶದಲ್ಲಿ ಸಂಗೀತ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ, ಸುಸಜ್ಜಿತ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಹಣ ಕೊಡುತ್ತಿದ್ದೇವೆ. ಮೈಸೂರಿನ ಆಯುರ್ವೇದ ಕಾಲೇಜು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ನಿಸರ್ಗ ಚಿಕಿತ್ಸೆ ಆಸ್ಪತ್ರೆ ಪ್ರಾರಂಭಿಸುವುದಕ್ಕೆ ಒಂದು ಕೋಟಿ ಅನುದಾನ ಕೊಡುತ್ತಿದ್ದೇವೆ. ಮೈಸೂರು ರೇಸ್ ಕೋರ್ಸ್‌ನಲ್ಲಿ ವಸೂಲು ಮಾಡುತ್ತಿರುವಂಥ Turnover Tax ಪ್ರಮಾಣವನ್ನು ಶೇಕಡ 2ರಿಂದ 4ಕ್ಕೆ ಹೆಚ್ಚಿಸುತ್ತಿದ್ದೇವೆ. ಹುಬ್ಬಳ್ಳಿಯಲ್ಲಿ ಗಂಗೂಬಾಯಿ ಹಾನಗಲ್ ಹಿಂದೂಸ್ಥಾನಿ ಸಂಗೀತ ತರಬೇತಿ ವಿದ್ಯಾಲಯವನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ವಿಧಾನ ಮಂಡಲದ ಮುಂದಿನ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲಾಗುತ್ತದೆ. ಹಾಗೂ ಸುವರ್ಣ ವಿಧಾನಸೌಧ ಕಟ್ಟಡದ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ

ಮಾಡುತ್ತೇವೆ. ಗುಲ್ಬರ್ಗಾದಲ್ಲಿ ಸೆಪ್ಟೆಂಬರ್ ಕೊನೆಯಲ್ಲಿ ಸಚಿವ ಸಂಪುಟದ ಸಭೆಯನ್ನು ಮಾಡುತ್ತೇವೆ. ಗುಲ್ಬರ್ಗ ತಾಲ್ಲೂಕು ಸನ್ನತಿ ಗ್ರಾಮದ ಅಭಿವೃದ್ಧಿಗಾಗಿ 1 ಕೋಟಿ ಕೊಡುತ್ತಿದ್ದೇವೆ. ದಲೈಲಾಮ ಭೇಟಿ ಸಂದರ್ಭದಲ್ಲಿ ಒದಗಿಸಬೇಕಾದ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುತ್ತಿದ್ದೇವೆ. ವಾಡಿ–ಗುಲ್ಬರ್ಗ ರಸ್ತೆಯ ತಕ್ಷಣದ ಕಾಮಗಾರಿಗೆ 1 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಿದ್ದೇವೆ. ಕಳಸಾ–ಬಂಡೂರಿ ಕುಡಿಯುವ ನೀರು ಯೋಜನೆ, ಅರಣ್ಯ ಪ್ರದೇಶವನ್ನು ಹೊರತುಪಡಿಸಿ, ಬೇರೆ ಕಡೆಗಳಲ್ಲಿ ನೀರನ್ನು ಲಿಫ್ಟ್ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಬೆಳಗಾವಿ ಜಿಲ್ಲೆ ಸವದತ್ತಿ ಯಲ್ಲಮ್ಮ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗೆ ಒಂದು ಕೋಟಿ ಕೊಡುತ್ತಿದ್ದೇವೆ. ಭದ್ರಾ ಜಲಾಶಯದ ಆವರಣದಲ್ಲಿ K.R.S ನ ಬೃಂದಾವನ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವುದಕ್ಕೆ ಮೊದಲನೆ ಕಂತಾಗಿ 4 ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಹೇಮಾವತಿಯಿಂದ ತಿಪಟೂರಿನ ಕುಡಿಯುವ ನೀರು ಸರಬರಾಜು ಯೋಜನೆಗೆ ಒಂದು ಕೋಟಿ ಅನುದಾನವನ್ನು ಕೊಡುತ್ತಿದ್ದೇವೆ. ದಕ್ಷಿಣ ಕನ್ನಡ ಕೃಷಿ ಮಾರಾಟ ಸಹಕಾರ ಸಂಘ, S.K.C.M.S., ಆರ್ಥಿಕ ಸಂಕಷ್ಟದಲ್ಲಿದ್ದು ಇದರ ಪುನಶ್ಚೇತನಕ್ಕೆ 8 ಕೋಟಿ ಬಡ್ಡಿರಹಿತ ಸಾಲ ಕೊಡುತ್ತಿದ್ದೇವೆ. ಪುತ್ತೂರು ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘದ ಪುನಶ್ಚೇತನಕ್ಕೆ 5 ಕೋಟಿ ರೂಪಾಯಿಗಳನ್ನು ಬಡ್ಡಿರಹಿತ ಸಾಲವನ್ನಾಗಿ ಕೊಡುತ್ತಿದ್ದೇವೆ. ಬೆಂಗಳೂರಿನ ಬಸವನಗುಡಿಯ ಅಬಲಾಶ್ರಮದ ಅಭಿವೃದ್ಧಿಗೆ ಒಂದು ಕೋಟಿಯನ್ನು ನೀಡುತ್ತಿದ್ದೇವೆ. ಮಲೆ ಮಹದೇಶ್ವರ ಬೆಟ್ಟದ ಅಭಿವೃದ್ಧಿಗೆ ಈ ವರ್ಷ 2 ಕೋಟಿ ವಿಶೇಷ ನೆರವು ಕೊಡುತ್ತಿದ್ದೇವೆ. ಹಾಸನದ ಹಾಸನಾಂಬ ಮತ್ತು ಸಿದ್ದೇಶ್ವರ ದೇವಾಲಯಗಳ ಜೀರ್ಣೋದ್ಧಾರಕ್ಕೆ ಒಂದು ಕೋಟಿ ಕೊಡುತ್ತಿದ್ದೇವೆ. ತಿರುಪತಿ ದೇವಾಲಯದಲ್ಲಿ ಪ್ರಥಮ ಪೂಜೆ ಕರ್ನಾಟಕದ್ದಾಗಿದ್ದು, ತುಳಸಿ ಸಹ ಕರ್ನಾಟಕದಿಂದಲೇ ಸರಬರಾಜು ಆಗುತ್ತಿದೆ. ಈ ಕ್ಷೇತ್ರಕ್ಕೆ ಭೇಟಿ ನೀಡುವ ಕರ್ನಾಟಕದ ಯಾತ್ರಾರ್ಥಿಗಳು ಹೆಚ್ಚುತ್ತಿರುವುದರಿಂದ ಮೈಸೂರು ಅರಸರು ಹಿಂದೆ ನೀಡಿದ್ದ ಏಳೂವರೆ ಎಕರೆ ಜಮೀನಿನಲ್ಲಿ ಒಂದು ಸಾವಿರ ಕೊಠಡಿಗಳನ್ನು ನಿರ್ಮಿಸುತ್ತಿದ್ದೇವೆ. ಶಿವಮೊಗ್ಗ ಪತ್ರಕರ್ತರ ಸಂಘದ ಕಟ್ಟಡದ ನಿರ್ಮಾಣಕ್ಕೆ 50 ಲಕ್ಷ ಕೊಡುತ್ತಿದ್ದೇವೆ. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಉತ್ಸವ ಆಚರಿಸುವುದಕ್ಕೋಸ್ಕರ ಒಂದು ಕೋಟಿ ನೀಡುತ್ತಿದ್ದೇವೆ. ಒಳಮೀಸಲಾತಿ ವರ್ಗೀಕರಣ ಅಧ್ಯಯನ ಮಾಡಿ ದಲಿತರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿ ಬಗ್ಗೆ ವರದಿ ನೀಡುವುದಕ್ಕೋಸ್ಕರ ನ್ಯಾಯಮೂರ್ತಿ ಸದಾಶಿವ ಆಯೋಗವನ್ನು ರಚನೆ ಮಾಡಿದ್ದೇವೆ. ಆ ಆಯೋಗ

ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಬೇಕಾಗಿರುವುದಕ್ಕಾಗಿ 2 ಕೋಟಿ ಕೊಡುತ್ತಿದ್ದೇವೆ. ಲಿಡ್ಕರ್ ಸಂಸ್ಥೆಯನ್ನು ಪುನಶ್ಚೇತನ ಮಾಡಿ ಸರ್ಕಾರ ಇದನ್ನು ಜಗಜೀವನರಾಂ ಹೆಸರಿನಲ್ಲಿ ಪುನರ್ ನಾಮಕರಣ ಮಾಡಿ, ಅದರ ಅಭಿವೃದ್ಧಿಗೆ ಹಣವನ್ನು ಕೊಡುತ್ತಿದ್ದೇವೆ. ಈಗಾಗಲೆ ಹೇಳಿದಂತೆ, ಅಬಲಾಶ್ರಮಕ್ಕೆ ನೂರು ವರ್ಷಗಳಾಗುತ್ತಿದೆ. ಅದರ ಅಭಿವೃದ್ಧಿಗೆ ಒಂದು ಕೋಟಿ ಕೊಡುತ್ತಿದ್ದೇವೆ. ಹೀಗೆ ಈ ಒಂದು ಆಯವ್ಯಯದಲ್ಲಿ ಕೆಲವು ಒತ್ತಾಯಗಳೇನು ಬಂದವು, ಅಗತ್ಯತೆ ಏನಿತ್ತು, ಅವುಗಳಿಗೆ ಹಣಕಾಸನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ರಾಜ್ಯದಲ್ಲಿ ತೆರಿಗೆ ಸಂಗ್ರಹಣ ಇಲಾಖೆಯ ಸಂಪನ್ಮೂಲ ಕ್ರೋಢೀಕರಣ ಸಾಮರ್ಥ್ಯ ಆಶಾದಾಯಕವಾಗಿದೆ. ಈ ವರ್ಷ 19,344 ಕೋಟಿ ರೂಪಾಯಿ ವಾಣಿಜ್ಯ ತೆರಿಗೆ ಸಂಗ್ರಹಿಸುವ ಗುರಿಯನ್ನು ಹಾಕಿಕೊಂಡಿದ್ದು 2007-08ನೇ ಸಾಲಿಗೆ ಹೋಲಿಸಿದರೆ ಇದು ಶೇಕಡ 27 ರಷ್ಟು ಹೆಚ್ಚಾಗುತ್ತಿದೆ. ಅಬಕಾರಿ ಬಾಬ್ತು, 5,682 ಕೋಟಿ ರೂಪಾಯಿ ಸಂಗ್ರಹಿಸುವ ಗುರಿ ಹೊಂದಿದ್ದು, 2007-08ನೇ ಸಾಲಿಗೆ ಹೋಲಿಸಿದರೆ ಇದು ಶೇಕಡ 17 ರಷ್ಟು ಹೆಚ್ಚಾಗುತ್ತದೆ. ನೋಂದಣಿ ಮತ್ತು ಮುದ್ರಾಂಕ ಬಾಬ್ತು 4,416 ಕೋಟಿ ರೂಪಾಯಿ ಸಂಗ್ರಹಿಸುವ ಗುರಿ ಇದ್ದು 2007-08ನೇ ಸಾಲಿಗೆ ಹೋಲಿಸಿದಾಗ ಇದು ಶೇಕಡ 25ರಷ್ಟು ಹೆಚ್ಚಾಗುತ್ತದೆ.

ಮೋಟಾರು ವಾಹನ ಬಾಬ್ತು 2218 ಕೋಟಿ ರೂ.ಸಂಗ್ರಹಿಸುವ ಗುರಿ ಹೊಂದಿದ್ದು 2007-08ನೇ ಸಾಲಿಗೆ ಹೋಲಿಸಿದಾಗ ಇದು ಶೇಕಡ 22 ರಷ್ಟು ಹೆಚ್ಚಾಗುತ್ತದೆ. ಸಂಪನ್ಮೂಲ ಸಂಗ್ರಹಣೆಗೆ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ಈ ಸಾಲಿನ ಯೋಜನಾ ಗಾತ್ರ 25,953 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಕೃಷಿ ಹಾಗೂ ಪೂರಕ ಚಟುವಟಿಕೆಗಳಿಗೆ ಈ ಸಾಲಿನಲ್ಲಿ 2,492 ಕೋಟಿ ರೂಪಾಯಿಗಳನ್ನು ಒದಗಿಸಿದ್ದು ಕಳೆದ ವರ್ಷದ ಹಂಚಿಕೆಯಾದ 1,547 ಕೋಟಿ ರೂಪಾಯಿಗಳಿಗೆ ಹೋಲಿಸಿದಾಗ ಶೇಕಡ 61ರಷ್ಟು ಹೆಚ್ಚಾಗಿದೆ. ನಗರಾಭಿವೃದ್ಧಿಗೆ ಕಳೆದ ವರ್ಷ 2,923 ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಈ ವರ್ಷ 5,041 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದ್ದರಿಂದ ಶೇಕಡ 172 ರಷ್ಟು ಹೆಚ್ಚಾಗಿದೆ. ಗ್ರಾಮೀಣಾಭಿವೃದ್ಧಿಗೆ ಕಳೆದ ವರ್ಷ 732 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ 1,463 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದನ್ನು ಕಳೆದ ಸಾಲಿಗೆ ಹೋಲಿಸಿದಾಗ ಶೇಕಡ 100 ರಷ್ಟು ಹೆಚ್ಚಾಗಿದೆ. ನೀರಾವರಿ ಯೋಜನೆಗಳ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿವೆ. ನೀರಾವರಿಗೆ ರಾಜ್ಯ ಆಯವ್ಯಯದಲ್ಲಿ ಈ ವರ್ಷ ಒಟ್ಟು 4,402 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಲ್ಲಿ ಸಾಲ ಮರುಪಾವತಿಗೆ 663 ಕೋಟಿ ರೂಪಾಯಿಗಳು ವೆಚ್ಚವಾಗಿದ್ದು ಕಾಮಗಾರಿಗಳಿಗೆ

3,739 ಕೋಟಿ ರೂಪಾಯಿಗಳು ದೊರೆಯಲ್ಲಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕಾಮಗಾರಿಗಳಿಗೆ ಶೇಕಡ 19 ರಷ್ಟು ಅಂದರೆ 593 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಒದಗಿಸಿದ್ದೇವೆ. ಉದಾಹರಣೆಗೆ 2004–05ರಲ್ಲಿ ಕಾಮಗಾರಿಗೆ ತೆಗೆದಿಟ್ಟಿದ್ದ ಹಣ 1964.37 ಕೋಟಿ ರೂಪಾಯಿಗಳು. ಸಾಲ ತೀರುವಳಿಗೆ 1,789.67 ಕೋಟಿ ರೂಪಾಯಿಗಳು. 2005–06ರಲ್ಲಿ ಕಾಮಗಾರಿಗೆ ತೆಗೆದಿಟ್ಟಿದ್ದ ಹಣ 2,158.98 ಕೋಟಿ ರೂಪಾಯಿಗಳು. ಸಾಲ ತೀರುವಳಿಗೆ 1,658.15 ಕೋಟಿ ರೂಪಾಯಿಗಳು. 2006–07ರಲ್ಲಿ ಕಾಮಗಾರಿಗೆ ತೆಗೆದಿಟ್ಟಿದ್ದ ಹಣ 2,851.55 ಕೋಟಿ ರೂಪಾಯಿಗಳು. ಸಾಲ ತೀರುವಳಿಗೆ 1,690.92 ಕೋಟಿ ರೂಪಾಯಿಗಳು ಇತ್ತು. 2007–08ರಲ್ಲಿ ಅಂದರೆ ಕಳೆದ ವರ್ಷ ಕಾಮಗಾರಿಗೆ ತೆಗೆದಿಟ್ಟಿದ್ದ ಹಣ 3,445177 ಕೋಟಿ ರೂಪಾಯಿಗಳು. ಸಾಲ ತೀರುವಳಿಗೆ 920.48 ಕೋಟಿ ರೂಪಾಯಿಗಳು ಇತ್ತು. ಹೋದ ವರ್ಷ 3,145177 ಕೋಟಿ ರೂಪಾಯಿಗಳಿದ್ದರೆ ಈ ವರ್ಷ 2008–09ರಲ್ಲಿ ಕಾಮಗಾರಿಗೆ ತೆಗೆದಿಟ್ಟಿದ್ದ ಹಣ 3,738.36 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆದರೆ, ಸಾಲ ತೀರುವಳಿಗೆ 663.30 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅಂದರೆ 2004–05ರಿಂದ ಪ್ರತಿ ವರ್ಷ ಹೋಲಿಕೆ ಮಾಡಿದಾಗ ನಾವು ಕಾಮಗಾರಿಗೆ ಕೊಟ್ಟ ಹಣ ಈ ವರ್ಷ double ಆಗಿದೆ ಮತ್ತು ಸಾಲ ವಾಪಸ್ಸು ಕೊಡುವಂಥದ್ದು ಸಹ ಕಡಿಮೆಯಾಗಿದೆ. ಕಾಮಗಾರಿಗೆ ನೇರವಾಗಿ ಕೊಟ್ಟ ಹಣ ಕಳೆದ ಮೂರು ವರ್ಷಗಳು ಯಾವ ರೀತಿ ಇತ್ತು ಎನ್ನುವ ಅಂಕಿ ಅಂಶವನ್ನು ಕೊಟ್ಟಿದ್ದೇನೆ. ಇದೇನೂ ತೃಪ್ತಿ ತರುವಂಥದ್ದು ಅಲ್ಲ. ಬರುವಂಥ ದಿವಸಗಳಲ್ಲಿ ಗ್ರಾಮೀಣಾಭಿವೃದ್ಧಿಗೆ, ನೀರಾವರಿ ಯೋಜನೆ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ದಯಮಾಡಿ ಇದಕ್ಕೆ ಅನುಮೋದನೆಯನ್ನು ಕೊಡಬೇಕೆಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ದೀರ್ಘವಾಗಿ ಉತ್ತರ ಕೊಟ್ಟರು. ಅನೇಕ ವಿಷಯಗಳನ್ನು ನಾವೇನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ, ಅದರ ಮೇಲೆ ಬೆಳಕು ಚೆಲ್ಲಿ ಮತ್ತು re-allocation ಮಾಡುತ್ತಾರೇನೋ ಎಂದು ನಾನು ತಿಳಿದುಕೊಂಡಿದ್ದೆ. ಮೊದಲನೆಯದಾಗಿ ಶಾಸಕರ ನಿಧಿಗೆ 2 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಎಲ್ಲರೂ ಕೂಡ ಅವರಿಗೆ ಕೇಳಿಕೊಂಡಿದ್ದರು. 5 ಕೋಟಿ ರೂಪಾಯಿಗಳನ್ನು ಕೇಳಿದ್ದರು, ಆದರೆ, 2 ಕೋಟಿ ರೂಪಾಯಿಗಳನ್ನಾದರೂ ಮಾಡುತ್ತಾರೆಂದು ಕೇಳಿಕೊಂಡರೆ, ಈ ವರ್ಷ ಕೇವಲ 75 ಲಕ್ಷ ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳಿ ಎಂದು ಉತ್ತರದಲ್ಲಿ ಹೇಳಿದ್ದಾರೆ. ಏಕೆಂದರೆ, ಬಜೆಟ್‌ನಲ್ಲಿ 200

ಕೋಟಿ ರೂಪಾಯಿಗಳು ಇದೆ, ಈಗಾಗಲೇ 4 ತಿಂಗಳು ಮುಗಿದಿದೆ, ಈ ವರ್ಷ 75 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಿ, ಮುಂದೆ ಬೇಕಾದರೆ ನೋಡೋಣ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ 224 ಶಾಸಕರು ಮತ್ತು 75 MLCಗಳು ಅಂದರೆ ಹೆಚ್ಚುಕಡಿಮೆ 300 ಸದಸ್ಯರು ಅಂದರೆ ಕನಿಷ್ಟ ಪಕ್ಷ 600 ಕೋಟಿ ರೂಪಾಯಿಗಳನ್ನು ಇದಕ್ಕೆ ಅವರು ಇಡಬೇಕಾಗಿತ್ತು. ಆದರೆ, 600 ಕೋಟಿ ರೂಪಾಯಿಗಳೂ ಇಲ್ಲ, 300 ಕೋಟಿ ರೂಪಾಯಿಗಳೂ ಇಲ್ಲ, ಈಗ 200 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟು ಈಗ ಈ ರೀತಿಯಾಗಿ ಹೇಳಿದರೆ ಯಾವ ರೀತಿಯಾಗಿ development ಮಾಡಿದ ಹಾಗೆ ಆಗುತ್ತದೆ? ಎರಡನೆಯದಾಗಿ, ಇವರ ಜೇಬಿನಿಂದ ಕಸಿದುಕೊಂಡು ಇವರಿಗೆ ಕೊಡತಕ್ಕಂಥ ಹಣವನ್ನು ನೀವು ನಿಮ್ಮ discretion ನಲ್ಲಿ ಅವರಿಗೊಂದು ಕೋಟಿ ರೂ. ಇವರಿಗೊಂದು ಕೋಟಿ ರೂ. ಅವರಿಗೆ 50 ಲಕ್ಷ ರೂ. ಇವರಿಗೆ 50 ಲಕ್ಷ ರೂ. ಎಂದು ಕೊಟ್ಟುಕೊಂಡು ಬಂದಿರಿ. ಇದರೊಳಗೆ ಪುರುಷಾರ್ಥ ಏನಿದೆ? ನಮಗೆ ಕೊಡತಕ್ಕಂಥ ಹಣವನ್ನು ನೀವು ಕಸಿದುಕೊಂಡು, ತೆಗೆದುಕೊಂಡು ಇವತ್ತು ನೀವು discretion ಉಪಯೋಗಿಸಿಕೊಂಡು use ಮಾಡುತ್ತಿದ್ದೀರಿ. ಅದೇ 600 ಕೋಟಿ ರೂಪಾಯಿಗಳನ್ನು ನಮಗೆ ಕೊಟ್ಟಿದ್ದರೆ ಆಯಾ ಮತಕ್ಷೇತ್ರದಲ್ಲಿದ್ದಂಥ ಅಭಿವೃದ್ಧಿ ಕೆಲಸಕ್ಕೆ ಎಲ್ಲಾ ಶಾಸಕರೂ ಕೂಡ need based ಆಗಿ ಕೆಲಸ ಮಾಡುತ್ತಿದ್ದರು. ಆದರೆ ತಾವು ಏನು ಮಾಡಿದಿರಿ ಎಂದರೆ, ಶಹಬಾಷ್‌ಗಿರಿ ಪಡೆಯುವುದಕ್ಕೋಸ್ಕರ ಆ ಹಣವನ್ನು ನಿಮ್ಮಲ್ಲಿಟ್ಟುಕೊಂಡು 200 ಕೋಟಿ ರೂಪಾಯಿಗಳನ್ನು ಮಾತ್ರ ಬಜೆಟ್‌ನಲ್ಲಿ provision ತೋರಿಸಿ, ಅದರಲ್ಲೂ ಕೂಡ 75 ಲಕ್ಷ ರೂಪಾಯಿಗಳಿಗೆ ಸೀಮಿತಗೊಳಿಸುವ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಖಂಡಿತವಾಗಿ ಇದು ಸರಿಯಿಲ್ಲ. ತಾವು review ಮಾಡಿ ಮತ್ತು 2 ಕೋಟಿ ರೂಪಾಯಿಗಳೆಂದು ನಿಗದಿ ಮಾಡಿ. ನಾವೂ ಕೂಡ ಅಲ್ಲಿ ಕೊಡುತ್ತಿರತಕ್ಕಂಥದ್ದು ಅಥವಾ ಶಾಸಕರು ಕೊಡುತ್ತಿರತಕ್ಕಂಥದ್ದು ಅಭಿವೃದ್ಧಿ ಕೆಲಸಕ್ಕಾಗಿಯೇ ಹೊರತು ಬೇರೇನೂ ಅಲ್ಲ. 'ಕುಡಿಯುವ ನೀರಿಗೆ, ರಸ್ತೆಗೆ, community hall, school buildings,' ಇವುಗಳಿಗೇ ಕೊಡಬೇಕೆಂದು ಬೇಕಾದರೆ condition ಹಾಕಿ. ಅದನ್ನು ಬಿಟ್ಟು ನೀವು ಈ ಜೇಬಿನಿಂದ ತೆಗೆಯುವುದು ಆ ಜೇಬಿನಲ್ಲಿಟುಕೊಂಡು ಇದು ನನ್ನ ದುಡ್ಡು, ನನ್ನ ದುಡ್ಡು, ಈ ಯಡಿಯೂರಪ್ಪ, ಈ ಯಡಿಯೂರಪ್ಪ ಎಂದು ಹೇಳುವುದಲ್ಲ. ಇದು ಇಡೀ ರಾಜ್ಯದ ಹಣ ಸರ್. Development ಮಾಡಿಸುವುದಕ್ಕೆ ಎಲ್ಲರಿಗೂ ಅವಕಾಶವಿರಬೇಕು. ಇದ್ದಿದ್ದನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ. ಇಲ್ಲಿಯವರೆಗೆ development ಗೆಂದು ಎಲ್ಲ ಮುಖ್ಯಮಂತ್ರಿಗಳು ಅಥವಾ ಎಲ್ಲ ಸರ್ಕಾರಗಳು ಕೊಟ್ಟರೂ ಅದನ್ನು ಕಸಿದುಕೊಂಡು

ನೀವು ನಿಮ್ಮ descretion ಅನ್ನು ಉಪಯೋಗ ಮಾಡುತ್ತೀರೆಂದರೆ ಇದು ನಿಜವಾಗಿಯೂ ಅನ್ಯಾಯ ಮತ್ತು ಇದು ಶಾಸಕರನ್ನು ಹತ್ತಿಕ್ಕಿಡುವಂಥ ಕೆಲಸವಾಗುತ್ತದೆ. ಯಾರ್ಯಾರು ನಿಮಗೆ ಬೇಕು, ನಿಮ್ಮಲ್ಲಿಗೆ ಬಂದಾಗ ಮಾತ್ರ ಕೊಡುವುದು, ಇಲ್ಲದಿದ್ದರೆ ಇಲ್ಲ ಎನ್ನತಕ್ಕಂಥದ್ದು ಆಗುತ್ತದೆ. ಅದಕ್ಕಾಗಿ, ನಿಜವಾಗಿಯೂ ಇಂಥ ರೀತಿಯಾಗಿ ಮಾಡುವುದು ಸರಿಯಲ್ಲ. ಇದನ್ನು ಪುನರ್‌ಪರಿಶೀಲನೆ ಮಾಡಬೇಕು. ತಕ್ಷಣ ಇದಕ್ಕೂ ಕೂಡ ನೀವು ಉತ್ತರ ಹೇಳಬೇಕು. ಮೂರನೆಯದಾಗಿ, ಎಲ್ಲರೂ ಕೂಡ ನೀರಾವರಿ ಬಗ್ಗೆ ಮಾತನಾಡಿದರು. Irrigation ಗೆ ಹೆಚ್ಚಿಗೆ ಹಣ ಕೊಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಇವತ್ತು ನೀರಾವರಿಗೆ ಕೇವಲ 13% ಹಣ ಇಟ್ಟು, "ನಾನು ರೈತರಿಗೆ ಹೆಚ್ಚಿಗೆ ಹಣ ಕೊಟ್ಟಿದ್ದೇನೆ" ಎಂದು ಹೇಳುತ್ತಾರೆ. ಇಲ್ಲಿಯೇ ಪುಸ್ತಕಗಳಿದ್ದು ಎಲ್ಲವನ್ನೂ ನಾನು ಈಗ ಹೇಳುವುದಿಲ್ಲ. 1999–2000ರದು ಇದೆ, 2000–2001ರದು ಇದೆ, ಎಲ್ಲವನ್ನೂ ಕೊಡುತ್ತೇನೆ. ಹಿಂದೆ ಮೂರೂವರೆ ಸಾವಿರ, ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ಇಟ್ಟಿದ್ದರೆ ನಮ್ಮ total allocation fund ನಲ್ಲಿ 39% ಹಿಡಿದುಕೊಂಡು ಕನಿಷ್ಟ 25% ವರೆಗೆ ಕೊಟ್ಟಿದ್ದಾರೆ, ಆದರೆ, ನೀವು ನಿಮ್ಮ allocation ನಲ್ಲಿ ಇದಕ್ಕೆ ಕೇವಲ 13% ಹಣವನ್ನಿಟ್ಟು 'ನಾನು ರೈತರ ಪರ, ನಾನು ರೈತರ ಪರ' ಎಂದು ಹೇಳಿದರೆ, ರೈತರ ಪರ ಏನು? ಆವತ್ತಿನ 4 ಸಾವಿರ ಅಥವಾ ಮೂರೂವರೆ ಸಾವಿರ ಕೋಟಿ ರೂಪಾಯಿಗಳು ಇವತ್ತು ನೀವು ಕೊಡುತ್ತಿರುವುದು 3,700 ಕೋಟಿ ರೂಪಾಯಿಗಳಾಗಿದ್ದು, ಇದಕ್ಕೆ ನೀವು ಹೋಲಿಸಿ ನೋಡಿದರೆ ನೀವು 13% ಇಟ್ಟಿದ್ದೇವೆಂದು ಏನು ಹೇಳಿದ್ದೀರಿ ನಿಜವಾಗಿಯೂ ಅದಕ್ಕಿಂತಲೂ ಕಡಿಮೆಯಾಗುತ್ತದೆ. ಇವತ್ತು steel rate ಏನಿದೆ? 2000 ಇಸವಿಯಲ್ಲಿ ಇದ್ದ cement rate ಏನು? steel rate ಏನು? ಜಲ್ಲಿ rate ಏನು? ಆ inflation ಗೆ ಇವತ್ತು ಹೋಲಿಸಿದಾಗ ನಿಮ್ಮ ಹಣ ಎಲ್ಲಿಗೆ ಸಾಕಾಗುತ್ತದೆ. ಸ್ವಾಮಿ?

ನೀವು ರೈತರ ಪರ ಎಂದು ಹೇಳಿಕೊಂಡು ಇಲ್ಲಿಂದ 1,000ಕೋಟಿ ರೂಪಾಯಿಗಳನ್ನು ಬೇರೆ ಕಡೆಗೆ ಹಂಚುವುದು. ಅದು ದೊಡ್ಡದು, ಅದಕ್ಕೆ ಆಡಳಿತ ಪಕ್ಷದಿಂದ ಎಲ್ಲರೂ table ಬಡಿಯುವುದೇ ಬಡಿಯುವುದು. ಅವರು 500 ಕೋಟಿ ರೂಪಾಯಿಗಳನ್ನು ಆವರ್ತ ನಿಧಿಗೆಂದು ಇಟ್ಟರು. ಆದರೆ, ಹೇಳುವಾಗ ಅವರು ರೈತರಿಗೆ ವ್ಯವಸಾಯಕ್ಕೆ ಬೇಕಾದ ಬೀಜ ಖರೀದಿಗಾಗಿ ನಾನು 500 ಕೋಟಿ ರೂ.ಗಳನ್ನು ಕೊಡುತ್ತಿದ್ದೇನೆಂದು ಹೇಳಿದರು. ಆದರೆ, ನೀವು ಅದಕ್ಕೆ 130 ಕೋಟಿ ರೂಪಾಯಿ ಕೊಡುತ್ತಿದ್ದೀರಿ. ಆದರೆ, ನೀವು ಇಲ್ಲಿ ಭಾಷಣದಲ್ಲಿ ಆವರ್ತ ನಿಧಿಗೆ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಹೇಗೆ ತಪ್ಪು

ಮಾಹಿತಿಯನ್ನು ರಾಜ್ಯಕ್ಕೆ ಕೊಡುತ್ತಿದ್ದಾರೆನ್ನುವುದು ಇದರಿಂದ ಕಂಡು ಬರುತ್ತದೆ. ಸಾವಿರಾರು ಕೋಟಿ ರೂಪಾಯಿಗಳನ್ನು ನೀರಾವರಿಗೆ ಇಟ್ಟಿದ್ದನ್ನು ತೆಗೆದು ಬೇರೆ ಕಡೆಗೆ ಇಟ್ಟಿದ್ದೀರಿ. ನೀರಾವರಿ ಆಗುವುದು ರೈತರ ಹೊಲಕ್ಕೆ ಅಲ್ಲವೇ? ಯಾರಿಗೆ ಜಮೀನಿದೆ ಅವರ ಹೊಲಕ್ಕೇ ನೀರು ಹೋಗುವುದು ಮತ್ತು ಅವರ ಆರ್ಥಿಕಾಭಿವೃದ್ಧಿ ಆಗುವಂಥದ್ದು ನೀರಾವರಿಯಿಂದಲೇ ಹೊರತಾಗಿ ನಾನು ಅಷ್ಟು ಕೊಟ್ಟೆ, ನಾನು ಇದು ಮಾಡಿದೆ, ನಾನು 3% ಬಡ್ಡಿಗೆ ಸಾಲ ಕೊಟ್ಟೆ ಎಂದರೆ ಸಾಲದು. ಅದು ಸಹಜ. 11.5% ಇದ್ದುದ್ದನ್ನು 6.5%, 5.5%ಗೆ ಹಿಂದಿನ ಸರ್ಕಾರದವರು ಕಡಿಮೆ ಮಾಡಿದರು. 6% ಇದ್ದುದ್ದನ್ನು 4% ಗೆ ಸಮ್ಮಿಶ್ರ ಸರ್ಕಾರ ಕಡಿಮೆ ಮಾಡಿತು. 4% ಇದ್ದದ್ದು 3% ಆಯಿತು. ಅಂದರೆ 1% ಕಡಿಮೆ ಆಯಿತು. ನೀವೇನೇ credit ತೆಗೆದುಕೊಳ್ಳಬೇಕಾದರೆ 1% ತೆಗೆದುಕೊಳ್ಳಬೇಕೇ ಹೊರತು ನೀವು 7% credit ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದರೂ ಕೂಡ ಚಪ್ಪಾಳೆ ಗಿಟ್ಟಿಸಿಕೊಳ್ಳುವುದು, table ಗುದ್ದಿಸಿಕೊಳ್ಳುವುದು ಇದೆ. ಇದಕ್ಕೆ ನಿಜವಾಗಿಯೂ ರೈತರಿಗೆ ಯಾರಿಂದ ಅನ್ಯಾಯವಾಗುತ್ತಿದೆ ಎಂದರೆ ತಮ್ಮ ಸರ್ಕಾರದಿಂದಲೇ. ಕೋಟ್ಯಾಂತರ ರೂಪಾಯಿಗಳನ್ನು Irrigation ಗೆ ಇಟ್ಟಿದ್ದ ಹಣವನ್ನು ತೆಗೆದು ಮನಸ್ಸು ಬಂದಂತೆ ಬೇರೆ ಕಡೆಗೆ ಹಂಚಿದ್ದೀರಿ. ಅದರ ಬಗ್ಗೆ ಏನೂ ಹೇಳಲಿಲ್ಲ. ಎರಡನೆಯದಾಗಿ, Power Projects ಬಗ್ಗೆ ಚಕಾರವೆತ್ತಲಿಲ್ಲ. ಕೇವಲ ಛತ್ತೀಸ್‌ಘಡ ರಾಜ್ಯದ ಜೊತೆಯಲ್ಲಿ ನಾವು ಒಪ್ಪಂದ ಮಾಡಿಕೊಳ್ಳುತ್ತೇವೆ, 1000 ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ಹೇಳುತ್ತೀರಿ. ಇಲ್ಲಿ ನೀವು ಮೂಲ ಸೌಕರ್ಯಗಳನ್ನು ಸೃಷ್ಟಿಸುವುದಕ್ಕೋಸ್ಕರ powe sector ಗೆ ಎಷ್ಟು ಹಣ ಇಟ್ಟಿದ್ದೀರಿ? ಅದಕ್ಕೆ ಕಡಿಮೆ ಹಣ ಇಟ್ಟಿದ್ದೀರಿ. ಹಿಂದಿನ ಐದಾರು ಬಜೆಟ್‌ಗಳನ್ನು ತಾವು ತೆಗೆದುನೋಡಿ, ಬೇಕಾದರೆ ನಾನೂ ಅಂಕಿ-ಅಂಶಗಳನ್ನು ಕೊಡುತ್ತೇನೆ. ಈಗ ಅವರೇ ಹೇಳಿದ್ದಕ್ಕೆ ನಾನು ಹೇಳಬೇಕಲ್ಲ? 2001ರಲ್ಲಿ ಸುಮಾರು 39.58% ಹಣ ಇಟ್ಟಿದ್ದರು. ಅದೇ ರೀತಿ 2002ರಲ್ಲಿ 31%, 2003ರಲ್ಲಿ 32%, 2004ರಲ್ಲಿ 25%. 2005ರಲ್ಲಿ 29%, 2006ರಲ್ಲಿ 26% ಕೊಡಲಾಗಿತ್ತು. 2006 ರಿಂದ ಇದು ಪ್ರಾರಂಭವಾಯಿತು. ಯಾವಾಗ ಇವರು Finance Minister ಆದರೋ ಆಗಿನಿಂದ allocation ಕಡಿಮೆಯಾಯಿತು. 2006ರಲ್ಲಿ 26%, 2007ರಲ್ಲಿ 17%, 2008ರಲ್ಲಿ 13% ಹಣ ಇಡಲಾಗಿದೆ. ಈ ಅಂಕಿ-ಅಂಶಗಳನ್ನು ಅವರು ಕೊಟ್ಟಿದ್ದು. ಇದು ಅವರು ಕೊಟ್ಟ ಪುಸ್ತಕದಲ್ಲಿರುವ ಅಂಕಿ-ಅಂಶವಾಗಿದೆ. ಅಂದರೆ, ನೀವು ರೈತರ ಪರ ಇದ್ದೇವೆಂದು ಯಾವ ಆಧಾರದ ಮೇಲೆ ಹೇಳಿದಿರಿ? ಸಾವಿರಾರು ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದು, discretionary ಆಗಿ ಅವರಿಗೆ ಗೋಮಾಳ ಬೆಳೆಸುವುದಕ್ಕೆ ಇಷ್ಟು ಹಣ ಕೊಟ್ಟೆ, ಇಂಥದ್ದಕ್ಕೆ ಇಷ್ಟು ಕೊಟ್ಟೆ ಎಂದು

ಹೇಳುವುದು. ಯಾರೂ ಕೂಡ ಹೀಗೆ ಕೊಟ್ಟಿಲ್ಲ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ತಾವು ಹೆಚ್ಚಿನ ಹಣ ಕೊಟ್ಟಿಲ್ಲ. ಏಕೆಂದರೆ. ಎಲ್ಲಿಯವರೆಗೆ ನೀವು ಕೊಡುವುದಿಲ್ಲ ಅಲ್ಲಿಯವರೆಗೆ ರೈತರ ಅಭಿವೃದ್ಧಿ ಆಗುವುದಿಲ್ಲ. ರೈತರ ಅಭಿವೃದ್ಧಿ ಆಗಬೇಕೆಂದರೆ, allocation ಹೆಚ್ಚಿನ ಒತ್ತು ಕೊಡಬೇಕೇ ಹೊರತಾಗಿ popular scheme ಗೆಂದು ತನಗೆ ಬೇಕಾದ scheme ಗಳನ್ನು ಜಾರಿಗೆ ತರುತ್ತೇನೆ ಎಂದು ಹೇಳಿದರೆ, ಅದರಿಂದ ರಾಜ್ಯದ ಆರ್ಥಿಕಾಭಿವೃದ್ಧಿಯಾಗುವುದಿಲ್ಲ, domestic production ಹೆಚ್ಚಿಗೆ ಆಗುವುದಿಲ್ಲ, GDP ಹೆಚ್ಚಿಗೆ ಆಗುವುದಿಲ್ಲ, income ಹೆಚ್ಚಿಗೆ ಆಗುವುದಿಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಅಂದರೆ, ಇದರಿಂದಾಗಿ ಅವರು ಯಾವ ರೀತಿ ತಪ್ಪು ಮಾಹಿತಿಗಳನ್ನು ಇವತ್ತಿನ ದಿವಸ ಕೊಡುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ. ಮೂರನೆಯದಾಗಿ, mining ಬಗ್ಗೆ ಹೇಳಿದ್ದೀರಿ, ಸಂತೋಷ. ನನಗನ್ನಿಸುತ್ತದೆ, ನೀವೊಂದು recommendation ಮಾಡಿ. ಕರ್ನಾಟಕ ರಾಜ್ಯದಲ್ಲಿ mining ವಿಷಯಕ್ಕೆಂದು ಯಾವ ರೀತಿ ಹಿಂದೆ Mysore Mineral Corporation ರಚಿಸಲಾಗಿತ್ತೋ ಅದೇ ರೀತಿ, ಅದರ ಮೂಲಕವೇ allocation, export ಮಾಡೋಣ. ಇದೆಲ್ಲವನ್ನೂ ಮಾಡುವುದು ಒಂದು, ಇಲ್ಲವೆಂದರೆ nationalization ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಇಲ್ಲದಿದ್ದರೆ, ಇದೊಂದು ದೊಡ್ಡ ಅನಾಹುತ ನಾಳೆ ನಮ್ಮ ರಾಜ್ಯದಲ್ಲಾಗುತ್ತದೆ ಎನ್ನುವ ಮಾತನ್ನು ನಿಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರ ಕಡೆಗೂ ಅವರು ಗಮನ ಕೊಡಲಿಲ್ಲ. ಮೊನ್ನೆ ಅವರು ರಸಗೊಬ್ಬರದ ವಿಚಾರದಲ್ಲಿ ಮಾತನಾಡುತ್ತಾ, 500 ಕೋಟಿ ರೂ.ಗಳನ್ನು ನಾಳೆಯೇ ಕೊಡುತ್ತೇನೆ ತೆಗೆದುಕೊಂಡು ಹೋಗಿ, ಯಾರು ಗೊಬ್ಬರ ತರುತ್ತೀರೋ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಆ 500 ಕೋಟಿ ರೂ. ವಿಷಯ ಮುಗಿಯಿತು. ಆಮೇಲೆ 250 ಕೋಟಿ ರೂಪಾಯಿಗಳನ್ನು Marketing Federation ಗೆ ಇವತ್ತೇ ಕೊಡುತ್ತೇನೆಂದು ಹೇಳಿದ್ದರು. ಆದರೆ, ಅವರು ಇವತ್ತು ಅವರ ಉತ್ತರದಲ್ಲಿಯೇ 125 ಕೋಟಿ ರೂ.ಗಳಿಗೆ ನಾನು approve ಮಾಡಿದ್ದೇನೆ, ಇನ್ನೂ 125 ಕೋಟಿ ರೂ.ಗಳಿಗೆ ನೀವು State Bank ನಲ್ಲಿ ಹೋಗಿ ಸಾಲ ತೆಗೆದುಕೊಳ್ಳಿ ಎಂದು ಅವರಿಗೆ permission ಕೊಟ್ಟಿದ್ದೇವೆಂದು' ಹೇಳಿದರು. 25 ಕೋಟಿ ರೂ.ಗಳನ್ನು ಕೊಟ್ಟು, 125 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದರೆ ಎಲ್ಲಿದೆ ನಿಮ್ಮ Demand Draft? ಅದು ಜೇಬಿನಲ್ಲಿಯೇ ಇಟ್ಟುಕೊಂಡು ಓಡಾಡುತ್ತಿದ್ದೀರಲ್ಲಾ, ಅದು ಎಲ್ಲಿ? ಈ ರೀತಿಯಾಗಿ ಏಕೆ ತಪ್ಪು ಮಾಹಿತಿ ಕೊಡುತ್ತೀರಿ? ಜನರಿಗೆ, ರೈತರಿಗೆ ಪತ್ರಿಕೆ ಮುಖಾಂತರ, ಟಿ.ವಿ. ಮುಖಾಂತರ ಹೇಳಿ ಖುಷಿ ಪಡಿಸುವುದಕ್ಕೋಸ್ಕರವೇ? ನಾವು ಸವಾಲು ಹಾಕಿದಾಗ ಈಗಲೇ ಒಯ್ಯಿರಿ ಎಂದು ಹೇಳುವುದು, ಆಮೇಲೆ ನೋಡಿದರೆ

ಸಾಲ ಕೇಳಿದ್ದೇನೆ, wait ಮಾಡಿ ಎಂದು ಹೇಳುವುದು. ಕೇಂದ್ರ ಸರ್ಕಾರ ಕೊಡುವುದಿಲ್ಲವೆಂದು ಹೇಳುವುದು. ಇದೇ ರೀತಿಯಾಗಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡಿನವರು ಮಾಡಿದರೆ? ಅವರು ಕೋಟ್ಯಾಂತರ ರೂಪಾಯಿಗಳನ್ನು advance ಕೊಟ್ಟರು. ಅವರ ಸಂಸ್ಥೆಗಳು ಅವರು ನಂಬಿಕೆ ಇಟ್ಟು ತರಿಸಿಕೊಂಡು ಕೊಟ್ಟರು. ಅದನ್ನು ಬಿಟ್ಟು ನೀವೇನು ಮಾಡಿದಿರಿ? ಇದನ್ನು ಬಿಟ್ಟು ನೀವೇಕೆ ಬರಲಿಲ್ಲವೆಂದು ಕೇಳುತ್ತೀರಿ. ನೀವು ರಾಜಕೀಯ ಮಾಡುತ್ತೀರಿ ಎಂದು ನಾವು ನಿಮ್ಮ ಜೊತೆಯಲ್ಲಿ ಬರಲಿಲ್ಲ. ಬೇರೆ issues ಬಂದಾಗ ನಾವು ನಿಮ್ಮ ಜೊತೆ ಬರಲಿಲ್ಲವೆ? ಕನ್ನಡ ಭಾಷಾ ಮಾಧ್ಯಮದ ವಿಷಯಕ್ಕೆ ಸಂಬಂಧಿಸಿದಂತೆ ಕರೆದ ಸಭೆಯಲ್ಲಿ ನಾವು ಭಾಗವಹಿಸಿದ್ದೆವು. ರೈತರ ಸಮಸ್ಯೆ ಬಗ್ಗೆ ಚರ್ಚಿಸಲು ಸಭೆ ಕರೆದಾಗ ನಾವು ಭಾಗವಹಿಸಿದ್ದೆವು. ಎಲ್ಲಿ ನೀವು ರಾಜಕೀಯ ಉದ್ದೇಶವಿಟ್ಟುಕೊಂಡು ಕರೆಯುತ್ತೀರೋ, ಎಲ್ಲಿ ನೀವು ಒಂದು ಪಕ್ಷದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತೀರೋ ಅಂಥ ಸಭೆಯಲ್ಲಿ ನಾವು participate ಮಾಡುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಸೇರಿ ಮಾಡೋಣವೆಂದು ಹೇಳಿದರೆ, transparent ಇದ್ದರೆ ನಾವು ಖಂಡಿತವಾಗಿಯೂ ಬರುತ್ತೇವೆ. ನಾಳೆಯೇ ಹೋಗೋಣ. IIT ಇರಬಹುದು ಇನ್ನೊಂದು ಇರಬಹುದು ಬೇರೆ ವಿಷಯದಲ್ಲಿ ಒಟ್ಟಾಗಿ ಹೋಗೋಣ ಆದರೆ, ರಾಜಕೀಯ ಮಾಡುವ ಉದ್ದೇಶದಿಂದ ಅಥವಾ politics ಮಾಡಿ vote ಗಿಟ್ಟಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ, ಪ್ರಚಾರಕ್ಕೋಸ್ಕರ ಬನ್ನಿ ಎಂದು ಹೇಳಿದರೆ, ಖಂಡಿತವಾಗಿ ನೀವೆಷ್ಟು ಇದರಿಂದ ಎಷ್ಟು ಕೆಲಸ ಮಾಡುತ್ತೀರೋ ಅದೇ ರೀತಿಯಲ್ಲಿ ಇನ್ನೊಬ್ಬರೂ ಮಾಡುತ್ತಾರೆನ್ನುವುದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಇನ್ನು Co-operative Bank ಬಗ್ಗೆ ಹೇಳಿದಿರಿ. ಈ ಹಿಂದೆ ತಾವು ಸಾಲ ಮನ್ನಾ ಮಾಡುವಾಗ Co-operative loan ಮನ್ನಾ ಮಾಡಿದಿರಿ. ಹಿಂದೆ ತಾವು ಮಾಡುತ್ತಿದ್ದ ಭಾಷಣದ ಬಗ್ಗೆ record ತೆಗೆದು ನೋಡಿ. " ಅಲ್ಲಿ ನಿಮ್ಮ ಸರ್ಕಾರ ಇದ್ದರೆ ಹೇಳಿ Central Government ಗೆ ಹೇಳಿ, ಎಲ್ಲಾ Scheduled Bank ಸಾಲ ಮನ್ನಾ ಮಾಡಿ" ಎಂದು ಹೇಳುತ್ತಿದ್ದೀರಿ. Challenge ಮಾಡಿದಿರಿ. ಇವತ್ತು ಬೆಳಗಾಂ ಜಿಲ್ಲೆಯೊಂದರಲ್ಲಿಯೇ 348 ಕೋಟಿ ರೂಪಾಯಿಗಳು Scheduled Bank ಗಳಿಂದ ಮಾಫಿ ಆಯಿತು. ಅದೇ ರೀತಿ ಇಡೀ ರಾಜ್ಯದಲ್ಲಿ ಸುಮಾರು 3000 ಕೋಟಿಗಿಂತ ಹೆಚ್ಚು ಹಣ ಇವತ್ತಿನ ದಿವಸ ಮಾಫಿ ಆಗುತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ, Scheduled Bank ಸಾಲ ಮನ್ನಾವನ್ನು ಕೇಂದ್ರ ಸರ್ಕಾರ ಮಾಡುತ್ತದೆ. ಸುಮಾರು 72 ಸಾವಿರ ಕೋಟಿ ರೂಪಾಯಿಗಳ ರೈತರ ಸಾಲವನ್ನು ಇಡೀ ದೇಶಕ್ಕೆ ಅನ್ವಯಿಸುವಂತೆ ಮನ್ನಾ ಮಾಡಿದ್ದಾರೆ. ಅದಕ್ಕೇನೂ ನಿಮ್ಮಿಂದ credit ಇಲ್ಲ. ನೀವು

ಹೇಳಿದ್ದೇ ಸರಿ ಎಂದು ಇವತ್ತು ನೀವು ಹೇಳುತ್ತಿದ್ದೀರಿ. ಆದರೆ, ಎಲ್ಲಿ core sector ಇವೆ, ಯಾವುದರಿಂದ ಹೆಚ್ಚಿನ ಹಣ ನಾವು ಸಂಪಾದನೆ ಮಾಡಬಹುದು, ಎಲ್ಲಕ್ಕೂ ನೀವು ಇವತ್ತಿನ ದಿವಸ ಕೊಕ್ಕೆ ಹಾಕಿ, ಆ development ಅನ್ನು ಸ್ಥಗಿತಗೊಳಿಸಿ, ಮೂಲಭೂತ ಸೌಕರ್ಯ ನಿಲ್ಲಿಸಿ, ಇವತ್ತಿನ ದಿವಸ ಬೇರೆ ನಿಮ್ಮ popular scheme ಅಥವಾ ನಿಮ್ಮ ವೈಯುಕ್ತಿಕವಾದ ಸಾಧನೆಗಳೇನಿವೆ ಅವುಗಳನ್ನು ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರೆ ಹೊರತಾಗಿ ಮತ್ತೇನೂ ಇಲ್ಲ. ಅಮೃತ್ ಮಹಲ್ ಬಗ್ಗೆ ಹೇಳುವುದಾದರೆ, ನಾನು ಇಡೀ ಭೂಮಿಯನ್ನೇ ಒಂದು ಮಠಕ್ಕೆ ಕೊಟ್ಟುಬಿಡುತ್ತೇನೆ, ಅಥವಾ ಇನ್ನೊಂದಕ್ಕೆ ಕೊಡುತ್ತೇನೆಂದರೆ ಇದು ಸರಿಯಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು): ಗುತ್ತಿಗೆ ಕೊಟ್ಟು maintain ಮಾಡುವ ಬಗ್ಗೆ ಕಳೆದ ಮೂರು ವರ್ಷಗಳಿಂದ ಚರ್ಚೆಯಾಗುತ್ತಿತ್ತು. ಅವರು ಒಪ್ಪಿರಲಿಲ್ಲ. ಒಪ್ಪಿಸಿ, ಗುತ್ತಿಗೆಗೆ ಕೊಟ್ಟಿದ್ದೇವೆ. ನಾವೂ, ನೀವೂ ನೋಡೋಣ. ಒಳ್ಳೆಯದು ಮಾಡಿದರೆ ನಾವೇ ಬಲವಂತ ಮಾಡಿ, ಮಾಡಿ ಎಂದು ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಂದೆ ಮಹಾರಾಜರ ಕಾಲದಲ್ಲಿ ಆ ಜಮೀನಿನಲ್ಲಿ ಹುಲ್ಲು ಬೆಳೆಸಿ ಅಮೃತ್ ಮಹಲ್ ತಳಿ ಎಂದು ಹೇಳಿ, ಆಕಳು, ದನಗಳನ್ನು ತಂದು ಸರಿಯಾದ ತಳಿಗಳು ಬರಬೇಕೆನ್ನುವ ದೃಷ್ಟಿಯಿಂದ ಮಾಡಿದಂಥದ್ದು ಅದು.

ನಮ್ಮ ಕಾಲದಲ್ಲೂ ಕೂಡ ಅದನ್ನು private ರವರಿಗೆ regularize ಮಾಡುವುದಕ್ಕೆ ಅನೇಕ ಒತ್ತಡಗಳು ಬಂದವು. ಬಡವರು ಕೂಡ ಅನೇಕ ಜನ ಭೂಮಿಗಳನ್ನು ಹೊಡೆದುಕೊಂಡಿದ್ದರು. ಅದನ್ನು ನಾವು ಅನೇಕ ಕಡೆ regularize ಮಾಡದೇ ಅದನ್ನು ತಡೆದು, ತಡೆದು, ಏಕೆಂದರೆ, ಜಮೀನು ಇಲ್ಲದೇ ಹೋದರೆ ನಾಳೆ ತೊಂದರೆಯಾಗುತ್ತದೆಂದು ಸಾಕಷ್ಟು ಜಮೀನನ್ನು ಉಳಿಸಿದೆವು. ತುಮಕೂರು, ಚಿಕ್ಕನಾಯಕನಳ್ಳಿ, ಈ ಎಲ್ಲಾ ಭಾಗದಲ್ಲಿ ಇದೆ. ಇದು ಇಟ್ಟಂಥ ಉದ್ದೇಶವೇ ಅದು. ಅದಕ್ಕೆ ದಯವಿಟ್ಟು ಯಾವುದೋ ಒಂದು ಮಠಮಾನ್ಯಗಳಿಗೆ ಸಾವಿರಾರು ಎಕರೆ ಕೊಟ್ಟು ಆಮೇಲೆ confirm ಮಾಡಿದರೆ ಏನಾಗುತ್ತದೆ ಅಂದರೆ ಭೂ ಸುಧಾರಣೆಯ ಕಾನೂನಿಗೆ ಹೊಡೆತ ಬೀಳುತ್ತದೆ. ಸಾವಿರಾರು ಟೆನೆಂಟ್‌ಗಳು ಇವತ್ತೇನು ಕೃಷಿಯಿಂದ ಇದ್ದಾರೋ ಅಥವಾ ಲಕ್ಷಾಂತರ ಜನರಿಗೆ ಭೂಮಿ ಏನು ಸಿಕ್ಕಿದೆ ಈ ದೊಡ್ಡ ಕೆಲಸ ಸಾಧನೆಯನ್ನು ಕಾಂಗ್ರೆಸ್ ಪಕ್ಷದವರು ಮಾಡಿದ್ದಾರೆ, ದಯವಿಟ್ಟು ಪುನಃ ಆ ಭೂ ಸುಧಾರಣೆಯ ಕಾನೂನು ಅಂಥ ಕಾನೂನನ್ನು ಎರಚಿ, ತಿರುಚಿ, ಕೆಡಸತಕ್ಕಂಥದ್ದು ಮಾಡಬೇಡಿ. ಇದರಿಂದ ಯಾರಿಗೂ ಲಾಭವಾಗುವುದಿಲ್ಲ. ಇಲ್ಲಾಂದ್ರೆ ನಾಳೆ ಎಲ್ಲರೂ ಕೂಡ ಇದೇ ರೀತಿಯಾಗಿ ಅಧಿಕಾರಕ್ಕೆ ಬಂದವರೆಲ್ಲರೂ ಲೀಸ್ ಕೊಟ್ಟುಕೊಂಡು

ಹೋಗಿ 90 ವರ್ಷ ಲೀಸ್ ಕೊಟ್ಟರೆ ಯಾರು ನೋಡುತ್ತಾರೆ? ಆಗ ಯಾರು ಬದುಕುತ್ತಾರೆ? ಮುಂದೆ ಬರುವವರು 90 ವರ್ಷ ಮಾಡುತ್ತಾರೆ ಇಲ್ಲಾಂದರೆ 90 ವರ್ಷದಿಂದ ಇದ್ದಾರೆಂದು ಕಾಯಂ ಆದರೂ ಮಾಡುತ್ತಾರೆ. ಅದಕ್ಕಾಗಿ ದಯವಿಟ್ಟು ಈ ಕೆಲಸಕ್ಕೆ ಕೈ ಹಾಕಬೇಡಿ, ಸರಕಾರದ ಆಸ್ತಿ ಉಳಿಸಿಕೊಳ್ಳಿ. ಜಮೀನು ಕೊರತೆ ಇದೆ. ಭೂಮಿ ಇದೇನು ಹೆಚ್ಚಿಗೆ ಆಗತಕ್ಕಂಥದ್ದಲ್ಲ. ಇದು ಇದ್ದಷ್ಟೆ ಇರುತ್ತದೆ. ಅದಕ್ಕಾಗಿ ಇದ್ದದ್ದನ್ನು precious ಆಗಿ ಇಟ್ಟುಕೊಳ್ಳಬೇಕು. ನಿಮ್ಮ ಸಾರ್ವಭೌಮತ್ವವನ್ನು ನಡೆಸುವುದು ಭೂಮಿಯ ಮೇಲೆ, ಜಮೀನಿನ ಮೇಲೆ, ಬೇರೆ ಯಾವುದರ ಮೇಲೆ ನಿಮ್ಮ ಸಾರ್ವಭೌಮತ್ವ ಇಲ್ಲ. ಯಾವುದೇ ಒಂದು ಸರ್ಕಾರ, ಒಂದು ದೇಶ, ಒಂದು ಪ್ರದೇಶ, ಒಂದು ಹಳ್ಳಿ ಕಂಡು ಹಿಡಿಯಬೇಕಾದರೆ, ಜಮೀನಿನ ಮೇಲೆ ಹೊರತಾಗಿ ಬೇರೆ ಯಾವುದರ ಮೇಲೆ ಅಲ್ಲ. ಅದಕ್ಕಾಗಿ ದಯವಿಟ್ಟು ಇರತಕ್ಕಂಥದ್ದನ್ನು ನೀವು ಕಳೆದುಕೊಳ್ಳುವುದಕ್ಕೆ ಹೋಗಬೇಡಿ. ಈಗಾಗಲೇ ಮಾರಾಟ ಮಾಡಲಿಕ್ಕೆ ಹೊರಟಿದಿರಿ. ಅದಕ್ಕೆ ಇದರ ಕಡೆ ಗಮನ ಕೊಡಬೇಕು. ಈಗ ನಾನೇನು ಶಾಸಕರ ಫಂಡ್ ಬಗ್ಗೆ, ಇರಿಗೇಷನ್ ಬಗ್ಗೆ, ಅಮೃತ್ ಮಹಲ್ ಕಾವಲ್ ಭೂಮಿಯನ್ನು ಉಳಿಸಿಕೊಳ್ಳುವುದರ ಬಗ್ಗೆ ಹೇಳಿದ್ದೇನೆ. ಫರ್ಟಿಲೈಸರ್ ಬಗ್ಗೆ ದುಡ್ಡು ಕೊಡುತ್ತೇನೆಂದು ಹೇಳಿ 25 ಕೋಟಿ ಕೊಟ್ಟು ಬ್ಯಾಂಕ್ ಕಡೆ ಮುಖ ತೋರಿಸಿದಿರಿ ಅದರ ಬಗ್ಗೆ, ಎಲ್ಲಾ ಸವಿಸ್ತಾರವಾಗಿ ಹೇಳಬೇಕೆ ಹೊರತು, ನೀವು ಏನೋ ನಾನು ಎಲ್ಲಾ ಕೊಟ್ಟಿದ್ದು ಸರಿಯಿದೆ ಎಂದು ಬಜೆಟ್‌ನಲ್ಲಿ ಏನು ಇತ್ತು ಅದನ್ನೆ ಪುನಃ ಸಾರಾಸಗಟಾಗಿ ಮತ್ತೊಮ್ಮೆ ಏನು ಓದಿದಿರಿ, ಅದು ನಿಜವಾಗಲೂ ಈ ಬಜೆಟ್ ಪುನಃ ಪರಿಶೀಲನೆ ಮಾಡಿದ್ದಾರೆಂದು ಅನ್ನಿಸುವುದಿಲ್ಲ. ನಿಮಗೆ ಖುಷಿ ತರತಕ್ಕಂಥದ್ದು ಇದ್ದರೆ ಬೇರೆ ವಿಚಾರ. ಆದರೆ, ಈ ರಾಜ್ಯದ ರೈತರಿಗೆ, ಬಡವರಿಗೆ, ಖುಷಿ ತರುವ ಬಜೆಟ್ ಇದು ಅಲ್ಲ. ರೈತರ ಪಾಲಿಗೆ ಇದೊಂದು ಮಾರಣಾಂತಿಕವಾದ ಬಜೆಟ್ ಎಂದು ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವರುಣ): ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರು ಬಜೆಟ್ ಮಂಡಿಸಿ ಇವತ್ತು ಉತ್ತರಿಸಿದ್ದಾರೆ. ನಾವು ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದೆವು. ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದೇವೆ. ಅವು ಯಾವುದಕ್ಕೂ ಕೂಡ ಉತ್ತರ ಕೊಡುವ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಲಿಲ್ಲ. ಅವರು ಬಜೆಟ್‌ನಲ್ಲಿ ಹೇಳಿರುವ ಮಾತುಗಳನ್ನೇ ಇನ್ನೊಂದು ಸಾರಿ ಇನ್ನೊಂದು ಬಜೆಟ್ ಸ್ಪೀಚ್ ಓದುವ ಹಾಗೆ ಉದ್ದಕ್ಕೂ ಓದಿಬಿಟ್ಟರು. ಅದರಿಂದ ಬದಲಾವಣೆಯಾಗಲಿಲ್ಲ. ಬಜೆಟ್ ಪುಸ್ತಕ ಏನು ಇತ್ತು, ಅದನ್ನು ಇನ್ನೊಮ್ಮೆ ಓದಿ ಬಿಟ್ಟಿದ್ದಾರೆ. ಮಾನ್ಯ ಯಡಿಯೂರಪ್ಪನವರು ನನಗಿಂತ ವಯಸ್ಸಿನಲ್ಲಿ ಸೀನಿಯರ್ ಇದ್ದಾರೆ, ಮುಖ್ಯಮಂತ್ರಿಗಳಾಗಿದ್ದಾರೆ, ಮೂರನೇ ಬಜೆಟ್ ಮಂಡಿಸುತ್ತಿದ್ದಾರೆ. ಒಂದು

ಸಾರಿ ಬಜೆಟ್ ಎಂದರೆ, It is a Financial Annual Statement, consisting of Annual Receipts and Expenditure. ಬಜೆಟ್ ಮಂಡಿಸಿ ಉತ್ತರ ಕೊಡುವಾಗ ಇಲ್ಲಿಗೊಂದು ಕೋಟಿ, ಅಲ್ಲಿಗೊಂದು ಕೋಟಿ, ಅಲ್ಲಿಗೊಂದು 50 ಲಕ್ಷ, ಅಲ್ಲಿಗೆ ಎರಡು ಕೋಟಿ, ಇಲ್ಲಿಗೆ ಮೂರು ಕೋಟಿ, ಎಂದು ಹೇಳುವುದು ಇದೆಯಲ್ಲ ಇದು another supplementary estimates ಆಗಿ ಹೋಗುತ್ತದೆ. ಬಜೆಟ್ sanctity ಉಳಿದುಕೊಳ್ಳುವುದಿಲ್ಲ. ಅವರ ಒತ್ತಡ ಬಂತು ಇವರ ಒತ್ತಡ ಬಂತು ಎಂದು ಈ ರೀತಿ ಮಾಡಿದರೆ ಇನ್ನೊಂದು ಕಾರ್ಯಕ್ರಮಗಳ ಪಟ್ಟಿಯಾಗುತ್ತದೆ. ಹೋದ ಸಾರಿ ಕೂಡ ಬಜೆಟ್ ಮಂಡಿಸುವಾಗ ಹೀಗೆ ಮಾಡಿದರು. ಹೊಸದಾಗಿ ಜೇಬಿನಿಂದ ತೆಗೆದುಕೊಂಡು ಬಂದ ಹಾಗೆ ಇಲ್ಲಿ ಎಲ್ಲವನ್ನು 200–300 ಕೋಟಿಗೆ ಅನೌನ್ಸ್ ಮಾಡಿಬಿಟ್ಟರು. ಈಗ ಮತ್ತೆ ಉತ್ತರ ಕೊಡುವಾಗ ಅಷ್ಟು ಮಾಡಿ ಬಿಡುವುದು. ಹಾಗಾದರೆ ಬಜೆಟ್ ಎಂದರೆ ಏನು? ಅದಕ್ಕೆ ನಾನು ಬಜೆಟ್ ಮಂಡಿಸುವಾಗಲೇ ಒಂದು ದೂರದೃಷ್ಟಿ ಇರಬೇಕೆಂದು ಹೇಳಿದ್ದು. What are our priorities? ನಾವು ದುಡ್ಡು ಅಲೋಕೇಷನ್ ಮಾಡುವಾಗ ಯಾವ ರೀತಿ ಮಾಡಬೇಕು? ಎಷ್ಟೆಷ್ಟು ಮಾಡಬೇಕು? supplementary estimates ಮಾಡುವುದು ನಮ್ಮ ನಿಲುಕಿಗೆ ಸಿಗದೇ ಇರತಕ್ಕಂಥ ಖರ್ಚುಗಳನ್ನು ಮಾಡುವಾಗ ಅದಕ್ಕೆ ಸಾಲದೆ ಹೋದಾಗ ಹೊಸದಾಗಿ ಮಾಡಬೇಕಾದಾಗ ಅದನ್ನು ಮಾಡುವುದು ಸರಿ. ಈ ಬಜೆಟ್ ಮಂಡಿಸಿ ಒಂದು ವಾರದ ನಂತರ ಉತ್ತರ ಕೊಡುವಾಗಲೇ ಅಲ್ಲಿಗೊಂದು ಕೋಟಿ, ಇಲ್ಲಿಗೊಂದು ಕೋಟಿ, ತೆಗೆದುಕೊಳ್ಳಿ ಎಂದು ಕೊಟ್ಟರೆ, ರೈತರ ಸಮಸ್ಯೆಗಳಿಗೆ ಇದರಿಂದ ಪರಿಹಾರ ಸಿಗುತ್ತದೆಯೆ? ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪುತ್ತದೆಯೆ? ಅವರು ಬಹಳ ಕ್ರಾಂತಿಕಾರಕವಾಗಿ ನಾನು ಒಂದು ಸಾವಿರ ರೂಪಾಯಿ ಕೊಟ್ಟಿದ್ದೇನೆ, ಯಾರು ಕೊಟ್ಟಿದ್ದರು? ಬಡ್ಡಿ 3% ಗೆ ಇಳಿಸಿದ್ದೇನೆ, ಯಾರು ಇಳಿಸಿದ್ದರು? ಹಿಂದೆಯೂ ಕೂಡ ಇವು ಆಗಿವೆ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ 11.50% ನಿಂದ 6% ಬಂದಿದೆ. ಆಮೇಲೆ ಕೇಂದ್ರ ಸರ್ಕಾರ 9% ನಿಂದ 7%ಗೆ ಮಾಡಿದ ಮೇಲೆ ಇವರು ಹಣಕಾಸಿನ ಮಂತ್ರಿಯಾದ ಮೇಲೆ 4% ಆಯಿತು, ಆಮೇಲೆ 3% ಆಯಿತು. ಇದು continuous process. ಹೋದ ಸಾರಿಗಿಂತ ಈ ಸಾರಿ 1% ಕಡಿಮೆಯಾಗಿದೆ. ಅದರಿಂದ 35 ಕೋಟಿ ರೂಪಾಯಿ exchequer ಗೆ ಜಾಸ್ತಿಯಾಯಿತು. ಅದರಿಂದ ರೈತರ ಉತ್ಪನ್ನ ಏನೂ ಜಾಸ್ತಿಯಾಗುವುದಿಲ್ಲ. ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಿಲ್ಲ. ಹಳ್ಳಿಗಳಲ್ಲಿ ಬದುಕುವುದಕ್ಕೆ ಸಾಧ್ಯವಾಗದೇ ವಲಸೆ ಬರುವುದು ನಿಂತು ಹೋಗುವುದಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ: ಹಾಗಾದರೆ ಬಡ್ಡಿ ದರವನ್ನು 4% ನಿಂದ 3% ಗೆ ಮಾಡಿದ್ದನ್ನು ವಿರೋಧಿಸುತ್ತಿರಾ?

ಶ್ರೀ ಸಿದ್ದರಾಮಯ್ಯ: ನಾನು ಬೇಡ ಎಂದು ಹೇಳುವುದಿಲ್ಲ. ಅದಕ್ಕೆ ನಾನೆಲ್ಲಿ ವಿರೋಧಿಸಿದೆ? ಆಯಿತು ನೀವು ಮಾಡಿದಿರಿ? Are you going to double the production with this? ನಾನೇನು ಹೇಳಿದೆ ಎಂದರೆ, ಕ್ರಾಂತಿಕಾರಕವಾಗಿ ಆಗಿ ಬಿಟ್ಟಿದೆ. ಕ್ರಾಂತಿಕಾರಕ ಅಂದ ಮೇಲೆ food production ಕೂಡ ಕ್ರಾಂತಿಕಾರಕ ಆಗಬೇಕು. ರೈತರ ಬೆಳೆಗಳಿಗೆ ನ್ಯಾಯಯುತವಾದ ಬೆಲೆಗಳು ಸಿಗಬೇಕು. Remunerative price ಏನು ಮಾಡಿದಿರಿ? 250 ಕೋಟಿ ರೂಪಾಯಿ ನಿಂದ 500 ಕೋಟಿ ರೂಪಾಯಿಗೆ market intervention ಗೆ ಇಟ್ಟು ಬಿಟ್ಟಿದ್ದೇವೆ. ಎಲ್ಲಾ ಬೆಳೆಗಳನ್ನು ತೆಗೆದುಕೊಳ್ಳುವಂತೆ ಮಾಡಿ. ನಾನು ಸಲಹೆ ಕೊಟ್ಟೆ, ಮೊದಲೇ ನೀವು ಇಂಥ ಬೆಳೆಗಳನ್ನು ಬೆಳೆದರೆ ನಾವು ಬೆಲೆ ಕೊಡುತ್ತೇವೆಂದು ಅನೌನ್ಸ್ ಮಾಡಿ. ಬತ್ತ ಬೆಳೆದರೆ, ಕಬ್ಬು ಬಿಟ್ಟು ಬಿಡಿ, ಬತ್ತ, ರಾಗಿ, ಶೇಂಗ, ಹತ್ತಿ, ಇಂತಿಂಥ ಬೆಳೆಗಳನ್ನು ಬೆಳೆದರೆ ನಾವು ಇಷ್ಟು ಬೆಲೆ ಕೊಡುತ್ತೇವೆ ನೀವು ಬೆಳೆಯಿರಿ ಎಂದು ರೈತರಿಗೆ ಹೇಳಿ. ಆಗ ರೈತರಿಗೆ remunerative price ಸಿಗುತ್ತದೆ. ಅವರಿಗೆ ನ್ಯಾಯಯುತವಾದ ಬೆಲೆ ಸಿಗುತ್ತದೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪುತ್ತದೆ. ಅದನ್ನು ಬಿಟ್ಟು ನಾನು ಬೀಜಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟಿದ್ದೇನೆಂದು ಹೇಳಿದರೆ ಹೇಗೆ? ಬೀಜಕ್ಕೆ 50% ಕೊಡುತ್ತಿಲ್ಲವೆ? ನೀವು ಬೆಲೆ ನಿಗದಿ ಮಾಡಿಬಿಟ್ಟರೆ ನಿಮ್ಮನ್ನು ಏನು ಮಾಡುತ್ತಾರೆ? ಮಾನ್ಯ ಉದಾಸಿಯವರೇ ಒಂದು ನಿಮಿಷ ಕೇಳಿ. ಒಂದು ವೇಳೆ ಮಾಡಿ ಬಿಟ್ಟರಿ, ಆಗ ಏನಾಗುತ್ತದೆ? Will Government of India of come in the way? ಇದನ್ನು ಏಕೆ ಮಾಡಿದಿರಿ ಎಂದು ಕೇಳುತ್ತಾರೆಯೆ?

(ಗೊಂದಲ)

ಶ್ರೀ ಸಿ.ಎಂ.ಉದಾಸಿ: ನ್ಯಾಷನಲ್ ಲೆವಲ್‌ನಲ್ಲಿ ಇದು ಸಾಧ್ಯವಾಗಬೇಕಲ್ಲ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಮೊದಲಿನಿಂದಲೂ ನೀವೇನು ಯಾರಿಗೂ ಮಾತನಾಡುವುದಕ್ಕೆ ಬಿಡುವುದಿಲ್ಲವಲ್ಲ. ನಾವು ಸಿದ್ದರಾಮಣ್ಣನವರನ್ನು ಬೇರೆ ತರಹ ನೋಡಿದ್ದೇವೆ.

ಶ್ರೀ ಸಿದ್ದರಾಮಯ್ಯ: ಆಮೇಲೆ ನೀವು ಹೇಳಿ ನಾನೀಗ ಕ್ಲಾರಿಫಿಕೇಷನ್ ಕೇಳುತ್ತೇನೆ. ಉತ್ತರ ಕೊಡುವಾಗ ನೀವು ಹೇಳಿ. ನಿಮ್ಮ ಡಿಮ್ಯಾಂಡ್ಸ್‌ಗೆ ಟೈಂ ಇಲ್ಲ ನಾವೇನು ಮಾಡುವುದು?

ಶ್ರೀ ಬಸವರಾಜ್ ಬೊಮ್ಮಾಯಿ: ನೀವು ಈ ನಡುವೆ ಯಾರಿಗೂ ಮಾತನಾಡುವುದಕ್ಕೆ ಬಿಡುವುದಿಲ್ಲ. ಆ ಕಡೆಗೂ ಬಿಡುವುದಿಲ್ಲ, ಈ ಕಡೆಗೂ ಬಿಡುವುದಿಲ್ಲ. ನೀವು ಯಾರಿಗೂ ಬಿಡುವುದಿಲ್ಲ. ಹಾಗಾದರೆ ಯಾರೂ ಮಾತನಾಡಬಾರದೆ? ನೀವೇನು 6%ಗೆ ಕಡಿಮೆ ಮಾಡಿದ್ದರಲ್ಲ ಆಗಲೂ food production ಹೆಚ್ಚಾಗಿದೆ ಎಂದಲ್ಲ. ಅವರ ಕಷ್ಟದಲ್ಲಿ ಸರ್ಕಾರ ಭಾಗಿಯಾಗಿದ್ದೇದೆ. ಆಗಲೂ ಭಾಗಿಯಾಗಿದ್ದೇವೆ. ಈಗಲೂ ಭಾಗಿಯಾಗಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅವರು ಅಷ್ಟು ಹೇಳಲಿಲ್ಲ. ಬಹಳ ಕ್ರಾಂತಿಕಾರಕ.

ಶ್ರೀ ಬಸವರಾಜ್ ಬೊಮ್ಮಾಯಿ: ನಾವು ನೀವು ಹಣಕಾಸಿನ ಸಚಿವರಾಗಿ ಮಾಡಿರುವುದನ್ನು ಗುರುತಿಸುತ್ತೇವೆ.

ಶ್ರೀ ಸಿದ್ದರಾಮಯ್ಯ: ನಾವು ಯಾರೂ ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿರಲಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ: ನೀವು 6%ಗೆ ಮಾಡಿದ್ದನ್ನು ಗುರುತಿಸಿ, ಶ್ಲಾಘಿಸುತ್ತೇವೆ. ಅದೇ ರೀತಿ 3%ಗೆ ಮಾಡಿದ್ದಕ್ಕೆ ನೀವು ಒಪ್ಪಿಕೊಳ್ಳಿ ಅಷ್ಟೇ.

ಶ್ರೀ ಸಿದ್ದರಾಮಯ್ಯ: ಆಯಿತು ಒಪ್ಪಿಕೊಂಡಾಯಿತು. Agreed.

ಶ್ರೀ ಬಸವರಾಜ್ ಬೊಮ್ಮಾಯಿ: ಆ hang over ನಿಂದ ಹೊರಗಡೆ ಬನ್ನಿ.

ಅಧ್ಯಕ್ಷರು: ಸಿದ್ದರಾಮಯ್ಯನವರೆ, ಸ್ಪಷ್ಟೀಕರಣಕ್ಕೆ ಮಾತ್ರ ಸೀಮಿತವಾಗಿರಲಿ. ಮತ್ತೆ ಡಿಸ್‌ಕಷನ್ ಮಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ: ಅವರು ಅಡ್ಡ ಬಂದರೆ ನಾನೇನು ಮಾಡಲಿ? ಇದರಿಂದಾಗಿ ರೈತರ ಸಮಸ್ಯೆಗಳು ಪರಿಹಾರವಾಗುವ ಸೂತ್ರವಲ್ಲ. ನೀರಾವರಿಗೆ ಖರ್ಚು ಮಾಡುವ ಹಣ ತೆಗೆದುಕೊಂಡು ಹೋಗಿ ಅಲ್ಲಿ 500 ಕೋಟಿ ರೂಪಾಯಿ ಬಿತ್ತನೆ ಬೀಜ ಕೊಡುವುದಕ್ಕೆ ಹೊರಟಿದ್ದೇವೆ, ಸಬ್ಸಿಡಿ ಕೊಟ್ಟಿದ್ದೇವೆಂದರೆ ಹೇಗೆ? ನೀರಾವರಿಗೆ ಕೊಡುವ ಹಣ.

ಹಿಂದೆ 2700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರು. ಆದರೆ, ನಾವು 2600 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಇವರು ಹೇಳುತ್ತಿದ್ದಾರೆ. 17,782 ಕೋಟಿ ರೂಪಾಯಿಗಳಷ್ಟು ಪ್ಲಾನ್ ಇರುವಾಗ ನೀವು ಕೇವಲ 3400 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. 25,953 ಕೋಟಿ ರೂಪಾಯಿ ಇರುವಾಗ 46% ನಷ್ಟು ದೊಡ್ಡ ಪ್ಲಾನ್ ಸೈಜ್ ಮಾಡಿದ್ದೇವೆಂದು ಆಂಬಿಷಿಯಸ್ ಪ್ಲಾನ್ ಮಾಡಿರುವ ಪ್ರಕಾರವೆ ನೀರಾವರಿಗೆ 20% ಹೆಚ್ಚಾಯಿತೆಂದು ಇಟ್ಟುಕೊಂಡರೆ ಅದರ ಹಣ ಎಷ್ಟಾಗಬೇಕು? It should be more than Rs. 5000 crore ಒಂದು ವೇಳೆ ಅದನ್ನು 25% ಮಾಡಿದ್ದಾರೆಂದು ಇಟ್ಟುಕೊಂಡರೆ it will be

more than Rs.6000 crore ಆದ್ದರಿಂದ ನೀರಾವರಿಗೆ ಎಲ್ಲಿ ಹೆಚ್ಚಾಯಿತು? ಈಗ ನಿಮ್ಮ ಪ್ಲಾನ್ ಸೈಜ್ ಮತ್ತು ಇನ್‌ಫ್ಲೇಷನ್ ಜಾಸ್ತಿಯಾಗಿದೆ. ಇವೆಲ್ಲಾ ಆದಮೇಲೆ ನೀರಾವರಿಗೆ ಇವತ್ತಿನ ಲೆಕ್ಕ ತೆಗೆದುಕೊಂಡರೆ ಜಾಸ್ತಿ ಕೊಟ್ಟಿಲ್ಲ. 2004-05ರಲ್ಲಿ ಕಬ್ಬಿಣ ಮತ್ತು ಸಿಮೆಂಟ್ ಬೆಲೆ ಎಷ್ಟಿತ್ತು? ಇವತ್ತಿರತಕ್ಕಂಥ ಕಬ್ಬಿಣ ಮತ್ತು ಸಿಮೆಂಟ್ ಬೆಲೆಯನ್ನು ಹೋಲಿಕೆ ಮಾಡಿದರೆ ಎಷ್ಟು ಹಣ ಒದಗಿಸಬೇಕಾಗುತ್ತದೆ? ಇದನ್ನು ಕಂಪೇರ್ ಮಾಡಿದರೆ ನೀರಾವರಿಗೆ ಕೊಡತಕ್ಕಂಥದ್ದು ಇನ್ನೂ ಕಡಿಮೆಯಾಗುತ್ತದೆ. Not 13% It will be 0%. That is my point. ನೀರಾವರಿಗೆ ಹೆಚ್ಚು ಹಣ ಕೊಟ್ಟು ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸಿಕೊಡಲೆಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. 25,953 ಕೋಟಿ ರೂಪಾಯಿಗಳಷ್ಟು ಪ್ಲಾನ್ ಸೈಜ್ ಇರುವಾಗ ನೀವು ಹಳೆಯದನ್ನು ತೆಗೆದುಕೊಂಡು ಅಂದರೆ, 2004-05ರಲ್ಲಿ 12 ಸಾವಿರ ಅಥವಾ 13 ಸಾವಿರ ಕೋಟಿ ರೂಪಾಯಿಗಳಷ್ಟು ಪ್ಲಾನ್ ಸೈಜ್ ಇತ್ತು. ಇವತ್ತು ಪ್ಲಾನ್ ಸೈಜ್ ಎಷ್ಟಿದೆ? 2002-03ರಲ್ಲಿ ಕಮರ್ಷಿಯಲ್ ಟ್ಯಾಕ್ಸ್‌ನಿಂದ 10,000 ಕೋಟಿ ರೂಪಾಯಿಗಳಷ್ಟು ತೆರಿಗೆ ಹಣ ಬರುತಿತ್ತು. ಆದರೆ, ಇವತ್ತಿನ ದಿವಸ 20,000 ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆ. ಆವತ್ತಿನ 56,000 ಕೋಟಿ ರೂಪಾಯಿ ಇವತ್ತಿಗೆ ಖರ್ಚಾಗುತ್ತಿತ್ತಾ? ಇವತ್ತು ಎಷ್ಟು ಖರ್ಚಾಗುತ್ತಿದೆ? ನಾನು ಈ ಎಲ್ಲಾ ವಿಷಯಗಳನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀರಾವರಿಗೆ ದೊಡ್ಡ ಖೋತ ಮಾಡಿದ್ದಾರೆ. ಈ ಸಾರಿ ನೀರಾವರಿಗೆ ಇಟ್ಟಿರುವ ಹಣದಲ್ಲಿ ಬಡ್ಡಿ ಕೊಡುವುದಕ್ಕೆ ಸೇರಿಲ್ಲವೆಂದು ಕಳೆದ ವರ್ಷದ ಉತ್ತರ ನೀರಾವರಿಗೆ ಕೊಡುವಂಥ ಸಂದರ್ಭದಲ್ಲಿ ಹೇಳಿದ್ದೀರಿ. ಆದ್ದರಿಂದ, ಈ ವರ್ಷ ಕೂಡ ಸೇರಿರುವುದಿಲ್ಲ. ಏಕೆಂದರೆ, ಅಕೌಂಟ್ಸ್ ಚೇಂಜ್ ಮಾಡಿರುವುದರಿಂದ ಮೊದಲಿನ ಪದ್ಧತಿ ಈಗ ಬದಲಾವಣೆಯಾಗಿದೆ. ಅದರ ಹಿಂದಿನ ವರ್ಷ ಬಡ್ಡಿ ಸೇರಿಸಿಕೊಂಡು ಇಟ್ಟಿದ್ದರು. ಆದರೆ, ಈ ವರ್ಷ ಬಡ್ಡಿ ಸೇರಿಸದೆ ಇಟ್ಟಿದ್ದೀರಿ. ಹೋದ ವರ್ಷ ಸಹ ಇಟ್ಟಿರುವಂತೆ ಈ ವರ್ಷ ಅದನ್ನು ಮುಂದುವರಿಸಿದ್ದೀರಿ. ಆದ್ದರಿಂದ, ನಾನು ಹೇಳುವುದೇನೆಂದರೆ, ನೀವು ನೀರಾವರಿಗೆ 3500 ಕೋಟಿ ರೂಪಾಯಿ ಇಟ್ಟಿರತಕ್ಕಂಥದ್ದು ಬಹಳ ಕಡಿಮೆಯಾಯಿತು. ಇಲ್ಲಿ ಖರ್ಚು ಮಾಡಬೇಕಾಗಿರತಕ್ಕಂಥ ಹಣವನ್ನು ತೆಗೆದುಕೊಂಡು ಹೋಗಿ ಕೃಷಿಗೆ ಮತ್ತು ಅಲ್ಲಿ ಇಲ್ಲಿ ಸ್ವಲ್ಪ ಖರ್ಚೂ ಮಾಡಿದ್ದೀರಿ. ಮತ್ತೆ ಸಾಲ ಮನ್ನಾ ಮಾಡಿದರೆ 25,000 ಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದೀರಿ. ಆದರೆ, ಅದನ್ನು ಬೆಳೆ ವಿಮೆಗೆ ಅಡ್ಜೆಸ್ಟ್ ಮಾಡಿಕೊಳ್ಳುತ್ತಿದ್ದೀರಿ. ಆದ್ದರಿಂದ, ದಯಮಾಡಿ ಬೆಳೆ ವಿಮೆಗೆ ಹಿಡಿದುಕೊಳ್ಳತಕ್ಕಂಥ ಕೆಲಸ ಮಾಡಬೇಡಿ. ಅನೇಕ ಕಡೆ ಬ್ಯಾಂಕ್‌ಗಳಿಗೆ ಹಣ ಬಂದಿದೆ. ಇದು ಎಲ್ಲರಿಗೂ ಕೂಡ ಅನುಕೂಲವಾಗುವುದಿಲ್ಲ. ಆದ್ದರಿಂದ, ತಾವು

ಅದನ್ನು ಮಾಡಬೇಕು. ಎರಡನೆಯದು ಏನೆಂದರೆ, ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಇತ್ತಕಡೆ ಕುಳಿತ್ತಿದ್ದಂಥ ಸಂದರ್ಭದಲ್ಲಿ ನಾನು ಹಣಕಾಸಿನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಶಾಸಕರಿಗೆ ಕೋಟಿ ರೂಪಾಯಿಗಳಷ್ಟು ಇಡಬೇಕೆಂದು ಇವರೇ ಇಲ್ಲಿ ಆರ್ಗ್ಯುಮೆಂಟ್ ಮಾಡಿದ್ದಾರೆ. ಇದರ ಬಗ್ಗೆ ದೊಡ್ಡ ಗಲಾಟೆ ಆಯಿತು. ಮತ್ತೆ ಪ್ರತಿವರ್ಷ ನೀರಾವರಿ ಬಗ್ಗೆ ಮಾತನಾಡಿದ್ದಾರೆ. ನಾನು ಮಂಡಿಸಿರುವ 7 ಬಜೆಟ್‌ನಲ್ಲಿ ಪ್ರತಿವರ್ಷ ನೀರಾವರಿ ಬಗ್ಗೆ ಇವರು ಎಷ್ಟು ಮಾತನಾಡಿದ್ದಾರೆ. ಅವರು ಮಾತನಾಡಿರತಕ್ಕಂಥದ್ದರ ದಾಖಲೆಗಳನ್ನು ತೆಗೆದುಕೊಂಡು ಅವರು ಓದಿಕೊಳ್ಳಲಿ. ಈಗ ಅವರೇ ಮುಖ್ಯ ಮಂತ್ರಿಗಳಾಗಿದ್ದಾರೆ, ಜೊತೆಗೆ ಇವರಿಗೆ ಸಿಕ್ಕಿರತಕ್ಕಂಥ ಸುವರ್ಣಾವಕಾಶ ಅಂದರೆ, ಹಣಕಾಸಿನ ಪರಿಸ್ಥಿತಿ ಚೆನ್ನಾಗಿರುವಾಗ ಇವರು ಹಣಕಾಸಿನ ಮಂತ್ರಿಗಳಾಗಿದ್ದಾರೆ. ಆದ್ದರಿಂದ, ಇನ್ನೂ ಜಾಸ್ತಿ ಕೊಡಬಹುದಾಗಿತ್ತು. ಆದ್ದರಿಂದ, ನಾನು ಹೇಳುವುದೇನೆಂದರೆ, Expenditure Book Volume-7ರಲ್ಲಿ 200 ಕೋಟಿ ರೂಪಾಯಿ "ಇತರೆ"ಗೆಂದು ಇಟ್ಟಿದ್ದೀರಿ. ಶಾಸಕರ ಕ್ಷೇತ್ರದ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಒಂದು ರೂಪಾಯಿಯನ್ನು ತೋರಿಸಿಲ್ಲ. "ಇತರೆ" ಎನ್ನುವ ಕಡೆ 200 ಕೋಟಿ ರೂಪಾಯಿ ಇಟ್ಟಿದ್ದೀರಿ. ಆದ್ದರಿಂದ, ನಾನು ಹೇಳುವುದೇನೆಂದರೆ, ಇನ್ನು 8 ತಿಂಗಳಿರುವುದರಿಂದ ಶಾಸಕರಿಗೆ ಕೊಟ್ಟರೆ ಬಹಳ ಉಪಯೋಗವಾಗುತ್ತದೆ. ಆದ್ದರಿಂದ, ಇದನ್ನು ಈ ವರ್ಷ ಕನಿಷ್ಠ 600 ಕೋಟಿ ರೂಪಾಯಿಗಳನ್ನು ಮಾಡಲೇಬೇಕು ಎನ್ನತಕ್ಕಂಥದ್ದು ಎಲ್ಲಾ ಸದಸ್ಯರ ಒತ್ತಾಯ ಇದೆ. ಈಗ ನಾಲ್ಕು ತಿಂಗಳು ಕಡಿಮೆಯಾಗಿದೆ. ಆದ್ದರಿಂದ, ಕಡಿಮೆ ಮಾಡಿ 75 ಕೋಟಿ ರೂಪಾಯಿ ಮಾಡುತ್ತೇವೆಂದು ಮಾಡುವುದಕ್ಕೆ ಹೋಗಬೇಡಿ. 600 ಕೋಟಿ ರೂಪಾಯಿಗಳನ್ನು ಇಡತಕ್ಕಂಥ ಕೆಲಸವನ್ನು ಮಾಡಿ. ಏಕೆಂದರೆ, ಇವತ್ತು ಕಾಸ್ಟ್ ಜಾಸ್ತಿಯಾಗಿದೆ. ಎಸ್ಕಲೇಷನ್ ಮತ್ತು ಇನ್‌ಫ್ಲೇಷನ್ ಜಾಸ್ತಿಯಾಗಿದೆ. ದಯವಿಟ್ಟು ಅದನ್ನು ಮಾಡಿ. ಮತ್ತೆ ಸುಮಾರು 800 ರಿಂದ 900 ಜನ ಸಾರಾಯಿ ಮಾರಾಟ ಮಾಡುತ್ತಿದ್ದವರು ಇದ್ದರು. ಸಾರಾಯಿಯನ್ನು ನೀವು ಇಲ್ಲಿ ಮನ್ನಾ ಮಾಡಿದಾಗ ಸಾರಾಯಿ ಮೇಲೆ ಅವಲಂಬಿತರಾಗಿರತಕ್ಕಂಥ ಜನರಿಗೆಲ್ಲಾ ನಾವು ರೀ-ಹ್ಯಾಬಿಲಿಟೇಷನ್ ಪ್ಯಾಕೇಜ್ ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದೀರಿ. ಆದ್ದರಿಂದ, ನಾನು ಮತ್ತೆ ಒತ್ತಾಯ ಮಾಡುವುದೇನೆಂದರೆ, ಅವರು ಈಗ ತುಂಬಾ ಕಷ್ಟದಲ್ಲಿರುವುದರಿಂದ ಬೀದಿಪಾಲಾಗಿದ್ದಾರೆ ಮತ್ತೆ ಅನೇಕ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದ್ದರಿಂದ, ಅವರೆಲ್ಲರಿಗೂ ಕೂಡ ನನ್ನ ಸಲಹೆ ಪ್ರಕಾರ ದೇವರಾಜ್ ಅರಸು ಹಿಂದುಳಿದ ಅಭಿವೃದ್ಧಿ ನಿಗಮದಿಂದ 3% ಬಡ್ಡಿ ದರದಲ್ಲಿ ಸಾಲ ಸಿಗುವಂತೆ ಮಾಡಿ ಅವರು ಬದುಕುವುದಕ್ಕೆ ಏನಾದರೊಂದು ವ್ಯವಸ್ಥೆಯನ್ನು ತಾವು

ಮಾಡಿಕೊಳ್ಳಬೇಕು. ವಿಶೇಷವಾಗಿ ಅವರಿಗೊಂದು ಪ್ಯಾಕೇಜ್ ಪ್ರೋಗ್ರಾಮ್ ಮಾಡಿ, ಅವರ ಮಕ್ಕಳಿಗೆ ಕೆಲಸ ಕೊಡಿಸತಕ್ಕಂಥದ್ದು ಮತ್ತು ಬೇರೇನಾದರೂ ಮಾಡಿಸತಕ್ಕಂಥ ಕೆಲಸವನ್ನು ಕೂಡಲೆ ಮಾಡಬೇಕು. ಮೂರನೆಯದು ಏನೆಂದರೆ, ರೈತರ ಗೊಬ್ಬರಕ್ಕೋಸ್ಕರ 500 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ. ಅಲ್ಲಿಟ್ಟಿರತಕ್ಕಂಥದ್ದು 25 ಕೋಟಿ ರೂಪಾಯಿ ಅಷ್ಟೇ. ಆದ್ದರಿಂದ, ಹೆಚ್ಚು ಹಣ ಕೊಟ್ಟು ಬೇರೆ ಕಡೆಯಿಂದ ತೆಗೆದುಕೊಂಡು ಬರತಕ್ಕಂಥ ಕೆಲಸವನ್ನು ಮಾಡಿ. ನೀವು ವಾಸ್ತವಾಂಶಗಳ ಆಧಾರದ ಮೇಲೆ ನೋಡಿದಾಗ ನೀವು ಕೃಷಿಗೆ ಕೊಟ್ಟಿರತಕ್ಕಂಥದ್ದು ಕಡಿಮೆ ಇದೆ. ಇನ್‌ಫ್ಲೇಷನ್ ತೆಗೆದುಕೊಂಡರೆ ಇನ್ನೂ ಬಹಳ ಕಡಿಮೆಯಾಗುತ್ತದೆ. 2006ರಲ್ಲಿ ಸಮ್ಮಿಶ್ರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನೀವೇ ಹಣಕಾಸಿನ ಮಂತ್ರಿಯಾಗಿದ್ದಾಗ ಅಗ್ರಿಕಲ್ಚರ್ ಪಾಲಿಸಿ ಮಾಡಿದ್ದೀರಿ. ಇನ್ನು 10 ವರ್ಷಗಳಲ್ಲಿ ಫುಡ್ ಪ್ರೊಡಕ್ಷನ್ ಡಬಲ್ ಮಾಡುತ್ತೇವೆಂದು ಹೇಳಲಾಗಿತ್ತು. ಅದಕ್ಕೆ ಪೂರಕವಾಗಿರತಕ್ಕಂಥದ್ದು ಇದರಲ್ಲಿ ಏನೂ ಇಲ್ಲ. ಮತ್ತೆ SC:ST ವರ್ಗದವರಿಗೂ ಕೂಡ ಕೊಟ್ಟಿರುವ ಅಲೋಕೇಷನ್ ಬಹಳ ಕಡಿಮೆ ಇದೆ. ಈ ಸಾರಿ ಒಟ್ಟಾರೆ 3000 ಕೋಟಿ ಕ್ಯಾಪಿಟಲ್ ರಿಸೀಟ್ ಇಟ್ಟುಕೊಂಡಿದ್ದೀರಿ. ಇದು ಎಲ್ಲಿಂದ ಬರುತ್ತದೆಂಬುದು ಗೊತ್ತಿಲ್ಲ. ಅದು ಬಾರದೆ ಇದ್ದರೆ, ನಗರ ಪ್ರದೇಶದಲ್ಲಿ 1800 ಕೋಟಿ ಖರ್ಚು ಮಾಡುತ್ತೇವೆಂದು ಮತ್ತು 700 ಕೋಟಿ ರೂಪಾಯಿ ಅಲ್ಲಿ ಇಲ್ಲಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ಇದ್ಯಾವುದೂ ಕೂಡ ಆಗುವುದಿಲ್ಲ. ಒಟ್ಟಾರೆಯಾಗಿ ಇದು ರೈತರ ಮತ್ತು ಬಡವರ ಪರವಾಗಿಯೂ ಕೂಡ ಇಲ್ಲ 2 ರೂಪಾಯಿಗೆ ಒಂದು ಕೆ.ಜಿ.ಅಕ್ಕಿ ಕೊಡುತ್ತೇವೆಂದು ಹೇಳಿದರು. ಆದ್ದರಿಂದ, ನಾನು ಒಂದು ಡಿಮ್ಯಾಂಡ್ ಮಾಡುವುದೇನೆಂದರೆ, ಕಾರ್ಡ್ ಯೂನಿಟ್ ಸಿಸ್ಟಮ್‌ನ್ನು ದಯಮಾಡಿ ತೆಗೆದು ಹಾಕಿ. ತಲಾ 4 ಕೆ.ಜಿ.ಮಾಡಿರತಕ್ಕಂಥದ್ದನ್ನು ದಯಮಾಡಿ ತೆಗೆದು ಹಾಕಬೇಕು. ಹಳ್ಳಿಗಳಲ್ಲಿ ಇದಕ್ಕೆ ಹಾಹಾಕಾರ ಇದೆ. ನಾವು ಹಳ್ಳಿಗೆ ಹೋದಾಗ ಬಡವರು ನಮ್ಮ ಹತ್ತಿರ ಬಂದು ನಮಗೆ ಕಾರ್ಡ್‌ನಲ್ಲಿ 4–8 ಕೆ.ಜಿ.ಸಿಗುತ್ತದೆಯೆ? ಏಕೆಂದರೆ, ನಮಗೆ ಬಹಳ ಕಷ್ಟವಿದೆ ಎಂದು ಎಲ್ಲಾ ಕಡೆ ದೂರುಗಳು ಇವೆ. ಮತ್ತೆ ಇನ್ನೂ ಅನೇಕ ಜನರಿಗೆ ಬಿ.ಪಿ.ಎಲ್. ಕಾರ್ಡ್ ಸಿಕ್ಕಿಲ್ಲ. ಅನರ್ಹರಿದ್ದರೆ ಅಂಥವರನ್ನು ತೆಗೆದು ಹಾಕಿ. ಆದರೆ. those who are eligible who were left out, ಅಂಥವರಿಗೆ ಕೊಡತಕ್ಕಂಥ ಕೆಲಸ ಆಗಬೇಕು. ಇದನ್ನು ಯಾವ ರೀತಿ ಮಾಡುತ್ತೀರೋ ನನಗೆ ಗೊತ್ತಿಲ್ಲ. ಮತ್ತೆ ಅವರ ಆದಾಯ ಮಿತಿ 11,800 ರೂಪಾಯಿ ಇರತಕ್ಕಂಥದ್ದನ್ನು ಜಾಸ್ತಿ ಮಾಡಬೇಕೆಂದು ನೀವೇ ಅನೇಕ ಸಲ ಭಾಷಣ ಮಾಡಿದ್ದೀರಿ. ಆದ್ದರಿಂದ, ಆದಾಯ ಮಿತಿ 30,000 ರೂಪಾಯಿಗಳಿಗೆ ದಯವಿಟ್ಟು ಮಾಡಿ. 11,800

ರೂಪಾಯಿಗಳ ಆದಾಯ ಮಿತಿಯನ್ನು ಹಿಂದೆ ಓಬಿರಾಯನ ಕಾಲದಲ್ಲಿ ಮಾಡಿರತಕ್ಕಂಥದ್ದು. ಆದ್ದರಿಂದ, ಇದನ್ನು 30,000 ರೂಪಾಯಿಗೆ ಏರಿಸತಕ್ಕಂಥ ಕೆಲಸವನ್ನು ಮಾಡಿ. ಇದರಿಂದ ಬಡವರಿಗೆ ಅನುಕೂಲವಾಗುತ್ತದೆ. ಈ ಎಲ್ಲಾ ವಿಷಯವನ್ನು ನಾನು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದ್ದೇನೆ. ಆದರೆ, ಇದ್ಯಾವುದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ ಹೇಳಿಲ್ಲ. ಆದ್ದರಿಂದ, ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲೆಂದು ಆಶಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಶಿರಾ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ರಾಜ್ಯದ ಉದ್ದಗಲಕ್ಕೂ ಕೂಡ ಅತ್ಯುತ್ತಮವಾಗಿ ಮಳೆ ಬಂದಂಥ ಹಿನ್ನೆಲೆಯಲ್ಲಿ ಬಿತ್ತನೆ ಕಾರ್ಯ ಎಲ್ಲಾ ಕಡೆ ಅತ್ಯಂತ ಜರೂರಾಗಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ರಸಗೊಬ್ಬರದ ಕೊರತೆಯನ್ನು ನೀಗಿಸಬೇಕಾಗುತ್ತದೆ. ರಾಜ್ಯದಲ್ಲಿ ಹರಳು ಗೊಬ್ಬರ ಅಥವಾ ಗ್ರ್ಯಾನುಲೇಷನ್ ಏನು ಉತ್ಪಾದನೆ ಆಗುತ್ತಿತ್ತೋ ಅದು ಈಗ ಸ್ಥಗಿತವಾಗಿದೆ. ಸುಮಾರು 3 ರಿಂದ 4 ಲಕ್ಷ ಟನ್ ಗೊಬ್ಬರ ಈ ಮೂಲದಿಂದ ಬರುತ್ತಿತ್ತು. ಆದ್ದರಿಂದ, ಸ್ಥಗಿತವಾಗಿರತಕ್ಕಂಥದ್ದನ್ನು ಮತ್ತೆ ಏನಾದರೂ ರಿಲ್ಯಾಕ್ಸ್ ಮಾಡಿ ರಾಜ್ಯದಲ್ಲಿಯೇ ರೈತರಿಗೆ ಸಿಗತಕ್ಕಂಥ ವ್ಯವಸ್ಥೆಯನ್ನು ನೀವು ಮಾಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆಶ್ರಯ ಯೋಜನೆ ಬಗ್ಗೆ ತಾವು ಈಗಾಗಲೆ ಬಜೆಟ್ ಭಾಷಣದಲ್ಲಿ ಮಾತನಾಡಿದ್ದೀರಿ. ಒಂದೊಂದು ತಾಲ್ಲೂಕಿನಲ್ಲಿ ಸುಮಾರು 10 ರಿಂದ 15 ಸಾವಿರ ಜನ ಇವತ್ತಿನ ದಿವಸ ನಿವೇಶನ ರಹಿತರಾಗಿದ್ದಾರೆ. ಸರ್ಕಾರಿ ಭೂಮಿಯಲ್ಲಿ ನಿವೇಶನ ಮಾಡುವುದಕ್ಕೆ ಇವತ್ತಿನ ದಿವಸ ಅವಕಾಶ ಇಲ್ಲ. ಆದ್ದರಿಂದ, ಅವರಿಗೆ ನಿವೇಶನಗಳನ್ನು ಮಾಡಬೇಕಾದಾಗ ನೀವು ಎಲ್ಲೋ ಒಂದು ಕಡೆ ಭೂಮಿಯನ್ನು ಅಕ್ವೈರ್ ಮಾಡತಕ್ಕಂಥ ಪದ್ಧತಿಯನ್ನು ಅನುಸರಿಸ ಬೇಕಾಗುತ್ತದೆ. ಆಗ ಇದನ್ನು ಎನ್‌ಫೋರ್ಸ್ ಮಾಡಬೇಕಾದಾಗ ತಾಲ್ಲೂಕು ಲೆವೆಲ್‌ನಲ್ಲಿ ಆಶ್ರಯ ಯೋಜನೆಗೆ ಟಾಸ್ಕ್ ಫೋರ್ಸ್ ಕಮಿಟಿ ಮಾಡಿ ನಿವೇಶನ ರಹಿತರಿಗೆ ನಿವೇಶನ ಕೊಡುವುದಕ್ಕೆ ಚಾಲನೆ ಕೊಡುತ್ತೀರಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಮತ್ತೊಂದು ವಿಷಯ, ಮುಖ್ಯವಾಗಿ ನೀರಾವರಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನೀವು ಮಧ್ಯಮ ಕರ್ನಾಟಕವಾಗಿರತಕ್ಕಂಥದ್ದಕ್ಕೆ ತಮ್ಮ ಮೂರು ವರ್ಷದ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದೀರಿ. ಮಧ್ಯಮ ಕರ್ನಾಟಕವಾಗಿರತಕ್ಕಂಥದ್ದು, ಕುಡಿಯುವ ನೀರಿನ ಯೋಜನೆಗೆ ಸಹಾಯವನ್ನು ಮಾಡುವುದಕ್ಕೋಸ್ಕರ ಆ ಯೋಜನೆಯನ್ನು ಮಂಜೂರು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಆದರೆ ಅದರ ಹೆಸರಿನಲ್ಲಿ ಭದ್ರಾ modernization ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕೆ ನೀವು ಯಾವ

ರೀತಿಯಾದ ಹಣಕಾಸು ಸಹಾಯವನ್ನು ಮೀಸಲಾತಿ ಇಟ್ಟಿಲ್ಲ. ಎಲ್ಲದಕ್ಕಿಂತಲೂ ಹೆಚ್ಚಾಗಿ ನೀವು ಹಣವನ್ನು ಭದ್ರಾ ಮೇಲ್ದಂಡೆ ಯೋಜನೆಗೆ ಇಡುತ್ತೀರಾ ಎನ್ನತಕ್ಕಂಥದ್ದು ಒಂದು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಇವತ್ತು ನಮಗೆ ನೀರಿನ ಅಲೋಕೇಶನ್ ಇರತಕ್ಕಂಥದ್ದರಲ್ಲಿ ನೀವು 600 TMC ನೀರನ್ನು ಮಾತ್ರ ಬಳಕೆ ಮಾಡಿದ್ದೀರಿ. ಇನ್ನು 124 TMC ನೀರನ್ನು ಬಳಕೆ ಮಾಡುವುದಕ್ಕಾಗಿಲ್ಲ. ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೆ, ಒಂದು ನಿಮಿಷ ನೀವು ತಾಳಿ, demands ಮೇಲೆ ನನಗೆ ಮಾತನಾಡುವುದಕ್ಕಾಗಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ, ಅನುದಾನದ ಬಗ್ಗೆ ಹೇಳಲಿ.

(ಗೊಂದಲ)

ಅಧ್ಯಕ್ಷರು: ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ ನಾನು ಕೇಳುತ್ತೇನೆ ಬಿಡಿ.

ಶ್ರೀ ಟಿ.ಬಿ.ಜಯಚಂದ್ರ: ನೀವು ಇಟ್ಟಿರತಕ್ಕಂಥ ಹಣಕಾಸು ಕೂಡ ಕಡಿಮೆ ಇದೆ. ಇವತ್ತು ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ವಿಶೇಷವಾಗಿ ಹಣವನ್ನು ಇಡತಕ್ಕಂಥ ಕೆಲಸವನ್ನು ಮಾಡುತ್ತೀರಾ? ಮತ್ತೊಂದು ಬಹಳ ಮುಖ್ಯವಾಗಿ ನಮ್ಮ ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ ನೀವು ಈಗಾಗಲೇ ಸಾರಾಯಿಯನ್ನು ತೆಗೆದಿದ್ದರಿಂದಾಗಿ ಏನು displace ಆಗಿರತಕ್ಕಂಥವರು ಇದ್ದಾರೆ, ಇಡೀ ರಾಜ್ಯದ ಉದ್ದಗಲಕ್ಕೂ ಹುಡುಕಾಡಿದರೂ 10 ರಿಂದ 12 ಸಾವಿರ ಜನ ಸಿಗಬಹುದು, ಅವರಿಗೆ 4% ಬಡ್ಡಿಯಂತೆ ನೀವು ದೇವರಾಜ್ ಅರಸ್ ಅಭಿವೃದ್ಧಿ ನಿಗಮದ ಮುಖೇನ ಸಾಲವನ್ನು ಕೊಟ್ಟು ಅವರಿಗೆ rehabilitate ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಅದು ಒಳ್ಳೆಯ package ಆಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು: ಸ್ಪಷ್ಟೀಕರಣವನ್ನು ಮಾತ್ರ ಕೇಳಬೇಕು. ಮಾನ್ಯ ಬಾಲಕೃಷ್ಣರವರೆ, ನೀವು ಬಜೆಟ್ ಮೇಲೆ ಮಾತನಾಡಿದ್ದೀರಿ ಈಗ ಸಾಕು. ಬಜೆಟ್ ಮೇಲೆ ಮಾತನಾಡದಿರುವವರು ಇನ್ನು ಬಹಳ ಜನ ಇದ್ದಾರೆ. ಆಯಿತು ಸ್ವಲ್ಪ wait ಮಾಡಿ ಈಗ ಸಾಕು. please ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮುಂದೆ ಕುಳಿತಿರುವವರಿಗೆ ಯಾವಾಗಲೂ ಮಾತನಾಡಲು ಕೊಟ್ಟರೆ ನಾವು ಏನು ಮಾಡುವುದು?

ಅಧ್ಯಕ್ಷರು: ಈಗಾಗಲೇ ಬಜೆಟ್ ಮೇಲೆ discussion ಆಗಿದೆ. ಈಗ only ಸ್ಪಷ್ಟೀಕರಣ ಏನಾದರೂ ಕೇಳುವುದು ಇದ್ದರೆ ಮಾತ್ರ. ಮತ್ತೆ ಭಾಷಣ ಏನು ಇಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಭಾಷಣ ಏನೂ ಇಲ್ಲ, ಒಂದೆರಡು ನಿಮಿಷ ಸ್ಪಷ್ಟೀಕರಣ ಅಷ್ಟೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಗೆ ಈ ವರ್ಷ 3400 ಕೋಟಿ ರೂ.ಗಳ ಹಣವನ್ನು ಇಟ್ಟಿದ್ದಾರೆ. ಅದರಲ್ಲಿ 650 ಕೋಟಿ ರೂ.ಗಳ ಬಿಲ್ ಪೆಂಡಿಂಗ್ ಇದೆ. 13% ನಲ್ಲಿ ಈ ವರ್ಷ ಬರೀ 9% ಹಣವನ್ನು ನೀರಾವರಿಗೆ ಇಟ್ಟಂತಾಗುತ್ತದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವರು 650 ಕೋಟಿ ರೂ.ಗಳ ಬಿಲ್ ಪೆಂಡಿಂಗ್ ಏನಾದರೂ ಬಿಟ್ಟು ಇವರು 3400 ಕೋಟಿ ರೂ.ಗಳ ಹಣ ಇದರಲ್ಲಿ ಇದೆಯೋ ಅಥವಾ ಆ ಪೆಂಡಿಂಗ್ ಹಣ ಸೇರಿದೆಯಾ ಎಂದು ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದು ಅಲ್ಲದೇ 125 ಕೋಟಿ ರೂ.ಗಳನ್ನು ತಾವು ಗೊಬ್ಬರಕ್ಕೆ SBM ನಿಂದ ಸಾಲವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೀರಿ. ಆ ಸಾಲವನ್ನು ತೆಗೆದುಕೊಳ್ಳಬೇಕಾದರೆ ಇನ್ನೂ ಮೂರು ತಿಂಗಳು ಬೇಕಾಗುತ್ತದೆ. ಇನ್ನು ಮೂರು ತಿಂಗಳಲ್ಲಿ ನಮ್ಮ ರೈತರ ಪರಿಸ್ಥಿತಿ ಏನಾಗುತ್ತದೆ? ಮಾನ್ಯ ಮಂತ್ರಿಗಳಾದವರೂ ಸ್ವಲ್ಪ ಡೀಸೆಂಟಾಗಿ ಇರಬೇಕು. ನಾವು ಕ್ಲಾರಿಫಿಕೇಶನ್ ಕೇಳುವಾಗ ನೀವೇಕೆ ಮಧ್ಯದಲ್ಲಿ ಬರುತ್ತೀರಿ?

ಅಧ್ಯಕ್ಷರು: ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ಮಾನ್ಯ ರೇವಣ್ಣನವರೆ, ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ನಾವು ಹೇಳುವುದನ್ನು ನೀವು ಪಟ್ಟಿ ಮಾಡಿದಿರಿ. ಮಾನ್ಯ ಮುಖ್ಯಮಂತ್ರಿಗಳು ಎರಡನೇ ಬಜೆಟ್ ಪಟ್ಟಿಯನ್ನು ಓದುವಂತೆ ಓದಿದರು. ಮಾನ್ಯ ಸಚಿವರು ನಾವು ಮಾತನಾಡುವಾಗ ಸುಮ್ಮನೆ ಕುಳಿತುಕೊಳ್ಳಬೇಕು.

ಅಧ್ಯಕ್ಷರು: ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ ಮಧ್ಯದಲ್ಲಿ ತಾವು intervene ಮಾಡುವುದಕ್ಕೆ ಹೋಗಬೇಡಿ. I will control it. ನೀವು ಈ ರೀತಿ ಮಧ್ಯದಲ್ಲಿ ಪದೇ ಪದೇ ಎದ್ದರೆ time waste ಆಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ ಮಾನ್ಯ ಅಧ್ಯಕ್ಷರೆ, ಮಾಜಿ ಹಣಕಾಸು ಸಚಿವರು ಮಾತನಾಡುವಾಗ ಮಧ್ಯದಲ್ಲಿ ಕುಣಿದಾಡುವುದು. ಈಗ ನಾನು ಹೇಳುವುದು ಸ್ವಾಮಿ. 650 ಕೋಟಿ ರೂ.ಗಳ ಏನು ನೀರಾವರಿ ಬಿಲ್ ಪೆಂಡಿಂಗ್ ಇದೆ ಅದು ಸೇರಿಸಿ 3400 ಕೋಟಿ ರೂ.ಗಳಾ? ಬಿಲ್ ಪೆಂಡಿಂಗ್ ಹಣ ಹೋದರೆ 13% ನಲ್ಲಿ ಕೇವಲ 9% ಮಾತ್ರ ಉಳಿದುಕೊಳ್ಳುವುದು. ಮತ್ತೆ ಇನ್ನೂ ಒಂದು 125 ಕೋಟಿ ರೂ.ಗಳನ್ನು SBM ನಿಂದ ಸಾಲ ತೆಗೆದುಕೊಳ್ಳಬೇಕಾದರೆ ಇನ್ನೂ ಮೂರು ತಿಂಗಳು ಬೇಕಾಗುತ್ತದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು 500 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದರು. ಆಮೇಲೆ 250 ಕೋಟಿ ರೂ. ಎಂದು ಹೇಳಿದ್ದಾರೆ. ಇವತ್ತು

supplementary budget ನಲ್ಲಿ 17 ಕೋಟಿ ರೂ.ಗಳನ್ನು ಮಾರ್ಕೆಟಿಂಗ್ ಫೆಡರೇಷನ್ ಕೊಡಲು ತಿಳಿಸಿದ್ದಾರೆ. ಇನ್ನು 15–20 ದಿವಸದಲ್ಲಿ ಗೊಬ್ಬರವನ್ನು ಕೊಡದೇ ಹೋದರೆ ಕಷ್ಟವಾಗುತ್ತದೆ. ಸರ್ ಒಂದು ನಿಮಿಷ. ನಾವು ಮತ್ತು ಮಾನ್ಯ ವಿರೋಧ ಪಕ್ಷದವರೆಲ್ಲರೂ ಕೇಳಿದ್ದೇವೆ, ಅದಕ್ಕೆ ರಿಪ್ಲೈಯನ್ನು ಎರಡನೇ ಬಜೆಟ್ ಕೊಟ್ಟಂತೆ ಕೊಟ್ಟಿದ್ದಾರೆ. ಇವರು ಓದಿರುವುದನ್ನು ಬಿಟ್ಟರೆ ಬೇರೆ ಏನಾದರೂ ಹೊಸ ಕಾರ್ಯಕ್ರಮಗಳು ಇವೆಯೇ? ಈ ಬಜೆಟ್ ಬುಕ್ ಮೊದಲನೆಯದು. ಈಗ ಓದಿರುವುದು ಎರಡನೆಯದು. ಎರಡನೆಯದು ರಿಪ್ಲೈ ಮಾಡಿರುವುದು, ಇಲ್ಲೇ ಇದೆ. ಅದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಪೂರ್ತಿ ಇಲ್ಲಿ ಬರೆದುಕೊಂಡು ಬಂದು ಓದಿದರೆ ಹೇಗೆ? ಯಾರಾದರೂ ವಿರೋಧ ಪಕ್ಷದ ನಾಯಕರು ಮಾತನಾಡಿದ್ದು ಆಗಲಿ, ಅಥವಾ ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದು ಇದರಲ್ಲಿ ಇದೆಯೇ? ಇದರಲ್ಲಿ ಯಾವುದೂ ಇಲ್ಲ. ಎರಡನೆಯದು ಏನು ಮಾಡಿದ್ದಾರೆ, ದೇವಸ್ಥಾನಗಳಿಗೆ ಎರಡು–ಮೂರು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದನ್ನೇ ಯಾವುದಾದರೂ ಒಂದು ಕಾರ್ಯಕ್ರಮ ರೂಪಿಸುವುದಕ್ಕಾಗಿ ಮಾಡುತ್ತಾರಾ? ಅದನ್ನು ದಯಮಾಡಿ ಹೇಳಿ ಸ್ವಾಮಿ.

ಡಾ:ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ): ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಮೇಲೆ ಭಾಷಣವನ್ನು ಮಾಡಬೇಕೆಂದು ಇದ್ದೆ, ಸಮಯ ಆಗದಿರುವುದರಿಂದ ಮಾತನಾಡುವುದಕ್ಕಾಗಲಿಲ್ಲ. ಅದರಲ್ಲಿ ಕೆಲವು ಕ್ಲಾರಿಫಿಕೇಷನ್ ಮಾತ್ರ 7–8 ಪಾಯಿಂಟ್ಸ್ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ರಾಷ್ಟ್ರದ ಭವಿಷತ್ತಿನ ಬಗ್ಗೆ ಹಿಂದಿನ ಚರಿತ್ರೆಯ ಬಗ್ಗೆ ಉಲ್ಲೇಖ ಮಾಡಿ ಮಾತನಾಡುವಾಗ ನಾನು ಆ ಕಡೆ ಈ ಕಡೆ ನೋಡಿದೆ. ಎಲ್ಲಾ ರಾಷ್ಟ್ರೀಯ ನಾಯಕರ ಫೋಟೋವನ್ನು ನೋಡುವಾಗ ನಾನು ಕೊನೆಯಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಫೋಟೋವನ್ನು ನೋಡಿದೆ. ಬ್ರಿಟೀಷರು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವಾಗ ನೀವು 300 ವರ್ಷ ಈ ದೇಶವನ್ನು ಆಳಿದಿರಿ, ಈಗ ನೀವು ಸ್ವಾತಂತ್ರ್ಯವನ್ನು ಕೊಡುತ್ತಿದ್ದೀರಿ ಯಾರ ಕೈಯಲ್ಲಿ ಕೊಟ್ಟು ಹೋಗುತ್ತಿದ್ದೀರಿ? ಯಾರಿಗೆ ಸ್ವಾತಂತ್ರ್ಯರನ್ನಾಗಿ ಮಾಡುತ್ತಿದ್ದೀರಿ ಎಂದು ಹೇಳಿ 3000 ವರ್ಷಗಳ ಇತಿಹಾಸದಿಂದ ದಲಿತರನ್ನು, ಅಲ್ಪಸಂಖ್ಯಾತರನ್ನು, ಹಿಂದುಳಿದ ವರ್ಗದವರನ್ನು ಶೋಷಣೆ ಮಾಡಿ ಉಳಿದಿರತಕ್ಕಂಥ ಜನರಿಗೆ ಕೊಡುತ್ತಿದ್ದೀರಿ ಎನ್ನತಕ್ಕಂಥ ಮಾತು ಅವರ ಬಾಯಿಂದ ಬಂದಾಗ, ಅವರ ಬಜೆಟ್‌ನ್ನು ಕೂಡ ನಾನು ನೋಡಿದೆ. ಮಾನ್ಯ ಮುಖ್ಯಮಂತ್ರಿಗಳು ಇತಿಹಾಸದ ಹಿನ್ನಲೆಯನ್ನು ತಿಳಿದುಕೊಂಡು ಅವರು ಮಾತನಾಡುತ್ತಿದ್ದಾರೆ. ರಿಪ್ಲೈಯನ್ನು ಕೊಡುತ್ತಿದ್ದಾರೆ. ಈ

ವರ್ಗಗಳಿಗೆ ಬದುಕುವುದಕ್ಕೆ ಸಮಾನ ಅವಕಾಶವನ್ನು ಕೊಡುತ್ತಾರೆ, ಅವರ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. Poona pact 32 ನಲ್ಲಿ ಏನೇನು ಒಡಂಬಡಿಕೆಯಾಗಿತ್ತು. ಡಾ:ಬಾಬಾಸಾಹೇಬ ಅಂಬೇಡ್ಕರ್‌ರವರು ಸಹಿ ಮಾಡಿದಂಥ ಕಾಪಿಗಳನ್ನು ನಾನು ತಂದಿದ್ದೆ. ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ನಿಗದಿ ಮಾಡಬೇಕಾಗಿತ್ತು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಮಾಡಿದ್ದೇವೆ. ಅನೇಕ ಶಾಸಕರೆಲ್ಲಾ ಹೇಳಿದ್ದೇವೆ. ದಯಮಾಡಿ 25953 ಕೋಟಿ ರೂ.ಗಳ ಯೋಜನೆಯ ಗಾತ್ರ ಏನಿದೆ, ಆ ಯೋಜನಾ ಗಾತ್ರದಲ್ಲಿ SC:ST ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ನಿಗದಿ ಮಾಡಿ, 1,100 ಕೋಟಿ ರೂ.ಗಳು ಇಲ್ಲ. ಇವರ ಯೋಜನಾ ಗಾತ್ರಕ್ಕೂ ಮತ್ತು ಅವರು ಕೊಟ್ಟಿರತಕ್ಕಂಥ ಹಣಕ್ಕೂ, ನನ್ನದು ಇಷ್ಟೇ ಕ್ಲಾರಿಫಿಕೇಶನ್, ಆ ಯೋಜನಾ ಗಾತ್ರದಲ್ಲಿ 2900 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಇನ್ನೂ 1100 ಕೋಟಿ ರೂ.ಗಳನ್ನು ಕೊಡಬೇಕು. ಅದನ್ನು ಕೊಡಿ, ಯೋಜನೆ ಮಾಡಿ. ಬ್ಯಾಕ್‌ಲಾಗ್ ಹುದ್ದೆಗಳು ಇವೆ, ರಾಜ್ಯಾಂಗವಾಗಿ ಕರ್ತವ್ಯವನ್ನು ನಿರ್ವಹಣೆ ಮಾಡಬೇಕಾಗುತ್ತದೆ. 1998ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದಿದ್ದರೆ ನಾನು ಮಂತ್ರಿಮಂಡಲದಲ್ಲಿ ಇರುವುದಿಲ್ಲವೆಂದು ರಾಜೀನಾಮೆಯನ್ನು ಕೊಟ್ಟು ನಾನು ಇರುವುದಿಲ್ಲವೆಂದು ಅಂದಿನ ಮುಖ್ಯಮಂತ್ರಿಗಳು ಹೇಳಿದರು. ಏಕೆ ಡಾ:ಹೆಚ್.ಸಿ.ಮಹದೇವಪ್ಪ ರಾಜೀನಾಮೆ ಕೊಡಬೇಕು, ಎಲ್ಲರೂ ಕೂಡಿ ಚರ್ಚೆಯನ್ನು ಮಾಡೋಣವೆಂದು ಹೇಳಿದರು. ಆಗ ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿ 20,000 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕೆಂದು ಹೇಳಿ 1998ರಲ್ಲಿ cabinet decision ಆಯಿತು. ಇನ್ನೂ ಅದರಲ್ಲಿ 7–8 ಸಾವಿರ ಹುದ್ದೆಗಳನ್ನು ತುಂಬಬೇಕು, 16–17 ಸಾವಿರ ಹುದ್ದೆಗಳನ್ನು ತುಂಬಿದ್ದಾರೆ. ಅದರ ಬಗ್ಗೆ ಇದರಲ್ಲಿ ಏನನ್ನೂ ಹೇಳಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನವನ್ನು ಹರಿಸಬೇಕು. ಭಾಗ್ಯಜ್ಯೋತಿ ಯೋಜನೆಯಲ್ಲಿ ಬಡವರು ಇದ್ದಾರೆ. ಅದನ್ನು ವಜಾ ಮಾಡಿಕೊಡಬೇಕೆಂದು ಮನವಿಯನ್ನು ಮಾಡಿದ್ದೇವೆ. ಮಾನ್ಯ ವಿದ್ಯುತ್ ಸಚಿವರು ಕೂಡ ಮಾತನಾಡುವಾಗ ಹೇಳಿದ್ದರು. ಅದರ ಬಗ್ಗೆ ಕೂಡ ಸ್ಪಷ್ಟವಾಗಿ ಹೇಳಬೇಕು. ಏಕೆ ವಜಾ ಮಾಡಿ ಎಂದು ಕೇಳುತ್ತಿದ್ದೇವೆಂದರೆ. Loan is the worst form of the poverty. ರೈತರೆಲ್ಲಾ ಸಂಕಷ್ಟಕ್ಕೆ ಸಿಕ್ಕಿದ್ದಾರೆ. ತಾವು ಕ್ರಾಂತಿಯನ್ನು ಮಾಡಬೇಕು, ಎಲ್ಲರಿಗೂ ಮನವಿಯನ್ನು ಮಾಡಿದ್ದಾರೆ. ರೈತ ಮತ್ತು ನೀರು ಎಲ್ಲಾ ರಾಜಕೀಯ ಪಕ್ಷಗಳಿಗೆ ಮತ್ತು ಎಲ್ಲಾ ರಾಜಕೀಯ ಮುಖಂಡರುಗಳಿಗೆ ಚುನಾವಣೆಯ ಅಸ್ತ್ರವಾಗಿದೆ. ನೈಜ ಸ್ಥಿತಿಯಲ್ಲಿ ಅವರು ನೋಡಬೇಕು. ಮಾನ್ಯ ಅಧ್ಯಕ್ಷರೆ ನಾನೇನು ಭಾಷಣವನ್ನು ಮಾಡುತ್ತಿಲ್ಲ.

ದಯಮಾಡಿ ನೀವು ಸ್ಪಷ್ಟವಾಗಿ ಇಲ್ಲಿ ಹೇಳಬೇಕು. ಗೊಬ್ಬರ ಇಲ್ಲ. ಬಿತ್ತನೆ ಬೀಜ ಇಲ್ಲ. ಸರ್ಕಾರ ಅದರ ಜವಾಬ್ದಾರಿಯನ್ನು ಪೂರೈಸಬೇಕಾಗಿತ್ತು. ಅದನ್ನು ಮಾಡಬೇಕು. ಅದಕ್ಕೆ ಏನು ದುಡ್ಡು ಖರ್ಚಾಗುತ್ತದೆ, ಅದು ಸರ್ಕಾರದ ಜವಾಬ್ದಾರಿ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ 2006-07ನೇ ಸಾಲಿನಲ್ಲಿ ಬಜೆಟ್‌ನ್ನು ಮಂಡಿಸಿದಾಗ ನಾನು ಹೇಳಿದ್ದೆ. ದಯಮಾಡಿ SC:ST ಯವರ 162 ಕೋಟಿ ರೂ.ಗಳ ಸಾಲ ಇದೆ, ಅದನ್ನು ಮನ್ನಾ ಮಾಡಿ ಎಂದು ನಾನು ಮನವಿಯನ್ನು ಮಾಡಿದ್ದೆ. ಅದನ್ನು ಕೂಡ ಅವರು ಏನೂ ಮಾಡಲಿಲ್ಲ. ಅವರಿಗೆ ಗ್ರಾಮೀಣಾಭಿವೃದ್ದಿಯ ಬಗ್ಗೆ ವಿಶೇಷವಾದ ಆಸಕ್ತಿ ಇದೆ. ಕೇವಲ 3000 ಸಾವಿರ ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. 68% ಆಡಳಿತ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿದೆ. ಅವರ Principal Secretary ಒಬ್ಬ committed honest officer. ಗ್ರಾಮೀಣಾಭಿವೃದ್ಧಿಯ ಬಗ್ಗೆ ಅವರಿಗೂ ಕೂಡ ಗೊತ್ತಿದೆ. ಈ ಸಂಸ್ಥೆಗಳನ್ನು ಬಲಪಡಿಸುವುದನ್ನು ಮಾಡಬೇಕು. procurement ನಲ್ಲಿ 2005 ನೇ ಇಸವಿಯಲ್ಲಿ SC:ST Backward classes and minoritiesಗೇ 50% reservation ಕೊಡಬೇಕೆಂದು ನಾನು order ಮಾಡಿದ್ದೆ. ಅದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

ಎಲ್ಲಾ ಆರ್ಥಿಕ ವಹಿವಾಟುಗಳಲ್ಲಿ ಎಸ್.ಸಿ.20%, ಹಿಂದುಳಿದ ವರ್ಗಕ್ಕೆ 20% ಮತ್ತು ಎಸ್.ಟಿ.ಗೆ 5% ಮತ್ತು ಮೈನಾರಿಟಿಗೆ ಇಷ್ಟಿಷ್ಟೆಂದು 2005ನೇ ಇಸವಿಯಲ್ಲಿ ಆರ್.ಡಿ.ಪಿ.ಆರ್. ಇಲಾಖೆ ಮೂಲಕ ನಾವೊಂದು ಆದೇಶವನ್ನು ಮಾಡಿದ್ದೆವು. ದಯಮಾಡಿ ಅದನ್ನು ಮಾಡಬೇಕು. ಮತ್ತೆ ಕಬಿನಿ ಜಲಾಶಯದ ಮುಂದುವರಿದ ಕಾಮಗಾರಿಗೆ ಮಾನ್ಯ ಮುಖ್ಯ ಮಂತ್ರಿಗಳು ಏನನ್ನೂ ಸಹ ಹೇಳಿಲ್ಲ. ಟಿ.ನರಸೀಪುರದಲ್ಲಿರುವ ತಲಕಾಡು ಸುಮಾರು 700-800 ವರ್ಷಗಳ ಇತಿಹಾಸ ಹೊಂದಿದ್ದು, ಹಿಂದೆ ಗಂಗ ಅರಸರ ಆಡಳಿತಕ್ಕೆ ಇದು ಒಳಪಟ್ಟಿತ್ತು. ಆದ್ದರಿಂದ, ಇದನ್ನು ಟೂರಿಸಂ ಡೆವಲಪ್‌ಮೆಂಟ್‌ನಲ್ಲಿ ಸೇರಿಸಿ ಅಭಿವೃದ್ಧಿ ಮಾಡಿ. ಮತ್ತೆ ಎಲ್ಲಾ ಹಳೆಯ ಕಾಲುವೆಗಳನ್ನು ಆಧುನೀಕರಣಗೊಳಿಸಬೇಕಾಗಿದೆ. ಇವತ್ತಿನ ದಿವಸ ರಾಜ್ಯ ರಾಜ್ಯಗಳ ನಡುವೆ ವಿವಾದ ಇದೆ. ಆದ್ದರಿಂದ, ಕಾಲುವೆಗಳನ್ನು ಆಧುನೀಕರಣಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಮತ್ತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಕಂದಾಯ ಇಲಾಖೆಯಲ್ಲಿ Fragmentation Act ಆದ ಮೇಲೆ ರೈತ ಎಲ್ಲಿ ಜಮೀನು ಇಟ್ಟುಕೊಂಡಿದ್ದಾನೆ? ರಾಜಕಾರಣಿಗಳು ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು:- ಇದರ ಬಗ್ಗೆ ಇನ್ನೊಂದು ದಿನ ಮಾತನಾಡಿ. ಈಗ ಬಜೆಟ್ ಮೇಲೆ ಸ್ಪಷ್ಟೀಕರಣ ಮಾತ್ರ ಕೇಳಿ.

ಡಾ:ಹೆಚ್.ಸಿ.ಮಹದೇವಪ್ಪ:- ಅಧಿಕಾರದಲ್ಲಿರತಕ್ಕಂಥವರು ಮತ್ತು ಮಠಾಧೀಶರು, ಬಿಸಿನೆಸ್‌ಮೆನ್ ಇದ್ದಾರೆ. ನಾನು ಮನವಿ ಮಾಡುವುದೇನೆಂದರೆ, ತೆಗೆದು ಹಾಕಿರುವ Fragmentation Act ನ್ನು ಪ್ಲಗ್ ಮಾಡಿ ಇಲ್ಲದಿದ್ದರೆ ನೀವು ಭೂಮಿಯನ್ನು ಉಳಿಸುವುದಕ್ಕೆ ಆಗುವುದಿಲ್ಲ. ದಯಮಾಡಿ ಇದನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಐದಾರು ಸಾವಿರ ರೂಪಾಯಿಯನ್ನು ಕೊಡುತ್ತಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಮೂರು ಸಾವಿರ ಮಾತ್ರ ಕೊಡುತ್ತಿದ್ದಾರೆ. ಅದನ್ನು ದಯಮಾಡಿ ನಾಲ್ಕು ಸಾವಿರ ರೂಪಾಯಿಗೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಇನ್ನೂ ಅನೇಕ ವಿಷಯಗಳ ಬಗ್ಗೆ ಮಾತನಾಡಬೇಕಾಗಿತ್ತು. ತಾವು ಅವಕಾಶ ಕೊಟ್ಟಿದ್ದೀರಿ. ಆದರೆ, ಮಾತನಾಡುವುದಕ್ಕೆ ಆಗಲಿಲ್ಲ. ದಯಮಾಡಿ ನಾನು ಹೇಳಿರತಕ್ಕಂಥ ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸೀರಿಯಸ್ ಆಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ದೇವರಲ್ಲಿ ಪ್ರಾರ್ಥನೆ ಮಾಡಿ ಇನ್ನೊಂದು ವಾರದಲ್ಲಿ ಎಲ್ಲಾ ಡ್ಯಾಂಗಳೂ ತುಂಬುತ್ತವೆಂದು ಹೇಳಿದ್ದಾರೆ. ಇದರಲ್ಲಿ ನನ್ನ ಪ್ರಶ್ನೆ ಏನೆಂದರೆ, ನಾನು ಯಾವಾಗ ಸಾಯುತ್ತೇನೆಂದು ದೇವರಲ್ಲಿ ಕೇಳಿ ಮಾನ್ಯ ಮುಖ್ಯಮಂತ್ರಿಗಳು ನನಗೆ ತಿಳಿಸಬೇಕು.

ಶ್ರೀ ಆರ್.ದಿನೇಶ್ ಗುಂಡೂರಾವ್(ಗಾಂಧಿನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಸ್ಪೀಚ್‌ನಲ್ಲಿ ಅಥವಾ ಇವತ್ತು ಅವರು ನೀಡಿರುವ ಉತ್ತರದಲ್ಲಿಯಾಗಲಿ ಕೊಡಗು ಜಿಲ್ಲೆಯ ಬಗ್ಗೆ ಯಾವುದೇ ರೀತಿಯ ಮಾಹಿತಿ ಅಥವಾ ಒಳ್ಳೆಯ ವಿಚಾರವನ್ನು ಹೇಳಿಲ್ಲ. ಒಂದು ದುಃಖಕರವಾದ ವಿಚಾರವೆಂದರೆ, ಸಚಿವ ಸಂಪುಟದಲ್ಲಿ ಒಬ್ಬ ಮಂತ್ರಿ ಕೂಡ ಇಲ್ಲ. ಪ್ರತ್ಯೇಕ ಜಿಲ್ಲೆಯ ಒಂದು ಕೂಗು ಕೂಡ ಇದೆ. ಈಗ ಆ ಭಾಗದವರನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದೀರಿ. ಆದ್ದರಿಂದ ಯಾರೂ ತೃಪ್ತಿಯಾಗುವುದಿಲ್ಲ. ನಂಜುಂಡಪ್ಪ ವರದಿ ಪ್ರಕಾರ ಕೊಡಗು ಜಿಲ್ಲೆಗೆ ಪ್ರತಿ ವರ್ಷ 100 ಕೋಟಿ ರೂಪಾಯಿಗಳಾದರು ಕೊಡಬೇಕು. ಅಲ್ಲಿ ಹೆಚ್ಚು ಮಳೆಯಾಗುವುದರಿಂದ ಅಲ್ಲಿ ರಸ್ತೆಗಳು ಹಾಳಾಗುತ್ತಿವೆ.

ಅಧ್ಯಕ್ಷರು:- ಮಾನ್ಯ ದಿನೇಶ್ ಗುಂಡೂರಾವ್‌ರವರೆ, ಮತ್ತೆ ಜಿಲ್ಲಾವಾರು ಹೇಳುತ್ತಾ ಹೋದರೆ ಅದಕ್ಕೆ ಏನು ಅರ್ಥವೇ ಇಲ್ಲ. ಇದರಿಂದ ಮತ್ತೆ ಭಾಷಣ ಪ್ರಾರಂಭವಾಗುತ್ತದೆ.

ಶ್ರೀ ಆರ್.ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ಎರಡು ನಿಮಿಷದಲ್ಲಿ ನಾನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ದಿನೇಶ್ ಗುಂಡೂರಾವ್‌ರವರೆ, ಆ ಜಿಲ್ಲೆಗೆ ಮತ್ತು ಈ ಕ್ಷೇತ್ರಕ್ಕೆ ಇಷ್ಟು ಕೊಡಬೇಕೆಂದು ಮತ್ತೆ ಡಿಮಾಂಡ್ ಮಾಡುವುದಾದರೆ ಹೇಗೆ?

ಶ್ರೀ ಆರ್.ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ಹಾರಂಗಿ ಡ್ಯಾಂ ತುಂಬಿದಾಗ ನಾವು ಕೊಡಗು ಜಿಲ್ಲೆ ಬಗ್ಗೆ ಮಾತ್ರ ಮಾತನಾಡುತ್ತೇವೆ. ಹಾರಂಗಿ ಡ್ಯಾಂ ತುಂಬಿದ ಮೇಲೆ ಮತ್ತೆ ನಾವು ಮರೆತು ಹೋಗುತ್ತೇವೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಅಲ್ಲಿರತಕ್ಕಂಥ ರಸ್ತೆಗಳನ್ನು ದುರಸ್ತಿ ಮಾಡಿಸಬೇಕಾಗುತ್ತದೆ. ಅಲ್ಲಿ ಆನೆ ಹಾವಳಿ ಇದೆ. ಇದರ ಬಗ್ಗೆ ಕೂಡ ತಾವು ದಯವಿಟ್ಟು ತಾವು ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆಲ್ಲಾ ತಾವು ಹಣ ಕೊಡಬೇಕಾಗುತ್ತದೆ. ಮತ್ತೆ ಬೆಂಗಳೂರು ನಗರ ವಿಚಾರದ ಬಗ್ಗೆ ಹೇಳುವುದಾದರೆ, ಇಲ್ಲಿರತಕ್ಕಂಥ ಪ್ರಾಪರ್ಟಿ ಟ್ಯಾಕ್ಸ್‌ನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಮತ್ತೆ ಈ ಪ್ರಾಪರ್ಟಿ ಟ್ಯಾಕ್ಸ್‌ನ್ನು ಯಾವ ರೀತಿಯಾಗಿ ಕಟ್ಟಬೇಕೆಂಬುದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಆಗಬೇಕಾಗಿದೆ.

ಅಧ್ಯಕ್ಷರು:- ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡೋಣ.

ಶ್ರೀ ಆರ್.ದಿನೇಶ್ ಗುಂಡೂರಾವ್:- ಇದರಿಂದ ಹೆಚ್ಚು ಆದಾಯ ಬರುತ್ತದೆ. ಈಗ ನಮ್ಮ ನಗರ ಪಾಲಿಕೆಗೆ ನೂರಾರು ಕೋಟಿ ರೂಪಾಯಿ ಬರುತ್ತಿಲ್ಲ. ಮತ್ತೆ ವಯೋಮಿತಿ ವಿಚಾರದ ಬಗ್ಗೆ ಹೇಳುವುದಾದರೆ, ಈಗ ವಯೋಮಿತಿಯನ್ನು 58 ರಿಂದ 60 ಮಾಡಿದ್ದಾರೆ. ಇದು ಸರಿಯಾದ ಒಂದು ನಿರ್ಣಯವಲ್ಲ. ಮತ್ತೆ 1000 ರೂಪಾಯಿ ನಿರುದ್ಯೋಗಿ ಭತ್ಯೆಯನ್ನು ಸಹ ಕೊಡುತ್ತಿಲ್ಲ.

ಅಧ್ಯಕ್ಷರು:- ನೀವು ಬಜೆಟ್ ಭಾಷಣ ಪ್ರಾರಂಭ ಮಾಡುತ್ತಿದ್ದೀರಿ. ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳಿ? ಈಗಾಗಲೇ ಅವರು ಇದಕ್ಕೆಲ್ಲಾ ಉತ್ತರ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಕೇಳಿದರೆ ಹೇಗೆ?

ಶ್ರೀ ಆರ್.ದಿನೇಶ್ ಗುಂಡೂರಾವ್:- ವಯೋಮಿತಿಯನ್ನು ಹೆಚ್ಚು ಮಾಡಿರತಕ್ಕಂಥದ್ದು ನಿಜವಾಗಿಯೂ ನಿರುದ್ಯೋಗಿಗಳಿಗೆ ಮಾಡಿರುವ ದ್ರೋಹ. ಇವತ್ತಿನ ದಿವಸ ನಮ್ಮ ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಈಗಾಗಲೇ ನೀವು ಕೇಳಿರತಕ್ಕಂಥದ್ದಕ್ಕೆ ಅವರು ಸ್ಪಷ್ಟೀಕರಣ ಮಾಡಿದ್ದಾರೆ. ಮತ್ತೆ ಅದರ ಬಗ್ಗೆ ಚರ್ಚೆ ಮಾಡುವುದಾದರೆ ಹೇಗೆ? ಕೇವಲ ಸ್ಪಷ್ಟೀಕರಣ ಮಾತ್ರ ಕೇಳಿ. ಆದರೆ, ನೀವು ಮತ್ತೆ ಭಾಷಣ ಪ್ರಾರಂಭ ಮಾಡಿದರೆ

ಅದಕ್ಕೆ ಏನು ಅರ್ಥ ಇದೆ? ಮಾನ್ಯ ದಿನೇಶ್ ಗುಂಡೂರಾವ್‌ರವರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಆರ್.ದಿನೇಶ್ ಗುಂಡೂರಾವ್:- ಮಾನ್ಯ ಮುಖ್ಯ ಮಂತ್ರಿಗಳು ದಯಮಾಡಿ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಮುನಿಯಪ್ಪನವರೆ, ಕೇವಲ ಸ್ಪಷ್ಟೀಕರಣ ಮಾತ್ರ ಕೇಳಿ.

ಶ್ರೀ ವಿ.ಮುನಿಯಪ್ಪ(ಶಿಡ್ಲಘಟ್ಟ):- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ನೀರಾವರಿ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸ್ಪಷ್ಟೀಕರಣ ಕೇಳುವುದಕ್ಕೆ ಬಯಸುತ್ತೇನೆ. ಪಶ್ಚಿಮಘಟ್ಟ ಪ್ರದೇಶದಲ್ಲಿ ವ್ಯರ್ಥವಾಗಿ ಹರಿಯುತ್ತಿರುವ ನೀರನ್ನು ತಿರುವು ಮಾಡಿ ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರು ಕೊಡಬೇಕೆಂದು ಡಾ:ಪರಮಶಿವಯ್ಯನವರು ಒಂದು ವರದಿ ಕೊಟ್ಟಿದ್ದಾರೆ. ಈ ವರದಿಯನ್ನು ಆಧರಿಸಿ ದೊಡ್ಡ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಸುಮಾರು 10 ಸಾವಿರ ರೈತರು ಮತ್ತು ಜನ ಪ್ರತಿನಿಧಿಗಳು ಬಂದು ಸರ್ಕಾರದ ಮೇಲೆ ಒತ್ತಾಯ ತಂದರು. ಇದರ ಬಗ್ಗೆ ಒತ್ತಾಯ ತಂದ ಮೇಲೆ ಹಿಂದಿನ ಸರ್ಕಾರ ಆ ವರದಿ ಆಧರಿಸಿ ಸ್ಯಾಟಲೈಟ್ ಸರ್ವೆ ಮಾಡಬೇಕೆಂದು ಹಣ ಕಟ್ಟಿದ್ದಾರೆ.

ಅಧ್ಯಕ್ಷರು:- ಮಾನ್ಯ ಮುನಿಯಪ್ಪನವರೆ, ತಾವು ಬಜೆಟ್ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಸ್ಪಷ್ಟೀಕರಣ ಕೇಳಿ?

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಬಜೆಟ್ ಮೇಲೆ ಮಾತನಾಡುವಾಗ ಈ ವಿಷಯದ ಬಗ್ಗೆ ಸರ್ಕಾರದಲ್ಲಿ ಒತ್ತಾಯ ಮಾಡಿದ್ದೇನೆ. ಇದರ ಬಗ್ಗೆ ಅವರಿಂದ ಉತ್ತರ ಬರಲಿಲ್ಲ. ನೇತ್ರಾವತಿ ನದಿ ನೀರು ವ್ಯರ್ಥವಾಗಿ ಪಶ್ಚಿಮಘಟ್ಟದ ಮುಖಾಂತರ ಸಮುದ್ರಕ್ಕೆ ಹೋಗುತ್ತಿದೆ.

ಶ್ರೀ ಕೆ.ಅಭಯಚಂದ್ರ:- ಮಾನ್ಯ ಅಧ್ಯಕ್ಷರೆ, ನೇತ್ರಾವತಿ ನದಿಯ ನೀರನ್ನು ತಿರುವು ಮಾಡುವುದಕ್ಕೆ ನಾವು ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ನಿಮ್ಮಲ್ಲಿಯೇ ಡಿಸ್‌ಪ್ಯೂಟ್ ಇದೆ.

ಶ್ರೀ ವಿ.ಮುನಿಯಪ್ಪ:- ನಾವು ಕುಡಿಯುವ ನೀರಿಗೋಸ್ಕರ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮುಂದಿನ ದಿನಗಳಲ್ಲಿ ಬೆಂಗಳೂರು ಉಳಿಯಬೇಕಾದರೆ ಈ ಕೆಲಸ ಆಗಲೇ ಬೇಕಾಗುತ್ತದೆ.

(ಗೊಂದಲ)

ಶ್ರೀ ವಿ.ಮುನಿಯಪ್ಪ:- ನಮ್ಮಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಆದ್ದರಿಂದ, ಇದರ ಬಗ್ಗೆ ಸಮೀಕ್ಷೆ ಆಗಬೇಕು.

ಅಧ್ಯಕ್ಷರು:- ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಈಗ ನಿಮ್ಮ ಶಾಸಕರಲ್ಲಿಯೇ ಭಿನ್ನಾಭಿಪ್ರಾಯ ಇದೆ. ಆದ್ದರಿಂದ, ಇನ್ನೊಂದು ಸಾರಿ ಚರ್ಚೆ ಮಾಡೋಣ. ಈಗ ಇದರ ಬಗ್ಗೆ ಚರ್ಚೆ ಬೇಡ. ಮಾನ್ಯ ಮುನಿಯಪ್ಪನವರೆ, ಅದರ ಬಗ್ಗೆ ನಿಮ್ಮ ನಿಮ್ಮಲ್ಲಿಯೆ ಡಿಸ್‌ಪ್ಯೂಟ್ ಇದೆ. ಆದ್ದರಿಂದ, ಅದರ ಬಗ್ಗೆ ಚರ್ಚೆ ಮಡುವುದು ಬೇಡ. ಮತ್ತೊಂದು ಸಲ ಚರ್ಚೆಗೆ ನಾನು ಅವಕಾಶ ಕೊಡುತ್ತೇನೆ. ಮಾನ್ಯ ಮುನಿಯಪ್ಪನವರೆ ದಯವಿಟ್ಟು ಕುಳಿತುಕೊಳ್ಳಿ. ಅದರ ಬಗ್ಗೆ ಚರ್ಚೆ ಸಾಕು. ಕೊನೆಯದಾಗಿ ಏನು ಹೇಳಿ ಸಾಕು.

(ಗೊಂದಲ)

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಸಮೀಕ್ಷೆಗೆ ಕೇವಲ 15 ರಿಂದ 20 ಕೋಟಿ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ, ಮೊದಲು ಸಮೀಕ್ಷೆ ಆಗಲಿ.

(ಗೊಂದಲ)

ಅಧ್ಯಕ್ಷರು:- ಬಜೆಟ್ ಪಾಸ್ ಆದ ಮೇಲೆ ವಿಧಾನ ಪರಿಷತ್ತಿಗೆ ಹೋಗಬೇಕು. ಆದ್ದರಿಂದ, ಪದೇ ಪದೇ ಎಲ್ಲರೂ ಅದೇ ವಿಷಯವನ್ನು ಪ್ರಸ್ತಾಪ ಮಾಡಿದರೆ ಅರ್ಥ ಇಲ್ಲ. ಮಾನ್ಯ ಮುನಿಯಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ಮಾತನಾಡುವುದು ಸಾಕು ಬಿಡಿ. ನೀವು ನೀವು ವಾದ ಮಾಡುವುದು ಬೇಕಾಗಿಲ್ಲ. ನಾಳೆ ದಿವಸ ಇದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡಿ.

ಶ್ರೀ ವಿ.ಮುನಿಯಪ್ಪ:- ಸರ್ವೆ ಕೆಲಸ ಮೊದಲು ಮಾಡಲಿ. ಆನಂತರ ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಬಹುದಾಗಿದೆ.

(ಗೊಂದಲ)

ಅಧ್ಯಕ್ಷರು:- ನೀವುಗಳು ಏಕೆ ಇದರ ಬಗ್ಗೆ ವಾದ ಮಾಡುತ್ತೀರಿ. ಇದರ ಬಗ್ಗೆ ಸರ್ಕಾರದವರು ಏನಾದರು ತೀರ್ಮಾನ ತೆಗೆದುಕೊಂಡಿದ್ದಾರೆಯೇ? ಅವರ ಜೊತೆ ನೀವೇಕೆ ವಾದ. ಮಾಡುತ್ತೀರಿ? ಮಾನ್ಯ ಮುನಿಯಪ್ಪನವರೆ ಇದರ ಬಗ್ಗೆ ಚರ್ಚೆ ನಿಲ್ಲಿಸಿ.

(ಗೊಂದಲ)

ಶ್ರೀ ವಿ.ಮುನಿಯಪ್ಪ:- ಮೊದಲು ಸರ್ವೆ ಕೆಲಸ ಪ್ರಾರಂಭವಾಗಲಿ. ಇದರ ವರದಿ ಬಂದ ನಂತರ ಇಲ್ಲಿ ಮತ್ತೆ ಚರ್ಚೆ ಮಾಡೋಣ.

ಶ್ರೀ ಬಿ.ರಮಾನಾಥ ರೈ:- ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿಲ್ಲ. ಮತ್ತೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವೇಕೆ ಅವಕಾಶ ಕೊಡುತ್ತಿಲ್ಲ. ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಕೇವಲ ಸ್ಪಷ್ಟೀಕರಣ ಕೇಳಿ. ಇಷ್ಟೆಲ್ಲಾ ನಾಯಕರು ಮಾತನಾಡಿದ್ದಾರೆ. ಮತ್ತೆ ಕೇಳುತ್ತಾ ಹೋದರೆ ಹೇಗೆ? ಮಾನ್ಯ ರಮಾನಾಥ ರೈರವರೆ ತಾವು ಏನು ಕೇಳುತ್ತೀರೊ ಕೇಳಿ.

ಶ್ರೀ ಪ್ರಕಾಶ್ ಹುಕ್ಕೇರಿ:- ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಗಮನ ಸೆಳೆಯುವ ಸೂಚನೆ ಮತ್ತು ಇನ್ನೂ ಬೇರೆ ಬೇರೆ ರೂಪಗಳಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಈಗ ಎಲ್ಲರೂ ಮಾತನಾಡುವುದಕ್ಕೆ ಆಗುತ್ತದೆಯೆ? ಎಲ್ಲಾ ಸದಸ್ಯರು ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ಮುಂದಿನ ಲೋಕಸಭೆಯ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸದಾಗಿ ಬಾರ್‌ಗಳನ್ನು ಪ್ರಾರಂಭ ಮಾಡುವುದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು:- ಮಾನ್ಯ ಬಾಲಕೃಷ್ಣರವರೆ, ಎಲ್ಲದಕ್ಕೂ ಒಂದೊಂದು ಅರ್ಥ ಮಾಡಲು ಹೋಗಬೇಡಿ. ಬೇಡ ಎಂದರು ಕೇಳುವುದಿಲ್ಲ ಮತ್ತೆ ಕೇಳಿ ಎಂದು ಅವಕಾಶ ಕೊಟ್ಟರೆ ಮತ್ತೆ ಚರ್ಚೆ ಮಾಡುತ್ತೀರಿ. ಇದ್ಯಾವುದು ಸಮಾಧಾನವಾದದ್ದಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಬೆಂಗಳೂರು ಸುತ್ತ ಮುತ್ತ ಸ್ಯಾಟಲೈಟ್ ಟೌನ್‌ಗಳ ಬಗ್ಗೆ ತೀರ್ಮಾನ ತೆಗೆದುಕೊಂಡಿರತಕ್ಕಂಥದ್ದರ ಬಗ್ಗೆ ಈಗಾಗಲೇ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಆ stellite townನಲ್ಲಿ ಜಮೀನನ್ನು ಈಗಾಗಲೇ ಗುರ್ತಿಸಿದ್ದಾರೆ. ಅವರುಗಳನ್ನು ವ್ಯವಸಾಯ ಮಾಡುವುದಕ್ಕೂ ಬಿಡುತ್ತಿಲ್ಲ ಅಥವಾ township ಮಾಡುವುದಕ್ಕೂ ಅವಕಾಶವಿಲ್ಲ.

ಅಧ್ಯಕ್ಷರು: ನೀವು ಸ್ಪಷ್ಟೀಕರಣ ಕೇಳಬೇಕು. ಮತ್ತೆ ನೀವು ಹೊಸ subject ತರುತ್ತಿದ್ದೀರಿ. ಹೊಸ ಹೊಸ subjects ತರಬೇಡಿ. ನೋಡಿ, ಬಜೆಟ್ ಮೇಲೆ ಏನು discussion ಆಗಿತ್ತು, ಮತ್ತು ಅವರು ಏನು reply ಕೊಟ್ಟಿದ್ದಾರೆ, ಅದರ ಬಗ್ಗೆ ಸ್ಪಷ್ಟೀಕರಣ ಕೇಳಿ. ಈ ರೀತಿ ಕೇಳಿದರೆ ನಾನು allow ಮಾಡುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ನಾನು ಎರಡೇ ಸ್ಪಷ್ಟೀಕರಣಗಳನ್ನು ಕೇಳುತ್ತಿದ್ದೇನೆ. ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೆ ಎಂದು ಕೇಳುತ್ತಿದ್ದೇನೆ. ಇನ್ನು ಎರಡನೆಯದು, ಸುವರ್ಣ ಗ್ರಾಮ ಯೋಜನೆ ಕುರಿತು. ಕಳೆದ ಬಾರಿ ಏನಿತ್ತು, ಅಷ್ಟನ್ನೇ ಮಾಡಿದ್ದಾರೆ. ಇನ್ನು 50 ಕೋಟಿ ಕಡಿಮೆ ಮಾಡಿದ್ದಾರೆ. ಗ್ರಾಮಾಂತರ ಮತ್ತು ನಗರ ಪ್ರದೇಶಗಳನ್ನು ಒಂದುಗೂಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಹೇಳಿರುವುದರಿಂದ,ಇನ್ನು ಹೊಸದಾಗಿ 1,000 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಾರೆಯೇ? ದಯಮಾಡಿ ಹೇಳಬೇಕು. ಮೂರನೆಯದಾಗಿ, ಎಲ್ಲರಿಗೂ ಗ್ರಾಂಟ್ ಕೊಟ್ಟುಕೊಂಡು ಬಂದಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಾರಿ ಮಾಗಡಿಯಲ್ಲಿ ಕೆಂಪೇಗೌಡ ಕೋಟೆ ನಿರ್ಮಿಸುವುದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಇದರಿಂದ ಅರ್ಧಕ್ಕೆ ಕೆಲಸ ನಿಲ್ಲುತ್ತದೆ. ದಯಮಾಡಿ ಈ ಬಾರಿಯಾದರೂ 3 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅನುಕೂಲವಾಗುವುದರಿಂದ ಅದನ್ನು ಕೊಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಕೇಳಲು ತಮಗೆ ಅವಕಾಶ ನೀಡಬೇಕೆಂದು ಎದ್ದು ನಿಂತು ಒಕ್ಕೊರಲಿನಿಂದ ಕೂಗುತ್ತಿದ್ದರು.)

ಅಧ್ಯಕ್ಷರು: ಇನ್ನು ಸಾಕು, please. ಇದು ಮತ್ತೆ ವಿಧಾನ ಪರಿಷತ್ತಿಗೆ ಹೋಗಬೇಕು. ಇದರ ಮೇಲೆ ಮತ್ತೆ discussion ಮಾಡುವುದರಲ್ಲಿ ಅರ್ಥವಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. please.. please..ಇದಕ್ಕೆ ಅಂತ್ಯವೇ ಇಲ್ಲವೇ? ಎಲ್ಲರೂ ಸ್ಪಷ್ಟೀಕರಣ ಕೇಳಬೇಕೆಂದರೆ, ಇನ್ನೂ ಒಂದು ತಾಸು ಬೇಕಾಗುತ್ತದೆ. ಎಲ್ಲರಿಗೂ ಸ್ಪಷ್ಟೀಕರಣ ಕೇಳಲು ಅವಕಾಶ ಕಲ್ಪಿಸಿದರೆ ಪುನ: ಹೊಸ ಹೊಸ subjects ತೆಗೆಯುತ್ತಾರೆ. ಹುಕ್ಕೇರಿಯವರೆ, ತಾವು ಈಗ ಮಾತನಾಡಿ. ಒಂದೊಂದೇ ವಿಷಯಕ್ಕೆ ಸ್ಪಷ್ಟೀಕರಣ ಕೇಳಬೇಕು.

ಶ್ರೀ ಪ್ರಕಾಶ್ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಚಿಕ್ಕೋಡಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಗೆ ಹಣ ಒದಗಿಸಿರುವುದಕ್ಕೆ ಮೊದಲನೆಯದಾಗಿ ನಾನು ಇವತ್ತು ಅವರನ್ನು ಅಭಿನಂದಿಸುತ್ತೇನೆ. ಕುಡಿಯುವ ನೀರಿಗೆ ಬಹಳ ತೊಂದರೆ ಇತ್ತು ಮತ್ತು ಅತ್ಯಂತ ಅವಶ್ಯಕತೆಯೂ ಆಗಿತ್ತು. ನಾವು ನಿಮ್ಮಲ್ಲಿ ಮನವಿ ಮಾಡಿದ್ದೆವು. ಕುಡಿಯುವ ನೀರಿಗೋಸ್ಕರ 2 ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದ್ದೆವು. ಅದಕ್ಕೆ ಬಜೆಟ್‌ನಲ್ಲಿ ತಾವು ಮಂಜೂರು ಮಾಡಿರುವ ಸಲುವಾಗಿ ಇವತ್ತು ತಮಗೆ ಅಭಿನಂದನೆಗಳನ್ನು

ಸಲ್ಲಿಸುತ್ತಾ, ಇನ್ನೊಂದು ವಿಷಯವನ್ನು ತಮಗೆ ಹೇಳಬಯಸುತ್ತೇನೆ. ಪ್ರತಿ ವರ್ಷವೂ ಕೃಷ್ಣಾ ನದಿಗೆ ಮಹಾಪೂರ ಬರುವುದರಿಂದ ಕಲ್ಲೋಳ ಮತ್ತು ಯಡೂರು ಗ್ರಾಮಗಳ ಮಧ್ಯೆ ಒಂದು ಸೇತುವೆ ಆಗಬೇಕೆಂದು ಸಾಕಷ್ಟು ಸಲ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದೆವು. ಈಗ ಉತ್ತರದಲ್ಲಿ ಅಲ್ಲಿ ಸೇತುವೆಗೆ ಮಂಜೂರಾತಿ ನೀಡಬೇಕೆಂದು ದಯವಿಟ್ಟು ತಿಳಿಸಬೇಕು. ಇದರ ಬಗ್ಗೆ ಅಧ್ಯಕ್ಷರಾದ ತಮಗೂ ಕೂಡ ಗೊತ್ತಿರುವುದರಿಂದ, ಅಲ್ಲೊಂದು ಸೇತುವೆ ನಿರ್ಮಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ: ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದೇನೆಂದರೆ, ಈಗಾಗಲೇ ನೀರಾವರಿಗೆ ಹಣ ಕಡಿಮೆ ಮಾಡಿದ್ದೀರಿ. ನಾವು ಆತಂಕದಲ್ಲಿದ್ದೇವೆ. ನಮ್ಮ ಪಾಲಿಗೆ ಸೇರಬೇಕಾಗಿರುವ ಕೃಷ್ಣಾ ನದಿ ನೀರಿನ ಸಂಬಂಧ ನಾವು ಕಾಮಗಾರಿ ಕೈಗೊಳ್ಳದಿದ್ದರೆ ಹೇಗೆ ಸಾಧ್ಯವಾಗುತ್ತದೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಪಷ್ಟೀಕರಣ ನೀಡಬೇಕು. ಕೊನೆಗೆ, ಕೆಬಿಜೆಎನ್‌ಎಲ್‌ನಿಂದಾಗಲಿ, ಪ್ರೈವೇಟ್ borrowing ಮಾಡಲು ಅವರಿಗೆ ಪರವಾನಗಿ ಕೊಡಬೇಕು, ಬ್ಯಾಂಕ್ ಮುಖಾಂತರ ಇಲ್ಲವೇ ಬಾಂಡುಗಳ ಮುಖಾಂತರ borrowing ಮಾಡುವುದಕ್ಕಾದರೂ ಅವರಿಗೆ ಪರವಾನಗಿ ನೀಡಬೇಕು. ನಮಗೆ ಈಗ ದುಡ್ಡೇ ಇಲ್ಲ. ಎರಡನೇ ಹಂತದ ನೀರಾವರಿಗೆ ಈಗ ದುಡ್ಡೇ ಇಲ್ಲ. ಅದಕ್ಕೋಸ್ಕರ, ಅದನ್ನಾದರೂ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಾರೆಯೇ ಎಂದು ಅವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ರಮಾನಾಥ ರೈ: ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡುವ ಅವಕಾಶ ನಮಗೆ ಬರಲಿಲ್ಲ. ನಾನು ಬಹಳ ಮುಖ್ಯವಾಗಿ ನಮ್ಮ ಜಿಲ್ಲೆಯ ಬಗ್ಗೆ ಒಂದೆರಡು ವಿಚಾರಗಳನ್ನು ....

ಅಧ್ಯಕ್ಷರು: ತಾವು ಬಜೆಟ್ ಮೇಲೆ ಭಾಷಣ ಮಾಡುವುದು ಬೇಡ. ಸ್ಪಷ್ಟೀಕರಣ ಮಾತ್ರ ಕೇಳಿ.

ಶ್ರೀ ಬಿ.ರಮಾನಾಥ ರೈ: ಇಲ್ಲ, ನಾನು ಬಜೆಟ್ ಮೇಲೆ ಭಾಷಣ ಮಾಡುತ್ತಿಲ್ಲ. ನಮ್ಮ ಬಗ್ಗೆ ಏನು ಹೇಳುತ್ತಾರೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಜನರು ಬುದ್ಧಿವಂತರು, ನಿಮ್ಮಷ್ಟು ತಿಳಿದವರು ಯಾರೂ ಇಲ್ಲ, ನೀವು ಗಟ್ಟಿಗರು ಎಂದು ನಮಗೆ ಶಹಭಾಷ್‌ಗಿರಿ ಕೊಡುತ್ತಾರೆ. ಆದರೆ, ಬಜೆಟ್‌ನಲ್ಲಿ ಮುಖ್ಯವಾಗಿ ಜಿಲ್ಲೆಗೆ ಬೇಕಾಗಿರುವಂತಹ. ಏನು ಅವಶ್ಯಕತೆ ಇದೆ, ಅದನ್ನು ಪೂರೈಸತಕ್ಕಂಥ ಪ್ರಯತ್ನಗಳು ಕಡಿಮೆ ನಡೆಯುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮದು ಹೆಚ್ಚು ಮಳೆ ಬೀಳುವ ಒಂದು ಪ್ರದೇಶವಾಗಿದೆ. ಆದರೆ, ನಮ್ಮ ಜಿಲ್ಲೆಯ

ಭೌಗೋಳಿಕ ಲಕ್ಷಣವನ್ನು ಸರಿಯಾಗಿ ಹತ್ತಿರದಿಂದ ತಿಳಿದುಕೊಂಡಿರುವವರಿಗೆ ಗೊತ್ತಿದೆ. ನಮ್ಮಲ್ಲಿ ಅತಿವೃಷ್ಟಿ ಬರುತ್ತದೆ. ಅನಾವೃಷ್ಟಿಯ ಪರಿಣಾಮ ಕೂಡ ಇದೆ. ನೇತ್ರಾವತಿ ನದಿ ಹರಿಯುತ್ತಿದೆ. ಆ ನದಿ ಹರಿದು ಸಮುದ್ರ ಸೇರುತ್ತದೆ ಎನ್ನುವ ಮಾತು ಸತ್ಯವಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಏನಾಗುತ್ತದೆಂದರೆ, ಆ ನದಿ ನೀರು ಹರಿಯುವುದರಿಂದಾಗಿ ನಮ್ಮ ಮಣ್ಣಿನ ಗುಣ ಅನೇಕ....

ಅಧ್ಯಕ್ಷರು: ರಮಾನಾಥ ರೈರವರೆ, ಅದಕ್ಕೋಸ್ಕರ ನಾನು ಹೇಳುವುದು. ನೀವು ಸ್ಪಷ್ಟೀಕರಣ ಏನಾದರೂ ಕೇಳುವುದಿದ್ದರೆ, ಕೇಳಿ. ಮತ್ತೆ ಮುನಿಯಪ್ಪನವರು ಕೇಳುತ್ತಾರೆ. No, No. I will not allow. ಈಗ ಮಾನ್ಯ ನಾಡಗೌಡರು ಒಂದು ಸ್ಪಷ್ಟೀಕರಣ ಕೇಳಿದರು. ಆ ರೀತಿ ಕೇಳಿ.

ಶ್ರೀ ಬಿ.ರಮಾನಾಥ ರೈ: ನಮ್ಮಲ್ಲಿರುವ ನೇತ್ರಾವತಿ ನದಿಗೆ series of dams ನಿರ್ಮಿಸತಕ್ಕ ಕಾರ್ಯವನ್ನು ಈ ಸರ್ಕಾರ ಮಾಡಬೇಕೆಂಬ ನನ್ನ ವಿನಂತಿ ಇದೆ. ಏನೆಂದರೆ, ನದಿಗೆ 4–5 ಕಡೆ series of dams ನಿರ್ಮಿಸಿದರೆ ಅಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನವಾಗುತ್ತದೆ. ಇದರಿಂದ ನಮ್ಮಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ. ಬಹುಶಃ, ನೀರು ಹರಿದು ಸಮುದ್ರಕ್ಕೆ ಹೋಗುತ್ತದೆಂಬ ಮಾತನ್ನಷ್ಟೆ ಹೇಳುತ್ತಾರೆ. ಆದರೆ, ಆ ನದಿ ನೀರು ಬಾರದಿದ್ದರೆ, ನಮ್ಮ ಭೂಮಿ ಬರಡಾಗುತ್ತದೆ. ಅದಕ್ಕೋಸ್ಕರ, ನಮ್ಮಲ್ಲಿ ನೇತ್ರಾವತಿ ನದಿಗೆ series of dams ನಿರ್ಮಿಸಬೇಕು. 4–5 ಕಡೆಗಳಲ್ಲಿ series of dams ನಿರ್ಮಿಸಿದರೆ ಅಂತರ್ಜಲ ವೃದ್ಧಿಯಾಗುತ್ತದೆ. ಇದರಿಂದ ಕುಡಿಯುವುದಕ್ಕೆ ಮತ್ತು ಕೃಷಿಗೆ ಸಾಕಷ್ಟು ನೀರು ಒದಗಿಸಿಕೊಡಲು ಅನುಕೂಲವಾಗುತ್ತದೆ. ಆದ್ದರಿಂದ, ನದಿ ತಿರುವು ಯೋಜನೆಯಿಂದ ನಮಗೆ ಖಂಡಿತವಾಗಿಯೂ ತೊಂದರೆಯಾಗುತ್ತದೆಂಬ ಮಾತನ್ನು ಈ ಸದನದಲ್ಲಿ ಹೇಳಬೇಕಾಗುತದೆ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, ನಾನು ಹಣ ಕೇಳುತ್ತಿಲ್ಲ. ಮುಖ್ಯಮಂತ್ರಿಗೆ ನನ್ನದು ಒಂದೇ ಡಿಮ್ಯಾಂಡ್ ಇದೆ.

(ಕೆಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ತಮಗೆ ಮಾತನಾಡಲು ಅವಕಾಶ ನೀಡಬೇಕೆಂದು ಕೇಳುತ್ತಿದ್ದರು)

ಅಧ್ಯಕ್ಷರು: ಕುಳಿತುಕೊಳ್ಳಿ, ಕಾಯಿರಿ, ಸ್ವಲ್ಪ ತಾಳ್ಮೆ ಇರಲಿ, ನೋಡಿ ಈ ರೀತಿ ಮಾತನಾಡಬಾರದು. ಒಂದು ನಿಮಿಷ ಕುಳಿತುಕೊಳ್ಳಿ. ಬೇರೆಯವರು ಮಾತನಾಡುತ್ತಿದ್ದಾರೆ. ಮಧ್ಯದಲ್ಲಿ ಮಾತನಾಡಬಾರದು.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, wakf property ಸಾಕಷ್ಟು ರೀತಿಯಲ್ಲಿ encroach ಆಗಿದೆ. ತಮ್ಮ ಮುಖಾಂತರ ನನ್ನ ಒಂದೇ ಡಿಮ್ಯಾಂಡ್

ಏನೆಂದರೆ, ನಮ್ಮ ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದೇನೆ: ಯಾವ ತರಹ BDA ಮತ್ತು Corporation propertyಗಳನ್ನು protection ಮಾಡುವುದಕ್ಕೆ ಮತ್ತು remove ಮಾಡುವುದಕ್ಕೆ task force ರಚಿಸಿದ್ದಾರೋ, ಅದೇ ರೀತಿಯಲ್ಲಿ wakf propertyಗೆ ಸಂಬಂಧಿಸಿದಂತೆ ತಾವು ಒಂದು task force ರಚಿಸಬೇಕು. wakfಗೆ ಸೇರಿರುವ ಸುಮಾರು 132 properties are encroached. Even some of the properties are encroached by Government, Semi-Government, Private. ತಾವು ಇದಕ್ಕೋಸ್ಕರ ಒಂದು task force ರಚಿಸಿದರೆ ಒಳ್ಳೆಯದಾಗುತ್ತದೆ. ತಮ್ಮ ಮುಖಾಂತರ ಇದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುತ್ತಿದ್ದೇನೆ.

ಶ್ರೀ ಎನ್.ವೈ.ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಿರುವ ವಿಚಾರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಿಂದ ನೀರು ತರುವ ವಿಚಾರದಲ್ಲಿ ದಶಕಗಳಿಂದ ಈಗಾಗಲೇ ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಈ ವಿಚಾರದಲ್ಲಿ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ತಮಗೆ ಒಂದು calling attention ಕಳುಹಿಸಿಕೊಟ್ಟಿದ್ದೆ. ನಿನ್ನೆ ಅದು ಬಂದಿತ್ತು. ಕಾರಣಾಂತರಗಳಿಂದ ಅದು ಮುಂದಕ್ಕೆ ಹೋಯಿತು. ಈಗ ಮಾನ್ಯ ಈಶ್ವರಪ್ಪನವರು ಹಿಂದಿನ ಸಲ ಬಂದಂಥ ಸಂದರ್ಭದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಅದೇ ರೀತಿ ಮಾನ್ಯ ಮುಖ್ಯಮಂತ್ರಿಯವರಿಗೂ ಈ ಸಮಸ್ಯೆ ಬಗ್ಗೆ ಚೆನ್ನಾಗಿ ಗೊತ್ತಿರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ತಾನೇ ಬಜೆಟ್ ಭಾಷಣದಲ್ಲಿ 4,000 ಕೋಟಿ ರೂಪಾಯಿಗಳನ್ನು ನೀರಾವರಿಗೆ ತೆಗೆದಿರಿಸಿದ್ದೇವೆಂದು ಹೇಳುತ್ತಿದ್ದಿರಿ. ಭದ್ರಾ ಜಲಾಶಯ ಅಂದರೆ, ಚಿತ್ರದುರ್ಗ ಜಿಲ್ಲೆಗೆ ನೀರು ತರುವ ಈ ಯೋಜನೆಯಡಿ ಕೊಟ್ಟಿರುವ ಹಣವೆಷ್ಟು ಎಂದು ಹೇಳಿದರೆ ಅಷ್ಟೇ ಸಾಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಕೂಲಿ ಮಾಡುವ ಒಬ್ಬ ಮಗ ಕೂಡ ಇಂಜಿನಿಯರ್ ಆಗಬೇಕು. ಡಾಕ್ಟರ್ ಆಗಬೇಕೆಂದು ಏನು ಸಂಕಲ್ಪ ಇಟ್ಟುಕೊಂಡಿದ್ದಾರೆ, ಆ ಹಿನ್ನೆಲೆಯಲ್ಲಿ ಇವತ್ತು ನಿರ್ದೇಶಕರು ಸರ್ಕಾರಕ್ಕೆ 19 ಜಿಲ್ಲೆಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಬೇಕೆಂಬ ವರದಿಯನ್ನು ಸಲ್ಲಿಸಿದ್ದಾರೆ. ಈ ದಿಸೆಯಲ್ಲಿ ಆ ನಿರ್ಣಯವನ್ನು ಅವರು ಕೈಗೊಳ್ಳುತ್ತಾರೆಯೇ ಎಂಬ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಇನ್ನೊಂದು, ಕಾಲೇಜು ಮಟ್ಟದ ಹಾಸ್ಟೆಲ್‌ಗಳಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ 100 ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿದ್ದಾರೆ. ಅದನ್ನೂ ಕೂಡ ಪ್ರಾರಂಭಿಸುತ್ತಾರೆಯೇ ಎಂಬುದರ

ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಮತ್ತೊಂದು, ದಾಳಿಂಬೆ ವಿಚಾರದ ಬಗ್ಗೆ ಈಗ ಕೇಂದ್ರ ಸರ್ಕಾರದವರು....

ಅಧ್ಯಕ್ಷರು: ಆಗಲೇ ದಾಳಿಂಬೆ ಬಗ್ಗೆ ಮಾತನಾಡಿ ಎಂದರೆ ನೀವು ಮಾತನಾಡಲಿಲ್ಲ. ಈಗ ಮತ್ತೆ ಹೊಸದಾಗಿ ಚಾಲೂ ಮಾಡುತ್ತೀರಿ. ದಾಳಿಂಬೆ ಬಗ್ಗೆ ಬಜೆಟ್ ಮೇಲಿನ ಭಾಷಣದಲ್ಲಿ ಮಾತನಾಡಬಹುದಿತ್ತಲ್ಲವೇ? ಆಗ ಮಾತನಾಡದೆ ಇವತ್ತು ಹೊಸದಾಗಿ ಮಾತನಾಡುತ್ತಿದ್ದೀರಿ. ತಾವು ಹೊಸ ಹೊಸ subjects ತೆಗೆದರೆ ಅದು ಸ್ಪಷ್ಟೀಕರಣ ಆಗುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಆಯಿತು. ಹಿಂದುಳಿದ ಜಿಲ್ಲೆಯಾದ ಕೊಪ್ಪಳ ಜಿಲ್ಲೆಯಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ರಾಜ್ಯಾದ್ಯಂತ 100 ಹಾಸ್ಟೆಲ್‌ಗಳನ್ನು ಪ್ರಾರಂಭಿಸುತ್ತೀರಾ? ಹೇಗೆ?

ಶ್ರೀ ಸಿ.ಪುಟ್ಟರಂಗಶೆಟ್ಟಿ: ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ನೀಡುವಂತಹ ಸಂದರ್ಭದಲ್ಲಿ ನಾನು ಗಮನಿಸಿದಂತೆ ಎಲ್ಲಿಯೂ ಸಹ ಈ ರೀತಿ ಹಿಂದುಳಿದ ಜನಾಂಗದವರ ಬಗ್ಗೆ ಧ್ವನಿ ಸಹ ಎತ್ತಲಿಲ್ಲ. ಆ ಜನಾಂಗದವರು ಮಾಡಿದ ಅನ್ಯಾಯವಾದರೂ ಏನೆಂದು ಅವರನ್ನು ಕೇಳಬಯಸುತ್ತಿದ್ದೇನೆ. ಬಹುಶಃ, ಅವರು ಎಲ್ಲಾ ಜನಾಂಗದವರಿಗೂ ಸಮುದಾಯ ಭವನ ನಿರ್ಮಾಣಕ್ಕೆಂದು ಕೋಟಿಗಟ್ಟಳೆ ಹಣ ಕೊಟ್ಟಿದ್ದಾರೆ. ಬಹುಶಃ, ಈ ರಾಜ್ಯದಲ್ಲಿ ಉಪ್ಪಾರ ಜನಾಂಗದವರು ಸುಮಾರು 35ರಿಂದ 40 ಲಕ್ಷದಷ್ಟು ಜನಸಂಖ್ಯೆ ಇದ್ದು, ಇವರಿಗೆ ಎಲ್ಲಿಯೂ ಒಂದು ಕೋಟಿ ರೂಪಾಯಿಯನ್ನಾದರೂ ಕೊಟ್ಟು ಜಿಲ್ಲಾ ಮಟ್ಟದಲ್ಲಿ ಒಂದು ಸಮುದಾಯ ಭವನ ನಿರ್ಮಾಣ ಮಾಡಿಕೊಡುವ ವ್ಯವಸ್ಥೆಯನ್ನು ತಾವು ಮಾಡಿಕೊಡಲಿಲ್ಲ. ಬಹುಶಃ ಆ ಜನಾಂಗ ಇರತಕ್ಕಂತಹ 100 ರಲ್ಲಿ 80 ಭಾಗ ಏನು ಕೂಲಿಯಿಂದಲೆ ಹಳ್ಳಿಗಳಲ್ಲಿ ವಾಸ ಮಾಡತಕ್ಕಂತಹ ಜನಾಂಗ. ಈ ಹಿಂದುಳಿದ ಜನಾಂಗ ಇರತಕ್ಕಂತಹ ಕುಂಬಾರರು ಮತ್ತು ಕಂಬಾರರು....

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಸ್ಪಷ್ಟೀಕರಣ ಕೇಳುವುದಕ್ಕೆ ಬಯಸುವುದೇನೆಂದರೆ, ದಯವಿಟ್ಟು ನಗರದ ಶಾಲಾ ಮಕ್ಕಳು ಏನು ಪಾಪ ಮಾಡಿದ್ದರು? ಇಡೀ ರಾಜ್ಯದ ಶಾಲಾ ಮಕ್ಕಳಿಗೆ ಸೈಕಲ್ ಕೊಡುತ್ತೀರಿ, ಸೈಕಲ್‌ನಲ್ಲಿ ಪೇಪರ್ ಹಾಕಿ ಮಾರತಕ್ಕಂತಹ ನಗರದ ಮಕ್ಕಳಿಗೆ ದಯವಿಟ್ಟು ವಂಚನೆ ಮಾಡಬೇಡಿ. ನೀವು ಉತ್ತರ ಕೊಡುವಾಗ ಸ್ಪಷ್ಟೀಕರಣ ಮಾಡಬೇಕು. ಇನ್ನೊಂದು ಬಹಳ ಮುಖ್ಯವಾದ ವಿಷಯ ನಾವು ನಿಮ್ಮಿಂದ ಬಯಸುವುದು ಕನ್ನಡದಲ್ಲಿ ಒಂದು ಗಾದೆ ಇದೆ. "ಮಗ ಪಟ್ಟಕ್ಕೆ ಬರುವಷ್ಟರಲ್ಲಿ ಅಪ್ಪ ಚಟ್ಟಕ್ಕೆ ಹೋದ" ಎಂದು ಹಾಗೆ ಅಪ್ಪ ರಿಟೈರ್ಡ್ ಆಗುವಷ್ಟರಲ್ಲಿ

ಮಗನಿಗೆ ಏಜ್ ಬಾರ್ ಆಗುತ್ತದೆ. ಸರ್ಕಾರಿ ನೌಕರರಿಗೆ 55 ವರ್ಷ ವಯೋಮಿತಿ ಇದ್ದುದು 58 ಮಾಡಿದ್ದೇ ತಪ್ಪು. 58 ರಿಂದ 60 ಮಾಡಿದ್ದೀರಿ. ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಇದು ಯುವಜನ ವಿರೋಧಿ ನೀತಿ ಆಗುತ್ತದೆ. ದಯವಿಟ್ಟು ಇದನ್ನು ಪುನರ್ ಪರಿಶೀಲಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಯು.ಟಿ.ಖಾದರ್ (ಉಳ್ಳಾಲ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪೂರಕ ಬಜೆಟ್‌ನಲ್ಲಿ ಉಳ್ಳಾಲದ ಬಹು ಮುಖ್ಯ ಸಮಸ್ಯೆಯಾದ ನಮ್ಮ ಶಾಶ್ವತ ಕಡಲು ಕೊರೆತದ ಸಮಸ್ಯೆ ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ. ನಮ್ಮ ಕ್ಷೇತ್ರಕ್ಕೆ ಬಹಳಷ್ಟು ಅನ್ಯಾಯವಾಗಿದೆ ಎಂದು ಹೇಳುತ್ತಾ, ಬಜೆಟ್‌ನಲ್ಲಿ ಮಾತನಾಡುವ ಸಂದರ್ಭದಲ್ಲಿ ಕರಾವಳಿ ಜಿಲ್ಲೆ ಭಯೋತ್ಪಾದಕರ ತಾಣ ಎಂದು ಎಲ್ಲರಿಗೂ ಹೇಳುವಂತಹ ವ್ಯವಸ್ಥೆಯಾಗಿದೆ. ಇದನ್ನು ಹೇಳುವಂತಹ ಸಂದರ್ಭದಲ್ಲಿ ಅದನ್ನು ತಡೆಗಟ್ಟುವಂತಹ ಯಾವುದೇ ಕಾರ್ಯಕ್ರಮ ಇವತ್ತು ತಿಳಿಸಲಿಲ್ಲ. ಆದಕಾರಣ ಇವತ್ತು ಬಾಂಬನ್ನು ನಿಷ್ಕ್ರಿಯಗೊಳಿಸುವಂತಹ ಒಂದು ಘಟಕವನ್ನು ಪ್ರತಿ ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಯೋಗೇಶ್ ಭಟ್(ಮಂಗಳೂರು ನಗರ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಬಜೆಟ್ ಭಾಷಣಕ್ಕೆ ಅವಕಾಶ ಕೊಡಲಿಲ್ಲ. ಅವಕಾಶ ಕೊಡದೆ ಇದ್ದರೂ ವಿಶೇಷವಾಗಿ ಸಮಗ್ರ ಕರಾವಳಿ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಹತ್ತು ಹಲವು ಯೋಜನೆಗಳನ್ನು ಕರಾವಳಿ ಪ್ರದೇಶ ಕಟ್ಟುವುದಕ್ಕಾಗಿ ಮಾಡಿದ್ದಾರೆ.. ನಾನು ವಿಶೇಷವಾಗಿ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಹಿಂದಿನ ಯಾವ ಸರ್ಕಾರಗಳೂ ಕೊಡದಂತಹ ಕೊಡುಗೆಯನ್ನು ತಾವು ಕೊಟ್ಟಿದ್ದೀರಿ. ಬಹುಶಃ ಪಶ್ಚಿಮಾಭಿಮುಖವಾಗಿ ಏನು ಹೇಳಿದಿರಿ ಅದಕ್ಕೂ ಎರಡು ಕೋಟಿ ರೂ.ಗಳನ್ನು ಕೊಟ್ಟಿರುವುದನ್ನು ನಾನು ಅಭಿನಂದಿಸುತ್ತಿದ್ದೇನೆ. ನನ್ನ ಒಂದೇ ಒಂದು ಸಲಹೆ ಇದೆ. ವಿಶೇಷವಾಗಿ ಆಂತರಿಕ Gross Domestic Product ಸಂಬಂಧಪಟ್ಟಂತೆ 2,15,282 ಕೋಟಿಯಲ್ಲಿ, 60,000 ಕೋಟಿ ರೂ.ಗಳು ಚಿಲ್ಲರೆ ಸಾಲ ಇದೆ, 50% ವರೆಗೆ ನಮಗೆ ಸಾಲ ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆ. ಕನಿಷ್ಠ ಇದಕ್ಕೆ ಸಂಬಂಧಪಟ್ಟ ಇನ್ನು 40,000 ಕೋಟಿ ರೂ.ಗಳನ್ನು ಸಾಲ ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. ಈ ನೀರಾವರಿ ಯೋಜನೆ ಮತ್ತೆ ವಿದ್ಯುತ್ ಯೋಜನೆಗಳು 5,000 ಮೆ.ವ್ಯಾ. ಉತ್ಪಾದನೆಗೆ ಸಾಲ ಆದರೂ ಮಾಡಿ ಅದನ್ನು ತ್ವರಿತವಾಗಿ ಮಾಡುವ ದಿಟ್ಟ ನಿರ್ಧಾರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಪಿ.ಅಟ್ಟೂರು (ಬಸವಕಲ್ಯಾಣ): ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ಬೀದರ್ ಜಿಲ್ಲೆ

ಜನತೆ ಪರವಾಗಿ ಅಭಿನಂದಿಸುತ್ತೇನೆ. ಗುರು ಗೋವಿಂದಸಿಂಗ್‌ಜಿಯವರ ಜಯಂತ್ಯೋತ್ಸವಕ್ಕೂ ಕೂಡ 25 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ನಮ್ಮ ಸಮಗ್ರ ಬೀದರ್ ಜಿಲ್ಲೆ ಜನತೆ ಪರವಾಗಿ ಅವರಿಗೆ ಅಭಿನಂದಿಸುತ್ತೇನೆ. ಚುಲ್ಕಿನಾಲಾ ನೀರಾವರಿ ಯೋಜನೆ ನನ್ನ ಕ್ಷೇತ್ರಕ್ಕೆ ಬರುತ್ತಿದೆ. ಭೂಮಿ ಕಳೆದುಕೊಂಡ ರೈತರಿಗೆ ಬಹಳ ವರ್ಷಗಳಿಂದ ಪರಿಹಾರ ಧನ ಕೊಟ್ಟಿಲ್ಲ. ಸುಮಾರು 8 ರಿಂದ 10 ಕೋಟಿ ರೂ. ಪರಿಹಾರ ಧನ ಇದೆ. ಅವರು ಪರಿಹಾರ ಧನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ಪ್ರಕಾರವಾಗಿ ಬೀದರ್ ಪಶುವೈದ್ಯ ಯೂನಿವರ್ಸಿಟಿ ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಹಣದ ಕೊರತೆ ಇದೆ ಎಂದು ನನಗೆ ಮಾಹಿತಿ ಇದೆ. ಪಶುವೈದ್ಯ ಯೂನಿವರ್ಸಿಟಿಗೂ ಕೂಡ ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ನಾವು ಕೃಷ್ಣ ಬೇಸಿನ್‌ನಲ್ಲಿ ಬರುವವರು. ಕಾವೇರಿ ಬೇಸಿನ್‌ನಿಂದ ಕುಡಿಯುವ ನೀರು ತೆಗೆದುಕೊಳ್ಳಬೇಕು. ಮೊನ್ನೆ ನಾನು ಬಜೆಟ್ ಮೇಲೆ ಭಾಷಣ ಮಾಡುವಂತಹ ಸಂದರ್ಭದಲ್ಲಿ 300 ಗ್ರಾಮಗಳಲ್ಲಿ Fluoride ಅಂಶ ಇದೆ ಎಂದು ಹೇಳಿದ್ದೆ. ಕುಡಿಯುವ ನೀರಿಗೋಸ್ಕರ 2002ರಲ್ಲೇ ತಿಪಟೂರು ಮತ್ತು ಅರಸೀಕೆರೆ ಸೇರಿ ಜಾಯಿಂಟ್ ಆಗಿ 23 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ಆಗಿತ್ತು. ಆದರೆ ಅದಾದ ನಂತರ Supreme Court ನ ಒಂದು ನಿಬಂಧನೆಗೊಳಪಟ್ಟು stay ಇದ್ದುದರಿಂದ ಅದು ಕಾರ್ಯಗತವಾಗಲಿಲ್ಲ. ಅಲ್ಲೆಲ್ಲ ಜನ ಮಾತನಾಡಿಕೊಳ್ಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಆ ಭಾಗದಲ್ಲಿ ಪಾದಯಾತ್ರೆ ಮಾಡಿದ್ದರು. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಆದರೆ ಈ ಹೊನ್ನವಳ್ಳಿಯಲ್ಲಿ ಏತನೀರಾವರಿ ಆಗುವುದು ಎಂದು ಹೇಳುತ್ತಿದ್ದರು. ಆದರೆ ಇವತ್ತು ಅದು ತಿಪಟೂರಿಗೆ ಮಾತ್ರ ಕುಡಿಯುವ ನೀರು ಕೊಡಬೇಕು. Flood ನೀರು ಎಂದು ಕೊಡುವುದಕ್ಕೆ ಬರುವುದಿಲ್ಲ. ಬೇಸಿನ್ ನಿಂದ ಬೇಸಿನ್‌ಗೆ ಛಾನಲ್‌ನಲ್ಲಿ ನೀರು ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ದಯಮಾಡಿ. ಆ ತಿಪಟೂರಿಗೆ ಕುಡಿಯುವ ನೀರಿಗಾಗಿ ಒಂದು ಕೋಟಿ ರೂ. ಎಂದು ಇಟ್ಟಿದ್ದಾರಲ್ಲಾ, ಅದು ಅರಸೀಕೆರೆ ತಾಲ್ಲೂಕಿಗೂ ಒಳಪಡುತ್ತೋ ಇಲ್ಲ ಬರೀ ತಿಪಟೂರಿಗೆ ಮಾತ್ರ ಎನ್ನುವುದನ್ನು ಈ ಸಂದರ್ಭದಲ್ಲಿ ನನಗೆ ಸ್ಪಷ್ಟೀಕರಣ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿ. ಸ್ಪಷ್ಟೀಕರಣ ಮುಗಿಯಿತು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ವಿಷಯಗಳನ್ನು ನಮ್ಮ ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಒಂದು ಈ ಮನೆಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ತಾವು ಏನೇನು ತಮ್ಮ ಕ್ಷೇತ್ರಗಳ ಬಗ್ಗೆ ಕೆಲವು ಪ್ರಮುಖವಾದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಇವೆಲ್ಲವೂ ದಾಖಲೆಗಳಲ್ಲಿಯೂ ಇದೆ, ನಮ್ಮ ಅಧಿಕಾರಿಗಳೂ ನೋಟ್ ಮಾಡಿಕೊಂಡಿದ್ದಾರೆ. ನಿಜ ನಾನು ಒಪ್ಪಿಕೊಳ್ಳುತ್ತೇನೆ. ಈ ಬಜೆಟ್ ಚರ್ಚೆ ಸಂದರ್ಭದಲ್ಲಿ ನನ್ನ ನನ್ನ ಅಪೇಕ್ಷೆ ಮತ್ತು ನಿಮ್ಮೆಲ್ಲರ ಆಸೆ ಇರುವಂತದ್ದು ಪ್ರತಿಯೊಬ್ಬ ಹೊಸ ಶಾಸಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು, ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ತಿಳಿಸಬೇಕು. ಅಧಿಕಾರಿಗಳು ಅದನ್ನು ಗಮನಿಸಬೇಕು, ಹಣಕಾಸಿನ ಇತಿಮಿತಿಯೊಳಗೆ ಅದು ಕಾರ್ಯರೂಪಕ್ಕೆ ಬರಬೇಕೆಂದು ನನ್ನ ಕಳಕಳ. ಯಾರ್‍ಯಾರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ ಆ ಕಡೆ ವಿಶೇಷವಾದ ಗಮನವನ್ನು ಕೊಟ್ಟು ಬಹಳ ಪ್ರಮುಖವಾದ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಹೊನ್ನವಳ್ಳಿ ಬಗ್ಗೆ ನಾನು ಪಾದಯಾತ್ರೆ ಮಾಡಿದ್ದೆ. ನೀವು ಹೇಳಬೇಕಾದರೆ ಅದು ನನ್ನ ಕಿವಿಗೆ ಬಿದ್ದಿದೆ. ನಿಮ್ಮೆಲ್ಲರ ಜೊತೆ ಸಮಾಲೋಚನೆ ಮಾಡಿ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಟ್ಟು ಕುಡಿಯುವ ನೀರಿಗೆ ಆದ್ಯತೆ ಕೊಡುವುದಕ್ಕೆ ಬದ್ಧನಾಗಿದ್ದೇನೆ. ಇದರ ಬಗ್ಗೆ ಯಾರೂ ಯೋಚನೆ ಮಾಡುವುದು ಬೇಡ. ಹಂತ ಹಂತವಾಗಿ ಕೆಲಸ ಮಾಡೋಣ. ನೀವು ಹೇಳುವುದರ ಕಡೆಗೆ ನಾನು ವಿಶೇಷವಾದ ಗಮನ ಕೊಡುತ್ತೇನೆ. ನಮ್ಮ ಪ್ರತಿಪಕ್ಷದ ನಾಯಕರು ಕೆಲವು ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡುವುದು ನನ್ನ ಪರಿಸ್ಥಿತಿಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಚುನಾವಣೆ ಮುಗಿಯಿತು. ಈ ನಾಡಿನ ಜನತೆಗೆ ನೀವು ಹೇಗೆ ಚುನಾವಣೆಯಲ್ಲಿ ಭರವಸೆ ಕೊಟ್ಟಿರಿ, ಅದೇ ರೀತಿ ನಾವೂ ಭರವಸೆ ಕೊಟ್ಟೆವು. ಆ ರೀತಿ ಭರವಸೆ ಕೊಟ್ಟಾಗ ಕೆಲವು ಪ್ರಮುಖ ವಿಷಯಗಳ ಬಗ್ಗೆ ನಾವು ಆದ್ಯತೆಯನ್ನು ಕೊಡಬೇಕಾಯಿತು, ಅದನ್ನು ಅನುಷ್ಠಾನಗೊಳಿಸುವ ಪ್ರಯತ್ನ ಮಾಡಬೇಕಾಯಿತು. ಹಣಕಾಸಿನ ಇತಿಮಿತಿಯಲ್ಲಿ ನಾನು ಆ ಕೆಲಸವನ್ನು ಮಾಡಬೇಕಾಗಿದೆ. ಉದಾಹರಣೆಗೆ ನೀರಾವರಿ ಬಗ್ಗೆ ಚರ್ಚೆ ಮಾಡಿದಿರಿ. ನೀರಾವರಿ ಯೋಜನೆಗಳ ಬಗ್ಗೆ ತಾವು ಚರ್ಚೆ ಮಾಡುವಂತಹ ಕಾಲದಲ್ಲಿ ಉಚಿತವಾಗಿ ಬೋರ್‌ವೆಲ್‌ಗೆ ನಾವು ವಿದ್ಯುತ್ತನ್ನು ಕೊಟ್ಟಿದ್ದೇವೆ. ಇದು ತಮಗೆ ಗೊತ್ತಿದೆ. 750 ಕೋಟಿ ರೂ. ಗಳ ಹೆಚ್ಚುವರಿ ಭಾರ ಬೀಳುತ್ತದೆ. ಸಣ್ಣ ರೈತರಿಗೆ ಒಂದೊಂದು ಸಾವಿರ ರೂ. ಪರಿಹಾರ ಕೊಡುತ್ತಿದ್ದೇವೆ. ಅದು 500 ಕೋಟಿ ರೂ. ಆಯಿತು. 500 ಮತ್ತು 750 ಕೋಟಿ. 1,250 ಕೋಟಿ ರೂ. ನೀರಾವರಿ ಯೋಜನೆಗೆ ರೈತರಿಗೆ ತಾನೆ

ನಾವು ಕೊಟ್ಟಿದ್ದೇವೆ. ಆದ್ದರಿಂದ ನಾನು ಇವತ್ತು ನಿಮಗೆ ಅಂಕಿ ಅಂಶ ಕೊಟ್ಟಿರುವಂಥದ್ದು ನಾನು ನಿಮಗೆ ತೃಪ್ತಿ ಪಡಿಸುವುದಕ್ಕಾಗಿ ಅಲ್ಲ. ಇದು ಸಾಲುವುದಿಲ್ಲ ಎಂದು ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಖರ್ಗೆಯವರು ಹೇಳಿರುವಂಥದ್ದು ನಿಜ. ಹಿರಿಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ನಿಮಗೆ ಏನು ಅಂಕಿ ಅಂಶ ಕೊಟ್ಟರೆ, 2004–05 ರಿಂದ 2008–09 ರವರೆಗೆ ನಾವು ಯಾವ ರೀತಿ ನೀರಾವರಿ ಯೋಜನೆಗಳ ಕಾಮಗಾರಿಗೆ ಕೊಟ್ಟುಕೊಂಡು ಬಂದಿದ್ದೇವೆ, ಅದನ್ನು ಸಾಲ ತೀರುವಳಿಗೆ ಕೊಟ್ಟಿದ್ದೇವೆಂದು ಮಾನ್ಯ ರೇವಣ್ಣನವರು ಪ್ರಶ್ನೆ ಮಾಡಿದರು. ಮಾನ್ಯ ರೇವಣ್ಣನವರೆ, 3,738 ಕೋಟಿ 36 ಲಕ್ಷ ನೇರವಾಗಿ ಕಾಮಗಾರಿಗೆ ಕೊಟ್ಟಿರುವಂತಹ ಹಣ. ಸಾಲ ತೀರುವಳಿಗೆ ಕೊಟ್ಟಿರುವುದು 663 ಕೋಟಿ ರೂ. ಅದು ಬೇರೆ. ಅದು ಸಾಲ ತೀರುವಳಿಗೆ 663 ಕೋಟಿ ರೂ. ನಾವು ಕೊಡುತ್ತಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ: 1,800 ಕೋಟಿ ರೂ. ಬಾಕಿ ಬಿಲ್ ಇದೆಯಲ್ಲ ಅದರ ಬಗ್ಗೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು): ಇದು ಒಂದು ಪ್ರಮುಖವಾದಂತಹ ಅಂಶ. ದಯಮಾಡಿ ನನಗೆ ಸಹಕಾರ ಕೊಡಿ. ಶಾಸಕರ ನಿಧಿ ಬಗ್ಗೆ ಎಲ್ಲರೂ ಕೇಳುತ್ತಿದ್ದಾರೆ. ನಿಮಗೆ ಹೇಗೆ ಕಳಕಳಿ ಇದೆಯೋ, ನನಗೂ ಹಾಗೆಯೇ ಕಳಕಳಿ ಇದೆ. ಈಗಾಗಲೇ 5–6 ತಿಂಗಳು ಕಳೆದು ಹೋಗಿದೆ. ತಾವು ಕೇಳುವುದಕ್ಕೆ ಮುಂಚೆಯೇ ನಾನು ಹೇಳಿದ್ದೇನೆ. ನಮ್ಮ ಪ್ರತಿಯೊಬ್ಬ ಶಾಸಕರೂ ಸಹ ಒಂದೂವರೆ ಕೋಟಿ ರೂ.ಗಳ estimate ಮಾಡಿಸಿ, ಕಳುಹಿಸಿ ಕೊಟ್ಟರೆ, ಈ ವರ್ಷದ ಮಾರ್ಚ್ ಕೊನೆಯೊಳಗಾಗಿ ನಿಮಗೆ ಕೊಟ್ಟಿರುವ 1 ಕೋಟಿ ರೂ.ಗಳು ಪೂರ್ಣ ಖರ್ಚಾಗಬೇಕು ಎಂದು ನನಗೆ ಆಸೆ ಇದೆ. ನಾನು 200 ಕೋಟಿ ರೂ.ಗಳನ್ನು ಇಟ್ಟಿದ್ದೇನೆ, ನಿಜ. ನಾನು ಪೂರಕ ಅಂದಾಜಿನಲ್ಲಿ ಉಳಿದ ಹಣವನ್ನೂ ಕೊಡುತ್ತೇನೆ. ಯಾರ್ಯಾರು ನೀವು ಅದನ್ನು ಸವಾಲಾಗಿ ಸ್ವೀಕಾರ ಮಾಡಿ, ಆದಷ್ಟು ಬೇಗನೆ ನೀವು ಒಂದೂವರೆ ಕೋಟಿ ರೂ.ಗಳಿಗೆ estimate ಮಾಡಿಸಿ, ಕಳುಹಿಸಿಕೊಟ್ಟು, ...

ಶ್ರೀ ಸಿದ್ದರಾಮಯ್ಯ:– ಮಾನ್ಯ ಯಡಿಯೂರಪ್ಪನವರೆ, ನೇರವಾಗಿ ಎಷ್ಟು ಕೊಡುತ್ತೇನೆಂದು ಹೇಳಿಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– 1 ಕೋಟಿ ರೂ.ಗಳನ್ನು ಕೊಡುತ್ತೇನೆ ಸಾರ್.

ಶ್ರೀ ಸಿದ್ದರಾಮಯ್ಯ:- ಈ ವರ್ಷಕ್ಕೆ ಒಂದೂವರೆ ಕೋಟಿ ರೂ.ಗಳನ್ನು ಕೊಡುತ್ತೀರಾ? ಅಥವಾ 2 ಕೋಟಿ ರೂ.ಗಳನ್ನು ಕೊಡುತ್ತೀರಾ ಎಂಬುದನ್ನು ನೇರವಾಗಿ ಹೇಳಿಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೇರವಾಗಿಯೇ ನಾನು ಹೇಳಿಬಿಡುತ್ತೇನೆ. ಈ ವರ್ಷಕ್ಕೆ ನಾನು 1 ಕೋಟಿ ರೂ.ಗಳನ್ನು ಮಾತ್ರ ಕೊಡುತ್ತಿದ್ದೇನೆ. ಅದಕ್ಕಾಗಿ ತೆಗೆದಿಟ್ಟಿರುವುದು 200 ಕೋಟಿ ರೂ.ಗಳು ಪೂರಕ ಅಂದಾಜಿನಲ್ಲಿ ಉಳಿದಂತಹ ಹಣವನ್ನು ನಾನು ಜೋಡಿಸಬೇಕಾಗಿದೆ. ನಾನೇ ಏಕೆ ಒಂದೂವರೆ ಕೋಟಿ ರೂ.ಗಳಿಗೆ estimate ಮಾಡಿಸಿ ಎಂದು ಹೇಳುತ್ತಿದ್ದೇನೆ ಎಂದರೆ, ನೀವು estimate ಮಾಡಿಸಿ, work ಪ್ರಾರಂಭ ಮಾಡಿ ಮಾರ್ಚ್ ಒಳಗಡೆ 60-70 ಲಕ್ಷ ರೂ.ಗಳನ್ನೂ ಸಹ ಈಗಿರುವಂತಹ ವ್ಯವಸ್ಥೆಯಲ್ಲಿ ಖರ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಈಗಲೇ 6 ತಿಂಗಳೊಳಗಾಗಿ ನಿಮಗೆ 1 ಕೋಟಿ ರೂ.ಗಳ ಕೆಲಸವನ್ನೇನು ಕೊಟ್ಟಿದ್ದೇನೆ, ಅದನ್ನು ಪೂರ್ಣ ಮಾಡಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅದಕ್ಕೋಸ್ಕರ proposals ಒಂದೂವರೆ ಕೋಟಿ ರೂ.ಗಳಿಗೆ ಕೊಡಿ, 1 ಕೋಟಿ ರೂ.ಗಳನ್ನು ಮಾತ್ರ ನಾವು ಖರ್ಚು ಮಾಡುತ್ತೇವೆ. ಇನ್ನೊಂದು ಬಹಳ ಪ್ರಮುಖವಾದ ಅಂಶವೊಂದನ್ನು ನೀವು ಕೇಳಿದ್ದೀರಿ. ಮಾರ್ಕೆಟಿಂಗ್ ಫೆಡರೇಷನ್ ರಸಗೊಬ್ಬರ ಖರೀದಿ ಬಗ್ಗೆ ತಾವು ಕೇಳಿದ್ದೀರಿ. ನಾನು ಅವರ ಜೊತೆಗೆ ಮಾತನಾಡಿದ್ದೇನೆ. ಇಲ್ಲೇ ಮಾರ್ಕೆಟಿಂಗ್ ಫೆಡರೇಷನ್‌ನವರು ನನ್ನ ಎದುರುಗಡೆಯೇ ಕುಳಿತಿದ್ದೀರಿ. ನಾನು ಪತ್ರ ಬರೆದು, ಅವರನ್ನು ಕರೆಸಿ, ನಾವು ಮತ್ತು ನಮ್ಮ ಅಧಿಕಾರಿಗಳೆಲ್ಲಾ ಮಾತನಾಡಿದೆವು. ಅವರಿಗೆ 25 ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು, ಅದನ್ನು ಪೂರ್ಣ ಕೊಟ್ಟಿದ್ದೇವೆ. ಅದಾದ ಮೇಲೆ, ನೀವು ನಮಗೆ ಇನ್ನೂ ಎಷ್ಟು ಗೊಬ್ಬರವನ್ನು ಖರೀದಿ ಮಾಡಿ ಕೊಡಬಹುದು ಎನ್ನುವ ಪ್ರಶ್ನೆಯನ್ನು ನಾನು ಅವರಿಗೆ ಕೇಳಿದೆ. ಅವರು ಒಟ್ಟು 150 ಕೋಟಿ ರೂ.ಗಳು ಸಾಕು, 25 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ, 150 ಕೋಟಿ ರೂ.ಗಳನ್ನು ನಮಗೆ ಕೊಡಿ ಸಾಕು ಎಂದರು. State Bank of Mysore ನವರನ್ನು ಮತ್ತು ಇವರನ್ನು ಎದುರು ಬದಿರು ಕರೆಸಿ, ಮಾತನಾಡಿ, ಅಷ್ಟಕ್ಕೂ ಅವರು order ಅನ್ನು issue ಮಾಡಿದ್ದಾರೆ. ನಾಳೆ ಅಥವಾ ನಾಡಿದ್ದರೊಳಗೆ ನಾವು ದುಡ್ಡನ್ನು ಕೊಡಲಿಕ್ಕೆ ಸಿದ್ದರಿದ್ದೇವೆಂದು ಹೇಳಿದ್ದಾರೆ. ಇನ್ನು 3-4 ತಿಂಗಳು ಕಾಯುವುದು ಬೇಕಿಲ್ಲ. ಬಡ್ಡಿ ನಾವು ಭರಿಸುತ್ತೇವೆಂದು ಹೇಳಿದ್ದೇವೆ. ಅವರು ದುಡ್ಡನ್ನು ತೆಗೆದುಕೊಂಡು, 150ಕೋಟಿ ರೂ.ಗಳ ....

ಶ್ರೀ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ...

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಈ ರೀತಿಯಾದರೆ ನನಗೆ ಉತ್ತರ ಕೊಡಲು ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು:- ಅವರು ಮಾಡುತ್ತೇವೆ ಎಂದು ಹೇಳಿದರೂ ನಿಮಗೆ ಸಮಾಧಾನವಿಲ್ಲವೆ

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ? ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಏನಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ ಏನೇನು ಕೊಟ್ಟಿದ್ದಾರೆ, ಈ ವರ್ಷ ನಾವು ಏನು ಕೊಟ್ಟಿದ್ದೇವೆ ಎಂಬುದನ್ನು ಹೇಳಿದ್ದೇನೆ. ಸ್ವಾಮಿ, ನಾನು ನಿಮ್ಮನ್ನೇ ಕೇಳುತ್ತೇನೆ, ನಾನು ಎಲ್ಲಿಂದ ಹಣ ತರಲಿ? ನಿಜ, ಇವತ್ತು ನಾನು ಘೋಷಣೆ ಮಾಡಿದಂತಹ ಕಾರ್ಯಕ್ರಮಗಳಿಗೆ 40–50 ಕೋಟಿ ರೂ.ಗಳನ್ನು 'ಯಡಿಯೂರಪ್ಪನವರೆ, ನೀವು ದಾನ ಮಾಡಿಬಿಟ್ಟಿರಿ' ಎನ್ನುತ್ತೀರಿ. ಎಲ್ಲಾ ಶಾಸಕರೂ ಹೇಳಿದಂತಹ ಪ್ರಕಾರ ಅಲ್ಲೊಂದು ಕೋಟಿ , ಇಲ್ಲೊಂದು ಕೋಟಿ ಕೊಟ್ಟಿರಬಹುದು, OK. ಆದರೆ ನಾನು ಕೇಳುವಂಥದ್ದು, ನಮ್ಮ ಸೀಮಿತ ಹಣಕಾಸಿನ ಇತಿಮಿತಿಯಲ್ಲಿ ಇಷ್ಟೊಂದು concession ನಮ್ಮ ರಾಜ್ಯದ ರೈತರಿಗೆ, 1 ಸಾವಿರ ರೂ. ಪ್ರತಿಯೊಬ್ಬ ಸಣ್ಣ ರೈತನಿಗೆ, ರೈತನಿಗೆ ಉಚಿತವಾಗಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡುವಂಥಾದ್ದು, ಮತ್ತೆ ಸಾವಯವ ಕೃಷಿಗೆ ಅನುಕೂಲ ಮಾಡಿಕೊಡುತ್ತಿರುವುದು, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡಿದಾಗ, ನಾನು ಹಣವನ್ನು ಹೊಂದಿಸಿ ಒದಗಿಸಬೇಕಲ್ಲವೇ? ನಾನು ಹೇಳುವುದೇನೆಂದರೆ, ಈ ವರ್ಷ ಇರುವಂತಹ ಹಣವನ್ನು ಪೂರ್ಣ ಹಣವನ್ನು ಖರ್ಚು ಮಾಡುವುದಕ್ಕೆ ನೀವು ಏನೇನು ಯೋಚನೆ ಮಾಡಬೇಕೋ ಅದಕ್ಕೆ ನೀವು ಅವಕಾಶ ಮಾಡಿಕೊಡಿ. ನಾನು ಖಂಡಿತ ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇನೆ. ಪ್ರತಿಯೊಬ್ಬ ಶಾಸಕನಿಗೂ ನನ್ನ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿ, ಒಳ್ಳೆಯ ಹೆಸರು ತೆಗೆದುಕೊಂಡು ನಾನು ಮುಂದೆ ಬರಬೇಕು ಎನ್ನುವಂತಹ ಆಸೆ ಇರುತ್ತದೆ. ನೀವು ಮಾತನಾಡಿದ್ದೆಲ್ಲವನ್ನೂ ನಾನು ನೋಟ್ ಮಾಡಿಕೊಂಡಿದ್ದೇನೆ. ಪ್ರತಿಯೊಂದಕ್ಕೂ ನಾನು ಉತ್ತರ ಕೊಡದಿದ್ದರೂ ಸಹ, ನಿಶ್ಚಿತವಾಗಿ, ಕೆಲವರು bridgeಗಳನ್ನು ಕೇಳಿದ್ದೀರಿ, ಕೆಲವರು ಬೇರೆ ಬೇರೆ ಪ್ರಮುಖವಾದ ಕೆಲವು ವಿಷಯಗಳನ್ನು ಹೇಳಿದ್ದೀರಿ. ನಾನು ಎಲ್ಲವನ್ನೂ ಬರೆದುಕೊಂಡಿದ್ದೇನೆ.

ಶ್ರೀ ಸಿದ್ದರಾಮಯ್ಯ:- BPL unit system ಬಗ್ಗೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆಯಿತು ಸಾರ್, ಅದರ ಬಗ್ಗೆಯೂ ಹೇಳುತ್ತೇನೆ. ಪ್ರತಿಯೊಬ್ಬ ಬಡವನಿಗೆ BPL card ಕೊಡಬೇಕು, ಅದನ್ನು ನಾವು ಕೊಡುತ್ತೇವೆ. ಯಾವ ಕಾರಣಕ್ಕೂ ಸಹ ಬಡವನಿಗೆ ಅನ್ಯಾಯವಾಗುವುದಕ್ಕೆ

ಬಿಡುವುದಿಲ್ಲ. ಆದರೆ ಈಗೇನು ನಾವು ಹೇಳಿದೇವೆ, unit ಪ್ರಕಾರ ನಾವು ಮಾಡುವುದಕ್ಕೆ, ಹೆಚ್ಚು ಭಾರ ಹೊರುವಂತಹ ಸ್ಥಿತಿಯಲ್ಲಿ ನಾವಿಲ್ಲ. ಏಕೆಂದರೆ, ನಿಮಗೆ ಗೊತ್ತಿದೆ. 1 ಕೆ.ಜಿ. ಅಕ್ಕಿ ಬೆಲೆ ಮಾರ್ಕೆಟ್‌ನಲ್ಲಿ 25 ರೂ.ಗಳು ಇದೆ. ಈಗಿರುವ ಹಣಕಾಸಿನ ಇತಿಮಿತಿಯಲ್ಲಿ ಯಾವುದನ್ನೂ ನಾನು ಹೆಚ್ಚು ಮಾಡುವಂತಹ ಸ್ಥಿತಿಯಲ್ಲಿ ಇಲ್ಲ. ಇರುವುದನ್ನು ಸರಿಯಾದ ರೀತಿ .....

ಶ್ರೀ ಸಿದ್ದರಾಮಯ್ಯ:– ಅದು ಬಡವರ ಕಾರ್ಯಕ್ರಮ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಸಿದ್ದರಾಮಯ್ಯನವರೆ, ನಾನು ಅದಕ್ಕೆ ಎಲ್ಲಿಂದ ದುಡ್ಡು ತಂದು ಕೊಡಲಿ? ನಾನು ನಿಮ್ಮ ಜೊತೆಗೆ ಮಾತನಾಡುತ್ತೇನೆ. ಆಮೇಲೆ....

ಶ್ರೀ ಸಿದ್ದರಾಮಯ್ಯ:– ಹಣಕಾಸು ಖಾತೆಯನ್ನು ನನಗೆ ಕೊಡಿ, ನಾನು ಅದನ್ನು ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಸಾರ್, ಈಗ ದಯಮಾಡಿ ಬಜೆಟ್ ಅನ್ನು ಪಾಸ್ ಮಾಡಿಕೊಡಬೇಕೆಂದು ಕೋರುತ್ತೇನೆ.

"ದಿನಾಂಕ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ 1ರಿಂದ 28ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊಬಲಗೂ ಸೇರಿದಂತೆ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ"

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜನತಾದಳ (ಜಾತ್ಯತೀತ) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ದಿನಾಂಕ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ 1ರಿಂದ 28ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊಬಲಗೂ ಸೇರಿದಂತೆ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 39639.87 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 500.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 3 – ಆರ್ಥಿಕ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 509490.72 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1006.64 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 471921.49 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 112678.47 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 8 – ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ

ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 50821.68 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 274.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16681.74 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 966.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 26 – ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 41095.79 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 24 – ಇಂಧನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 243723.54 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 49600.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 5 – ಒಳಾಡಳಿತ ಮತ್ತು ಸಾರಿಗೆ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 209176.23 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40603.13 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 152110.81 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 231836.39 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 1 – ಕೃಷಿ ಮತ್ತು ತೋಟಗಾರಿಕೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 208324.98 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3764.87 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19537.31 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8008.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 06 – ಮೂಲಭೂತ ಸೌಕರ್ಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 332.07 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 49589.16 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 866846.21 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27628.80 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 14 – ಕಂದಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 171132.92 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8820.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30606.84 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 300.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 21 – ಜಲಸಂಪನ್ಮೂಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32205.35 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 442664.44 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 175952.81 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 159951.10 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 188429.69 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 45793.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 02 – ಪಶುಸಂಗೋಪನೆ ಮತ್ತು ಮೀನುಗಾರಿಕೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ ಮತ್ತು ಮೀನುಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 62304.83 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8184.00 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 27 – ಕಾನೂನು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26435.93 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6456.72 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 16– ವಸತಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 62411.99 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 38118.02 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 96411.68 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6400.00 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರೀಕ ಸರಬರಾಜು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ

68041.11 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1800.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 10 – ಸಮಾಜ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷಧಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 150193.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 29623.78 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 9 – ಸಹಕಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54620.28 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1300.85 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 136285.64 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10519.15 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2874.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3037.14 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"